ಗಾಂಧೀ ಮಗಳು

ಶಾಂತಾದೇವಿ ಕಣವಿ

ಧಾರವಾಡ ಮಹಿಳಾ ಸಾಹಿತ್ಯ
ನವನಗರ-ಹುಬ್ಬಳ್ಳಿ

ಗಾಂಧೀ ಮಗಳು

ಶಾಂತಾದೇವಿ ಕಣವಿ

ಸೌ। ವಿಶಾಖಾ, ಕರುಣಾಪ್ರಸಾದರಿಗೆ
ಪ್ರೀತಿಯಿಂದ
— ಅವ್ವ.
೨೯-೩-೯೮.

ಮಹಿಳಾ ಸಾಹಿತ್ಯಿಕಾ
ನವನಗರ, ಹುಬ್ಬಳ್ಳಿ

GANDHI MAGALU : A collection of short stories
by **Shantadevi Kanavi,**
'Chembelaku', Kalyananagar, Dharwad - 580 007
Published by Mahila Sahityika, Navanagar, Hubli
First Edition Dec. 1997 Pages : viii + 120
Price : Rs. 30/- Copies : 1000

ಗಾಂಧೀ ಮಗಳು : ಶಾಂತಾದೇವಿ ಕಣವಿ
'ಚೆಂಬೆಳಕು', ಕಲ್ಯಾಣನಗರ, ಧಾರವಾಡ

ಪುಟಗಳು : viii + ೧೨೦

ಪ್ರಥಮ ಆವೃತ್ತಿ : ೧೯೯೭ ೧೦೦೦ ಪ್ರತಿಗಳು

ಬೆಲೆ : ೩೦ ರೂ.

ಪ್ರಕಾಶಕರು : ಮಹಿಳಾ ಸಾಹಿತ್ಯಿಕಾ
ನವನಗರ, ಹುಬ್ಬಳ್ಳಿ

ಸಲಹಾ ಸಮಿತಿ : ಡಾ॥ ವಿಜಯಾ ದಬ್ಬೆ (ಸಾಹಿತ್ಯ ಸಲಹೆ)
ಡಾ॥ ಮಧು ವೆಂಕಾರೆಡ್ಡಿ ,,
ಡಾ॥ ವಿಜಯಶ್ರೀ ಸಬರದ ,,
ಹನುಮಾಕ್ಷಿ ಗೋಗಿ (ಸಾಹಿತ್ಯ ನಿರ್ದೇಶನ)
ಜಿ. ನಾಗವೇಣಿ (ಅರ್ಥ ನಿರ್ವಹಣೆ)

ಮುದ್ರಕರು :
ರವೀಂದ್ರ ಆಕಳವಾಡಿ
ಸೋಮಗಿರಿ ಇಂಡಸ್ಟ್ರೀಜ, ಧಾರವಾಡ

ಪ್ರಕಾಶಕರ ನುಡಿ

ಮಹಿಳಾ ಸಾಹಿತ್ಯದ ಅಧ್ಯಯನ, ಪ್ರಕಾಶನಗಳಿಗೆ ಮೀಸಲಾದ ಸಂಸ್ಥೆಯಾಗಿ ಮೊದಲ ಹೆಜ್ಜೆಗಳನ್ನಿಡುತ್ತಲಿದೆ "ಮಹಿಳಾ ಸಾಹಿತ್ಯಿಕಾ". ಕನ್ನಡದ ಎಲ್ಲ ಲೇಖಕಿಯರ ಎಲ್ಲ ಸಾಹಿತ್ಯ ಪ್ರಕಾರಗಳಿಗೆ ಧ್ವನಿಯಾಗುವ ಮಹದಾಕಾಂಕ್ಷೆಯನ್ನು ಹೊಂದಿದ ಈ ಸಂಸ್ಥೆ, ಲೇಖಕಿಯರ ಸಾಹಿತ್ಯವನ್ನು ಪ್ರಕಾಶಕಿಯರೇ ಪ್ರಕಟಿಸುವ ವಿನೂತನ ಯೋಜನೆಯನ್ನು ಹೊಂದಿದೆ. ಸ್ತ್ರೀವಾದಿ ಚಿಂತನೆ ಕ್ರಿಯಾರೂಪ ಸಾಧಿಸಲು ಇದು ಪ್ರಬಲಶಕ್ತಿಯಾಗಿ ಬೆಳೆಯುವ ಸಂಕಲ್ಪವನ್ನು ಹೊಂದಿದೆ.

"ಮಹಿಳಾ ಸಾಹಿತ್ಯಿಕಾ" ಮುಂಬರುವ ವರ್ಷಗಳಲ್ಲಿ ಮಹಿಳೆಯರಿಂದ ರಚಿತಗೊಂಡ ಸೃಜನ–ವಿಮರ್ಶನ–ಸಂಶೋಧನ–ಅನುವಾದ–ಪ್ರವಾಸ–ಆಕರ ಇತ್ಯಾದಿ ಎಲ್ಲಂದದ ಮೌಲಿಕ ಸಾಹಿತ್ಯವನ್ನು ಪ್ರಕಟಿಸುತ್ತದೆ. ಪ್ರಾರಂಭದಲ್ಲಿ ವರ್ಷಕ್ಕೆ ಸಾವಿರ ಪುಟಗಳಷ್ಟು ಸಾಹಿತ್ಯವನ್ನು ಪ್ರಕಟಿಸುವ, ನಂತರದ ಅವಧಿಯಲ್ಲಿ ಪುಟಸಂಖ್ಯೆಯನ್ನು, ಪುಸ್ತಕ ಸಂಖ್ಯೆಯನ್ನು ಹೆಚ್ಚಿಸುತ್ತ ಹೋಗುವ ಇಚ್ಛೆ ಸಂಸ್ಥೆಗಿದೆ.

'ಮಹಿಳಾ ಸಾಹಿತ್ಯಿಕಾ' ಸಂಸ್ಥೆಯ ಹದಿನಾಲ್ಕನೆಯ ಕೃತಿಯಾಗಿ ಹೊರಬರುತ್ತಲಿದೆ 'ಗಾಂಧೀ ಮಗಳು' ಕಥಾಸಂಕಲನ.

ಕನ್ನಡದ ಹಿರಿಯ ತಲೆಮಾರಿನ ಖ್ಯಾತ ಕಥೆಗಾರ್ತಿ ಶ್ರೀಮತಿ ಶಾಂತಾದೇವಿ ಕಣವಿ ಅವರು. ಕಂಡ, ಕೇಳಿದ, ಅನುಭವಿಸಿದ ಘಟನೆಗಳನ್ನು ಕಥೆಗಳನ್ನಾಗಿಸುವ ಅವರ ಪರಿ ವಿಸ್ಮಯಕಾರಿ. ಸಾಮಾನ್ಯ ಘಟನೆಗಳಿಗೆ ತಿರುವುಗಳನ್ನು ನೀಡಿ ಕಲಾತ್ಮಕವಾಗಿಸುವ ರೀತಿ, ಪಾತ್ರಗಳನ್ನು ಸಜೀವವೆನ್ನುವಂತೆ ಚಿತ್ರಿಸುವ ವೈಖರಿ ಅನನ್ಯ. ಕೀರ್ತಿಕಾಮನೆಯಿಂದ ತುಂಬ ತುಂಬ ದೂರ ಸರಿಯುವ ಅವರು ಕನ್ನಡದ ಅಪರೂಪದ ಕಥೆಗಾರ್ತಿ. ತಮ್ಮ ಕೃತಿ 'ಗಾಂಧೀ ಮಗಳು' ಕಥಾ ಸಂಕಲನವನ್ನು ಪ್ರಕಟಿಸಲು ಅನುಮತಿ ನೀಡಿ

'ಮಹಿಳಾ ಸಾಹಿತ್ಯಿಕಾ'ದ ಗೌರವವನ್ನು ಹೆಚ್ಚಿಸಿದ್ದಾರೆ. ಕಾರಣ ಅವರಿಗೆ ಪ್ರಕಾಶನ ಸಂಸ್ಥೆಯ ಅನಂತ ಕೃತಜ್ಞತೆಗಳು.

'ಮಹಿಳಾ ಸಾಹಿತ್ಯಿಕಾ'ದ ಸಂಪೂರ್ಣ ರೂಪರೇಷೆಗಳನ್ನು ಹಾಕಿಕೊಟ್ಟು ಬೆನ್ನ ಹಿಂದಿನ ಬೆಳಕಾಗಿ ನಿಂತವರು, ಸ್ಫೂರ್ತಿಯ ನೆಲೆಯಾದವರು ವಿದ್ಯಾ ಗುರುಗಳಾದ ಡಾ॥ ಎಂ ಎಂ. ಕಲಬುರ್ಗಿಯವರು. ಅವರ ನಿರಂತರ ಪ್ರೇರಣೆ–ಚಾಲನೆಗಳೇ ನಮ್ಮನ್ನು ಮುನ್ನಡೆಸುತ್ತಲಿದೆ. "ಮಹಿಳಾ ಸಾಹಿತ್ಯಿಕಾ" ಪ್ರಕಾಶನ ಸಂಸ್ಥೆಗೆ ಸಾಹಿತ್ಯಿಕ ಸಲಹೆಗಾರರಾಗಿ ಸಹಕರಿಸಿದವರು ಡಾ॥ ವಿಜಯಾ ದಬ್ಬೆ, ಡಾ॥ ಮಧು ವೆಂಕಾರೆಡ್ಡಿ ಮತ್ತು ಡಾ॥ ವಿಜಯಶ್ರೀ ಸಬರದ ಅವರು ಈ ಪ್ರಯತ್ನಕ್ಕೆ ಸದಾಕಾಲ ಬೆನ್ನುತಟ್ಟಿ ಪ್ರೋತ್ಸಾಹಿಸಿದವರು ಡಾ॥ ಚೆನ್ನಕ್ಕ ಎಲಿಗಾರ, ಡಾ॥ ಮಲ್ಲಿಕಾ ಘಂಟಿ, ಡಾ॥ ಹೇಮಾ ಪಟ್ಟಣಶೆಟ್ಟಿ ಹಾಗೂ ಕುಸುಮ ಕರಾಳೆ ಆದಿಯಾಗಿ ಸಮಾನ ಆಸಕ್ತಿಯ ಕನ್ನಡ ಲೇಖಕಿಯರು. ಇವರಿಗೆಲ್ಲ 'ಮಹಿಳಾ ಸಾಹಿತ್ಯಿಕಾ' ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಕೃತಿಯನ್ನು ಅಂದವಾಗಿ ಮುದ್ರಿಸಿದ 'ಸೋಮಗಿರಿ ಇಂಡಸ್ಟ್ರೀಜ'ನ ಆಕಳವಾಡಿ ರವಿ–ಚಂದ್ರ ಸೋದರರನ್ನು, ಪ್ರಕಾಶನದ ಪ್ರಕಟನೆಗಳ ಮುಖ ಪುಟದ ಚೌಕಟ್ಟನ್ನು ಒದಗಿಸಿ, ಸಂಕೇತವನ್ನು ಚಿತ್ರಿಸಿದ ಕಲಾವಿದ ಗುರು ಅವರನ್ನು ಮಹಿಳಾ ಸಾಹಿತ್ಯಿಕಾ ಕೃತಜ್ಞತೆಯಿಂದ ಸ್ಮರಿಸುತ್ತದೆ.

ಕರ್ನಾಟಕದ ಹೆಮ್ಮೆಯ ಮಹಿಳಾ ಅಧ್ಯಯನ ಪ್ರಕಾಶನ ಸಂಸ್ಥೆಯಾಗ ಬೇಕೆಂದು ಬಯಸುವ 'ಮಹಿಳಾ ಸಾಹಿತ್ಯಿಕಾ' ನಾಡಿನ ಸಹೃದಯರೆಲ್ಲರ ಸಹಾಯ ಸಹಕಾರಗಳನ್ನು ಅಪೇಕ್ಷಿಸುತ್ತದೆ.

ಹುಬ್ಬಳ್ಳಿ
೧೦-೧೨-೧೯೯೭

ಹನುಮಾಕ್ಷಿ ಗೋಗಿ
ಸಾಹಿತ್ಯಿಕ ನಿರ್ದೇಶಕಿ

ನೆನಕೆ

'ನಿಲೀಮಾತೀರ' ಪ್ರಕಟವಾದ (೧೯೬೩) ನಂತರ ನಾಲ್ಕು ವರ್ಷಗಳಲ್ಲಿ ನಾನು ಬರೆದ ಹನ್ನೊಂದು ಕತೆಗಳನ್ನು ಈ ಸಂಕಲನ ಒಳಗೊಂಡಿದೆ. ಇವುಗಳನ್ನು ಈ ಮೊದಲು ಪ್ರಕಟಿಸಿದ 'ಸುಧಾ', 'ತರಂಗ', 'ಮಯೂರ' ಹಾಗೂ 'ಮುಂಬಯಿವಾಣಿ' (ವಿಶೇಷಾಂಕ) ಪತ್ರಿಕೆಗಳ ಸಂಪಾದಕರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಹುಬ್ಬಳ್ಳಿಯ 'ಮಹಿಳಾ ಸಾಹಿತ್ಯಿಕಾ' ಪ್ರಕಾಶನದ ಶ್ರೀಮತಿ ಹನುಮಾಕ್ಷಿ ಗೋಗಿಯವರು ಈ ಕೃತಿಯನ್ನು ತಮ್ಮ ಗ್ರಂಥಮಾಲೆಯಲ್ಲಿ ತರಲು ಮುಂದಾಗಿದ್ದಾರೆ. ಸಂಶೋಧನೆ ತಮ್ಮ ಮುಖ್ಯ ಕ್ಷೇತ್ರವಾಗಿದ್ದರೂ ಸೃಜನಾತ್ಮಕ ಕೃತಿಗಳ ಪ್ರಕಟಣೆಯಲ್ಲಿ ತಳೆದಿರುವ ಆಸ್ಥೆಗಾಗಿ ಅವರನ್ನು ಅಭಿನಂದಿಸುತ್ತೇನೆ.

ತಮ್ಮ ಅಭಿಪ್ರಾಯ ಪ್ರೋತ್ಸಾಹಗಳಿಂದ ನನ್ನ ಬರವಣಿಗೆಗೆ ಬೆಂಬಲವಾಗಿರುವ ಕವಿ ಕಣವಿಯವರು, ನನ್ನ ಅಪಾರ ಬಂಧುಗಳು, ಓದುಗರ ಬಳಗ ಇವರೆಲ್ಲರನ್ನು ಈ ಸಂದರ್ಭದಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಅಲ್ಪಾವಧಿಯಲ್ಲಿ ಈ ಸಂಗ್ರಹವನ್ನು ಅಂದವಾಗಿ ಮುದ್ರಿಸಿದ ಸೋಮಗಿರಿ ಇಂಡಸ್ಟ್ರೀಜದ ಶ್ರೀ ರವಿ ಆಕಳವಾಡಿಯವರಿಗೆ ನನ್ನ ವಂದನೆಗಳು.

ಧಾರವಾಡ
೨೦-೧೨-೧೯೮೭

ಶಾಂತಾದೇವಿ ಕಣವಿ

ಪರಿವಿಡಿ

೧. ಗಾಂಧೀ ಮಗಳು ... ೧

೨. ಕಾಣೆಯಾದವನು ... ೧೫

೩. ವಸುಂಧರಾ ... ೨೫

೪. ಹುಚ್ಚು ... ೩೫

೫. ಮರಕ್ಕಾ ಒಂದೀಟ ಪ್ರೀತಿ ಬೇಕಸ ... ೪೯

೬. ಮೇಣಬತ್ತಿ ... ೬೨

೭. ಅಪರಿಚಿತರೆ ? ... ೭೫

೮. ಜನರೇನು ಬಲ್ಲರು ಒಳಗಾಗೊ ಕೃತ್ಯವ ... ೮೩

೯. ಹಿಂಬಡದ ಗಾಯ ... ೯೪

೧೦. ಪ್ರೀತಿಯ ಸೆಲೆ ... ೧೦೫

೧೧. ತಾರಕ ... ೧೧೩

ಗಾಂಧೀ ಮಗಳು

ಮಕ್ಕಳಿಗೆ ಕೂಗಿ ಕೂಗಿ ಪಾಠ ಹೇಳಿ ಗಂಟಲು ನೋಯುತ್ತಿತ್ತು. ಹೊಟ್ಟೆ ರಕ ರಕ ಎನ್ನುತ್ತಿತ್ತು. ರೂಮಿಗೆ ಬಂದು ಡಬ್ಬಿ ತೆಗೆದ ದೇವಕಿ ಗಬ ಗಬ ತಿನ್ನತೊಡಗಿದಳು. ಉಳಿದ ಸಹೋದ್ಯೋಗಿಗಳೂ ಆಗಲೇ ಊಟ ಮಾಡುತ್ತಿದ್ದರು. ಊಟಕ್ಕೆ ಕುಳಿತಾಗ ಮೊದಲೆಲ್ಲ ತಂದದ್ದನ್ನು ಹಂಚಿಕೊಳ್ಳುವಷ್ಟು ಪ್ರೇಮವಿತ್ತು ಅವರಲ್ಲಿ. ಅವಳು ಬಂದ ಮೇಲೆ ಎಲ್ಲಿ ತನ್ನ ಊಟದಲ್ಲಿಯೂ ಪಾಲು ಕೂಡುತ್ತಾಳೋ ಎನ್ನುವ ಭಯದಿಂದ ಆ ಪ್ರೀತಿ ತನ್ನಷ್ಟಕ್ಕೆ ತಾನೆ ಮಾಯವಾಗಿತ್ತು, ಒಂದಿಷ್ಟೂ ಸುಳಿವು ಕೊಡದೆ. ಇದು ದೇವಕಿಗೇನೋ ದುಃಖದ ಸಂಗತಿ, ಆದರೆ ಅವಳಾದರೂ ತಾನೆ ಏನು ಮಾಡಬಲ್ಲಳು ? ಆ ಜಾತಿಯಲ್ಲಿ ಹುಟ್ಟಿದ್ದು ತನ್ನ ತಪ್ಪೇನಲ್ಲ, ಆ ಜಾತಿಯನ್ನು ಹುಟ್ಟಿಸಿದವರದ್ದೇ ತಪ್ಪು ಎನ್ನುವ ವಾದ ಅವಳದು. ಹಾಗೆಂದು ವಾದ ಬೆಳೆಸುವವಳೂ ಅವಳಲ್ಲ. ಅಷ್ಟೇ ಅಲ್ಲ, ಕೀಳರಿಮೆಯಿಂದ ಅವರ ಮುಂದೆ ಕುಗ್ಗಿ ನಡೆಯುವದು ದೌರ್ಬಲ್ಯವೆಂದುಕೊಂಡಿದ್ದಳು. ಅವರಾದರೂ ಊಟ ಉಡುಗೆಯ ವಿಷಯದಲ್ಲಿ ಅಷ್ಟು ಕಟ್ಟುನಿಟ್ಟಾದರೂ ಉಳಿದುದರಲ್ಲಿ ಸ್ನೇಹಿತೆಯರೇ.

"ದೇವಕೀ, ನಿಮ್ಮ ಸೀರಿ ಎಷ್ಟ ಛಂದ ಅದ, ಎಲ್ಲಿ ಕೊಂಡಿರಿ ?" ಎಂದು ಶ್ಯಾಮಲಾ ಕೇಳಿದರೆ–

"ದೇವಕೀ, ನಿಮಗ ಕರ್ರಗ ಮೊಣಕಾಲತನಾ ಉದ್ದ ಕೂದಲು ಅದಾವ, ಯಾವ ಎಣ್ಣೀ ಹಚ್ತೀರಿ ?" ಮಂದಾಕಿನಿ ವಿಚಾರಿಸುವಳು.

"ಶುದ್ಧ ನಾರಿಯಲ್ ತೇಲ್" ಎಂದು ಟಿ ವಿ. ಜಾಹೀರಾತಿನಂತೆ ಕಣ್ಣು ತಿರುಗಿಸುತ್ತ ದೇವಕಿ ಹೇಳುವಾಗ ಎಲ್ಲರೂ ನಕ್ಕುಬಿಡುವರು.

"ನಿಮ್ಮ ದನಿ ಕೋಗಿಲೆ ಹಾಂಗ ಎಷ್ಟ ಮಧುರ ಅದ ದೇವಕಿ. ಈ ಸಾರೆ ವಾರ್ಷಿಕೋತ್ಸವಕ ಮಕ್ಕಳಿಗೆ ಗ್ರೂಪ್‌ಸಾಂಗ್ ನೀವs ಕಲಸರಿ" ಎಂದು ಸರಿತಾ ಉಪಾಯವಾಗಿ ಹೊಣೆ ಹೊರಿಸುವಳು.

"ನಮ್ಮ ಶಾಲೆಯ ಲತಾ ಮಂಗೇಶಕರ ನಾನೇ" ಎಂದು ಅವರ ಪ್ರಶಂಸೆಯನ್ನು ನಗೆಯಲ್ಲಿ ತೇಲಿಸಿಬಿಡುವಳು ದೇವಕಿ–

ಆ ದಿನ ಶ್ಯಾಮಲಾಳ ಮುಖ ಬಾಡಿತ್ತು, ಕಣ್ಣು ಕೆಂಪಾಗಿತ್ತು. "ಯಾಕ್ರೀ ಶ್ಯಾಮಲಾ, ಏನಾಗೆದ ? ಆರಾಮ ಅದೀರಿಲ್ಲೊ ?" ದೇವಕಿಯ ಮೆತ್ತಗಿನ ದನಿಯಲ್ಲಿಯ ಪ್ರೀತಿ ಶ್ಯಾಮಲಾಳ ದುಃಖಕ್ಕೆ ಚಾಲನೆ ಕೊಟ್ಟಿತು.

ಏನೂ ಇಲ್ಲ ಎನ್ನುತ್ತಲೇ ಅಳುತ್ತ ಎಲ್ಲ ಹೇಳಿದಳು ಶ್ಯಾಮಲಾ. ಅವಳ ತಾಯಿಗೆ ಜಡ್ಡಾಗಿದೆ. ತಮ್ಮ, ಹಣಕ್ಕಾಗಿ ಪತ್ರ ಬರೆದಿದ್ದಾನೆ. ತಿಂಗಳಿಗೆ ಸಾವಿರಾರು ರೂಪಾಯಿ ಸಂಪಾದಿಸುವ ಗಂಡ ಹಣ ಕೊಡಲು ತಯಾರಿಲ್ಲ. ತವರಿನವರ ಕಷ್ಟಕ್ಕೆ ಸಹಾಯ ಮಾಡಬೇಕೆಂಬ ಮನಸ್ಸಿಗೆ ನೋವಾಗುತ್ತಿದೆ. ಗಂಡ ಇವಳ ಪೂರ್ತಿ ಸಂಬಳ ಬ್ಯಾಂಕಿಗೆ ಹಾಕುತ್ತಾನೆ. ತನ್ನ ಖರ್ಚಿಗೆ ಬೇಕಾದರೂ ಜಗಳ ಮಾಡಿ ಪಡೆಯಬೇಕು. ದೇವಕಿಗೆ ಆಶ್ಚರ್ಯ, ಸಿಟ್ಟು. ಅವಳು ದುಡಿದ ಹಣದ ಮೇಲೆ ಅವಳಿಗೆ ಹಕ್ಕಿಲ್ಲವೇ ? ಶ್ಯಾಮಲಾಳ ಗಂಡ ಜಿಪುಣ, ಮಂದಾಕಿನಿ ಗಂಡ ತವರುಮನೆಯಿಂದ ತಾ ಎಂದು ಬರೆ ಹಾಕ್ತಾನೆ. ಸರಿತಾನ ಅತ್ತೆ ಅವಳು ಬಂಜೆ ಎಂದು ಎಲ್ಲರೆದುರು ಹೀಯಾಳಿಸಿ, ಹಿಂಸೆ ಮಾಡ್ತಾಳೆ. ಎಂಥ ಹೆಂಗಸರಿವರು, ಎಷ್ಟೊಂದು ನೋವು ನುಂಗ್ತಾರೆ. ಮತ್ತೆ ತಮ್ಮ ಸಮಾನರು ಯಾರಿಲ್ಲ ಅಂತ ಸೊಕ್ಕು ಮಾಡ್ತಾರೆ. ಕಣ್ಣೀರಿನಲ್ಲಿ ಕೈ ತೊಳೀತಾರೆ. ಸಹಿಸಲಿಕ್ಕೆ ಆಗದಿದ್ದಾಗ ಜೀವಾ ಕೊಡ್ತಾರೆ. ಎದುರಿಸಿ ನಿಲ್ಲೋ ಅಷ್ಟು ಛಾತೀನೇ ಇಲ್ಲ ಇವರಲ್ಲಿ. ಕಲಿತವರೂ ಅಷ್ಟೇ, ಮೇಲ್ಜಾತಿಯವರಾದರೇನು, ನಮ್ಮವರಾದರೇನು ಒಬ್ಬೊಬ್ಬರದು ಒಂದೊಂದು ತರದ ದೌರ್ಬಲ್ಯ, ಮೂರ್ಖತನ, ಹೇಡಿಗಳು– ದೇವಕಿ ವಿಚಾರ ಮಾಡುತ್ತ ಕೈ ತೊಳೆಯಲು ಎದ್ದಾಗ ಕೋಣೆ ಖಾಲಿಯಾಗಿತ್ತು. ಮರುದಿನ ದೇವಕಿ ಶ್ಯಾಮಲಾಳಿಗೆ ನೂರು ರೂಪಾಯಿ ಕೊಟ್ಟಿದ್ದಳು. ಅವಳು ತಿರುಗಿ ಕೊಡ್ತಾಳೆ ಎನ್ನುವ ಭರವಸೆಯೂ ಇಲ್ಲದೆ.

ತನ್ನ ಹಿಂದೆ ತನ್ನ ಬಗ್ಗೆ ಏನು ಮಾತಾಡಿಕೊಳ್ತಾರೆ ಎನ್ನುವ ಬಗ್ಗೆ ದೇವಕಿ ಎಂದೂ ತಲೆ ಕೆಡಿಸಿಕೊಂಡವಳಲ್ಲ. ಕ್ಲಾಸು ಮುಗಿಸಿ ಡಬ್ಬಿ ಹಿಡಿದು ಬರುವದು ಒಂದು ದಿನ ತಡವಾದಾಗ ಶ್ಯಾಮಲಾ ಮಂದಾಕಿನಿಗೆ ಹೇಳುತ್ತಿದ್ದ ಮಾತು ಕಿವಿಗೆ ಬಿದ್ದಿತ್ತು.

"ಗಂಡನ್ನ ಬಿಟ್ಟು ಬಂದು ಆರಾಮ ಚೈನೀ ಆದಾಳ ತಾನೊಬ್ಬಳs, ಇಂಥವರಿಗೆಲ್ಲಾ ಏನ ನೀತಿ-ನಡಾವಳಿ ಇರ್ತದ, ಮನಸ್ಸಿಗಿ ಬಂದದ್ದs ಮಾಡತಾರ."

ಅವರ ಮಾತು ಕಿವಿಗೆ ಬಿದ್ದೇ ಇಲ್ಲವೆನ್ನುವಂತೆ ಒಳಗೆ ಬಂದು ಎಲ್ಲರನ್ನೂ ನೋಡಿ ನಗು ತೂರಿ ಡಬ್ಬಿ ಬಿಚ್ಚಿದಳು. ಶ್ಯಾಮಲಾ ಮಾತ್ರ ತಗ್ಗಿಸಿದ ತಲೆ ಎತ್ತಿರಲಿಲ್ಲ.

ತನ್ನ ಬಗ್ಗೆ. ತನ್ನ ಹಿಂದಿನ ಜೀವನದ ಬಗ್ಗೆ ಇವರಿಗೆಲ್ಲ ಏನು ಗೊತ್ತಿದೆ? ತನ್ನ ಮನೆ ಎಲ್ಲಿದೆ, ಮನೆಯಲ್ಲಿ ಯಾರಾರಿದ್ದಾರೆ ಎನ್ನೋದೂ ಗೊತ್ತಿಲ್ಲ. ತನ್ನ ಗಂಡ ಯಾರು ಅನ್ನೋದೂ ಇವರಿಗೆ ಗೊತ್ತಿಲ್ಲ. ಈ ದಿನ ತನ್ನ ಮನೆಯಲ್ಲಿ ಏನಾಗಿದೆ? ತನಗೆ ಏನು ಕಷ್ಟ ಇದೆ, ಹ್ಯಾಗೆ ಜೀವನ ಮಾಡ್ತೀನಿ– ಉಹು ತಿಳಕೊಳ್ಳೋದರಲ್ಲಿ ಯಾರಿಗೂ ಆಸಕ್ತಿ ಇಲ್ಲ. ಇಂಥವರ ಮುಂದೆ ನಾನು ನನ್ನ ಸುಖ-ದುಃಖ ತೋಡಿಕೊಳ್ಳಲೇ? ಉಹುಂ, ನನ್ನ ಅಭಿಮಾನ ಒಪ್ಪೋದಿಲ್ಲ– ಢಣ್‌ಢಣ್ ಶಾಲೆಯ ಗಂಟೆ ದೇವಕಿಯನ್ನು ಎಚ್ಚರಿಸಿ ಮನೆಗೆ ಓಡುವಂತೆ ಮಾಡಿತು.

ದೇವಕಿಯ ಕೈ ಮಗಳನ್ನು ತಟ್ಟುತ್ತಿದ್ದರೂ ಬಾಗಮ್ಮನ ಮುಖವೇ ಕಣ್ಣ ಮುಂದೆ ಕಟ್ಟಿತ್ತು. ಜ್ವರ ಬಂದ ಕಿರಣಳನ್ನು ಸಂಜೆಯವರೆಗೆ ನೋಡಿಕೊಂಡಿದ್ದಳು. ಆದರೆ ಅವಳಿಗಾಗಿ ಇವತ್ತು ಅವಸರದಲ್ಲಿ ಏನೂ ತಂದಿರಲಿಲ್ಲ. ಎಲೆ ಅಡಿಕೆ, ನಾಶೀಪುಡಿ ಏನಾದರೂ ತರಬೇಕಿತ್ತು. ತನ್ನ ಖಾಲಿ ಕೈ ನೋಡಿ ಬಾಗಮ್ಮನವರ ಮುಖ ಗಂಟಾಗಿತ್ತು. ನಿರಾಶೆಯಿಂದ ಮುಖ ತಿರುವಿದ್ದಳು. ಆದರೆ ಹೀಗೆ ತಂದುಕೊಡುವ ಆಸೆಯನ್ನು ಹಚ್ಚಿದವಳು ತಾನೆ. ಮೊದಮೊದಲು ಮುದುಕಿ ಏನೂ ಬೇಡ ಬೇಡ ಎನ್ನುತ್ತಿದ್ದಳು. ಈಗೀಗ ಏನಾದರೂ ತರದಿದ್ದರೆ ಸಿಟ್ಟು ಬರುತ್ತದೆ ಬಾಗಮ್ಮನಿಗೆ...

ಗೌತಮ ಬುದ್ಧ ಹೇಳಿದ್ದು ಸತ್ಯ. 'ಆಸೆಯೇ ದುಃಖಕ್ಕೆ ಮೂಲ' ಎಂದು ಹೇಳಿದ ಬುದ್ಧ ಆಸೆಯನ್ನು ಗೆದ್ದು ಮಹಾಪುರುಷನಾದ. ಆದರೆ ತನ್ನ ಗುರು, ಮಾರ್ಗದರ್ಶಿ, ಕೇರಿಯ ಯುವಕರ ನಾಯಕ ತನ್ನ ಶ್ರೀಧರಣ್ಣ ಏನಾದ? ಬುದ್ಧನ ತತ್ತ್ವಗಳಿಗೆ ಮರುಳಾಗಿ ಬೌದ್ಧನಾಗಿ ನಮ್ಮ ಕೇರಿಯನ್ನು ಬಿಟ್ಟು ಒಳ್ಳೆಯ ಬೀದಿಗೆ, ಅಂತಸ್ತಿಗೆ, ಮಹಡಿ ಮನೆಗೆ, ಬದಲಾಗುತ್ತ ಹೋದ ಶ್ರೀಧರಣ್ಣ ಎತ್ತರಕ್ಕೆ ಏರಲು ಹೋಗಿ ಕೆಳಗೆ ಬಿದ್ದುಬಿಟ್ಟಿದ್ದ. ನಾವಿದ್ದ ಜಾಗದಿಂದಲೇ ಮೇಲೆ ಹೋಗೋದಕ್ಕೆ ಸಾಧ್ಯವಿಲ್ಲವೇ? ಯಾಕಿಲ್ಲ? ಮನುಷ್ಯ ಬದಲಾಗಬೇಕೆ ಹೊರತು ಒಂದಂಗಿ ಬಿಟ್ಟು ಇನ್ನೊಂದನ್ನ ತೊಡುವ ಹಾಗೆ ಆಗಬಾರದು. ಧರ್ಮ ಬದಲಾದರೆ ಒಳಗಿನ ಆಸೆ, ರೋಷ, ದುಷ್ಟತನ ಎಲ್ಲ ಹೋಗಿಬಿಡುತ್ತವೆಯೆ ಎಂದು ಅವನೊಡನೆ ತುಂಬಾ ಜಗಳಾಡಿದೆ. 'ನೀನೂ ಸದಾಶಿವನ ಹಾಂಗ ಮಾತಾಡಬ್ಯಾಡಾ' ಅಂದ. 'ಯಾರು ಸದಾಶಿವ' ಅಂದೆ, ತನ್ನ ಗೆಳೆಯನ ಪರಿಚಯ ಮಾಡಿ ಕೊಟ್ಟ...

"ನಿನ್ನ ಸೀದ್ರಣ್ಣ ಬೌದ್ಧ ಆಗಿ ಆನಂದ ಆಗಲಿಕ್ಕೆ ಹೊಂಟಾನ, ನೀ ಏನ ಆಗ್ತೀ" ಸದಾಶಿವ ಮೊದಲನೇ ಪ್ರಶ್ನೆ ಎಸೆದಿದ್ದ.

"ಈ ಮಾತಿಗೆ ಅಣ್ಣನ ಕೂಡ ಮನ್ಯಾಗ ದಿನಾ ಜಗಳಾಡತೀನಿ. ಅಂವಾ ಕೇಳವೊಲ್ಲ, ಅಂವನ ತಲ್ಯಾಗ ದೆವ್ವ ಹೊಕ್ಕೈತಿ".

"ಹೌದು, ನೀ ಅನ್ನೂದು ಖರೇ ಐತಿ, ಅಂವನ ತಲ್ಯಾಗ ದೆವ್ವ ಹೊಕ್ಕೈತಿ. ನಾನು, ಸಂಘದ ಗೆಳೆಯರು ಎಲ್ಲಾರೂ ಕೂಡಿ ಭಾಳ ಪ್ರಯತ್ನ ಮಾಡಿದಿವಿ. ಏನೂ ಉಪಯೋಗ ಆಗಲಿಲ್ಲ. ಅಂವಾ ಅಂತೂ ನಮ್ಮ ಕೈ ಬಿಟ್ಟ ಹೊಂಟಾನ, ನೀ ಏನ ಮಾಡೂವಾಕಿ ಹೇಳ. ಇಲ್ಲೇ ಅಪ್ಪ-ಅವ್ವನ ಕೂಡ ಇರ್ತೀಯೋ, ನೀನೂ ಹೋಗ್ತಿಯೊ ?"

"ನಮ್ಮಪ್ಪ-ಅವ್ವ, ತಮ್ಮಂದಿರು ಎಲ್ಲಾರೂ ಅಣ್ಣನ ಕೂಡ ಹೋಗಲಿಕ್ಕೆ ಒಂಟಿಗಾಲ ಮ್ಯಾಲ ನಿಂತಾರ. ನಾ ಮಾತ್ರ ಗಟ್ಟಿ ಮನಸ ಮಾಡೇನಿ. ನಾ ಒಬ್ಬಾಕಿ ಆದರೂ ಅಡ್ಡಿಯಿಲ್ಲಾ, ಇಲ್ಲೇ ಕೇರಿಯೊಳಗs ಇದs ಗುಡಿಸಲದಾಗs ನಾ ಇರಾಕಿ."

"ಹೊಟ್ಟಿಗೆ ಏನ್ಮಾಡ್ತಿ ?"

"ಪಿ.ಯು.ಸಿ. ಪಾಸಾಗೇನಿ. ಎಲ್ಲೆರ ಕೆಲಸಾ ಹುಡಕತೇನಿ, ಯೋಗೀಶ ಪ್ರಿಂಟಿಂಗ ಪ್ರೆಸ್ಸಿನ್ಯಾಗ ಕೆಲಸಾ ಕೊಡಸ್ತೀನಿ ಅಂದಾನ ನಮ್ಮ ಸಂಘದ ಕೆಲಸಾ ಮಾಡತೇನಿ. ನಮ್ಮ ಜನರಿಗೆ ತಿಳವಳಿಕಿ ಹೇಳ್ತೀನಿ. ಅವರಿಗೆ ಆಗೂ ಅನ್ಯಾಯಾ, ಅತ್ಯಾಚಾರಾ ಎದುರಿಸತೀನಿ" ಆವೇಶದಿಂದ ಹೇಳಿದೆ. ಅವನ ಕಣ್ಣುಗಳಲ್ಲಿ ಮೆಚ್ಚುಗೆ ಮೂಡಿತ್ತು.

"ವಾಹ್‌ರೇ ! ಹುಡುಗೀ. ಇನ್ನೂತನಾ ನಿನ್ನಂಥಾ ಹುಡುಗೀನs ನನಗ ಸಿಕ್ಕಿದ್ದಿಲ್ಲಾ." ಅವನ ಹೊಗಳಿಕೆ ತನ್ನ ಕಪ್ಪು ಕೆನ್ನೆಗಳನ್ನು ಕೆಂಪಾಗಿಸಿದ್ದು ಅವನಿಗೆ ಕಾಣುವದು ಹೇಗೆ ಸಾಧ್ಯ ? ಹಾಗೇ ಮಾತು ಮುಂದುವರಿಸಿದ್ದ. "ನಿನ್ನ ಛಲ, ದಿಟ್ಟತನದ ಮಾತು, ಗಟ್ಟಿ ಮನಸ್ಸು ನೋಡಿದರ ನಮ್ಮ ಅವ್ವನ ನೆನಪ ಆಗತೈತಿ." ಸದಾಶಿವನ ಅವ್ವನನ್ನು ಎಂದಾದರೂ ನೋಡಬೇಕೆಂದು ತನಗೆ ಆಗಲೇ ಅನಿಸಿತ್ತು.

ಸಂಘ, ಸಮ್ಮೇಳನ, ಹೋರಾಟ, ಮೆರವಣಿಗೆಯ ಕೆಲಸಗಳಲ್ಲಿ ನನ್ನ, ಸದಾಶಿವನ ಓಡಾಟ, ಒಡನಾಟ ಹೆಚ್ಚಾಗತೊಡಗಿತ್ತು. ಕೇರಿಯ ಜನರ ಬಾಯಿ ಸುಮ್ಮನಿದ್ದೀತೆ ? ನನ್ನ ಬಿಳಿ ಅರಿವೆ ಮಾತು, ಓದು, ಬುದ್ಧಿ ಅವರಿಂದ ನನ್ನನ್ನು ದೂರ ಒಯ್ದಿರಬೇಕು. ನನಗೆ ತಂಗಿಯೇ ಇಲ್ಲ, ಸತ್ತು ಹೋಗಿದ್ದಾಳೆಂದು ಒದರಿ ಜಗಳಾಡಿ ಹೋಗಿದ್ದ ಸೀದ್ರಣ್ಣನ ಮನೆಯ ಹೊಸಲು ನಾನು ಮತ್ತೆ ಮೆಟ್ಟಿರಲಿಲ್ಲ. ತನ್ನ ಸುತ್ತಮುತ್ತೆಲ್ಲ ಹುಡುಗರೇ ಇದ್ದರೂ ತನಗೆ ಸರಿಯಾಗುವಂಥ ಒಬ್ಬ ಯುವಕನೂ ಕಣ್ಣಿಗೆ ಬಿದ್ದಿರಲಿಲ್ಲ. ಅಣ್ಣನ ವೈರಿಗಳು, ನನ್ನ ಬಗ್ಗೆ ಹೊಟ್ಟೆಕಿಚ್ಚು ಪಡುವವರೂ ಅಲ್ಲಿದ್ದರು. ಅಂಥವರ ಮಾತುಗಳಿಂದ ತಳಮಳಗೊಳ್ಳುತ್ತಿದ್ದೆ. ಅಂಥ ದಿನಗಳಲ್ಲೇs–

"ದೇವಕೀ, ನೀ ನನ್ನ ಮದುವೀ ಆಗ್ತೀಯಾ" ಸದಾಶಿವನ ಮಾತಿಗೆ ಬೆಚ್ಚಿಬಿದ್ದಿದ್ದೆ. ನನ್ನ ಮನಸ್ಸಿನ ಮಾತುಗಳನ್ನೇ ಕಿವಿ ಕೇಳುತ್ತಿರುವ ಭ್ರಮೆ ಎಂದುಕೊಂಡೆ.

"ದೇವೂ ನನಗೆ ನಿನ್ನ ಸ್ವಭಾವ, ಗುಣಾ ಭಾಳ ಸೇರ್ತದ. ನಾವಿಬ್ಬರೂ ಮದುವೀ ಮಾಡಿಕೊಂಡರ ಸುಖದಿಂದ ಇರ್ತೀವಿ ಅನಸ್ತದ."

"ನನ್ನ ರೂಪ, ಬಣ್ಣಾ...?"

"ಅಮಾವಾಸ್ಯಿ ದಿನಾ ನಕ್ಷತ್ರ ಹೊಳದಾಂಗ ಥಳಾಥಳಾ ಹೊಳೀತಾವಲ್ಲ ಈ ಜೋಡಿ ಕಣ್ಣು. ಇದರ ಮುಂದ ನಾ ಜಗತ್ತs ಮರೀತೇನಿ. ಈ ನಿನ್ನ ಉದ್ದನ್ನ ಕೂದಲ ನನಗೆ ಎಷ್ಟ ಹುಚ್ಚ ಹಿಡಿಸೈತಿ ಅಂದರ ಸಾಯೂವಾಗ ಈ ನಿನ್ನ ಜಡೀಲೆ ಉರ್ಲ ಹಾಕ್ಕೋಬೇಕು ಅನಸತೈತಿ." ತಳಮಳ, ಉದ್ವೇಗ ಎಲ್ಲ ಶಾಂತವಾಗಿ ಶುದ್ಧ ಪ್ರೇಮ ಒಂದೇ ಉಳಿದಿತ್ತು ನನ್ನ ಮನಸ್ಸಿನಲ್ಲಿ.

ಮಾನವ ಕುಲವೇ ನಮ್ಮ ಕುಟುಂಬ ಎಂದುಕೊಂಡ. ನಾವಿಬ್ಬರೂ ಒಂದು ಸಭೆಯಲ್ಲಿ ನೂರಾರು ಜನರ ಎದುರು ಹಾರ ಬದಲಾಯಿಸಿ ಸತಿ-ಪತಿ ಗಳಾದೆವು. ನನಗೆ ಅಷ್ಟೇ ಸಾಕಿತ್ತು. ಸದಾಶಿವ ಸುಮ್ಮನಿರದೆ ರಜಿಸ್ಟ್ರಾರ ಕಚೇರಿಯಲ್ಲಿಯೂ ಮದುವೆ ನೊಂದಾಯಿಸಿದ. ಮನುಷ್ಯನಿಗೆ ಕಾಣುವಂಥ ಮುಖವೊಂದೇ ಅಲ್ಲದೆ ಇನ್ನೂ ಬೇರೆ ಬೇರೆ ಮುಖಗಳಿರುತ್ತವೆಂದು ತಿಳಿಯ ದಷ್ಟು ನಾನು ಮುಗ್ಧಳಾಗಿದ್ದೆ. ಅಲ್ಲದೇ ನನಗೆ ಇದ್ದುದ್ದೊಂದೇ ಮುಖ. ಅಲ್ಲದೆ ನನ್ನ ಬದುಕಿನ ಹೀರೋ ನಾಲ್ಕಾರು ವರ್ಷಗಳಲ್ಲಿ ಸಂಪೂರ್ಣ ಬದಲಾ ಗಿದ್ದ. ಮನಸ್ಸಿನ ಆಸೆಗೆ ಮಿತಿಯಿಲ್ಲ ಎನ್ನುವ ಮಾತಿಗೆ ಸದಾಶಿವನೂ ಹೊರ ತಾಗಿರಲಿಲ್ಲ. ಆದರ್ಶ ಪ್ರೇಮವನ್ನು ಎಲ್ಲೋ ಒಗೆದುಬಿಟ್ಟು ಅಂತರ್ಜಾತಿ ವಿವಾಹಕ್ಕೆ ಸರಕಾರ ಕೊಡುವ ಎಲ್ಲ ಸವಲತ್ತುಗಳನ್ನೂ ಪಡೆದ. ಹಣ, ನೌಕರಿ, ಸೈಟು ಎಲ್ಲ ಬಾಚಿಕೊಂಡ. ಮದುವೆಯಾದೊಡನೆ ನಾನು ಕೇರಿಯ ಗುಡಿಸಲನ್ನು ಬಿಡಬೇಕಾಗಿತ್ತು. ಅದೇ ನನ್ನ ತಪ್ಪು. ಸದಾಶಿವ ನನ್ನ ಜೊತೆಗೆ ನನ್ನ ಗುಡಿಸಲಲ್ಲಿ ಇರಲು ಸಾಧ್ಯವೇಕಿಲ್ಲ ಎನ್ನುವ ಪ್ರಶ್ನೆ ನನ್ನ ಮನದಲ್ಲಿ ಹುಟ್ಟದಷ್ಟು ಅವನ ಪ್ರೇಮನಾಟಕದ ನಾಯಕಿಯ ಪಾತ್ರದಲ್ಲಿ ಕಳೆದು ಹೋಗಿದ್ದೆ. ಸರಕಾರೀ ಕಾಲೇಜಿನ ರೀಡರು, ಒಳ್ಳೇ ಮನೆ, ಸೀರೆಗಳು, ಪಾತ್ರೆ-ಸಾಮಾನು, ಓಡಾಡಲು ಸ್ಕೂಟರು, ಕಂಕುಳಲ್ಲೊಂದು ಮಗು, ಕೆಲಸ ಬಿಟ್ಟು ಹಾಯಾಗಿದ್ದೆ, ಎಲ್ಲ ಇತ್ತು, ಇನ್ನೇನು ಬೇಕಿತ್ತು ನನಗೆ. ಇಷ್ಟೇ ಸಾಕೆ? ಸಾಕಾಗಿಲ್ಲ ಇನ್ನೂ ಏನೋ ಬೇಕು ಎನ್ನುವ ಅತೃಪ್ತಿ ಒಳಗೇ ಹೊಗೆಯಾಡು ತ್ತಿತ್ತು. ಸದಾಶಿವ ಕ್ಲಾಸು, ಪರೀಕ್ಷೆ ಕಾಲೇಜು ಎಂದು ಸಂಘದ ಕೆಲಸಕ್ಕೆ ತಪ್ಪಿಸಿಕೊಳ್ಳುತ್ತಿದ್ದ ವಿಷಯ ನನ್ನ ಗಮನಕ್ಕೆ ಬರುತ್ತಿತ್ತು. ಬರಬರುತ್ತ

ನಾನು ಹೋದರೂ ಗೊಣಗುತ್ತಿದ್ದ. ಕೊನೆಗೆ ನಿರ್ಬಂಧ ಹಾಕಿದ. ಅದೇ ಅಸಮಾಧಾನ ಬೆಳೆದು ತನ್ನಲ್ಲಿ ಬಿಸಿಯಾಗಿ ಜಗಳಗಳಾಗುತ್ತಿದ್ದವು. ಪ್ರೇಮದ ಕಾವು ಇಳಿಯುತ್ತ ಹೋದಂತೆ ಈ ಎಲ್ಲ ಕೊರತೆಗಳು ಸ್ಪಷ್ಟವಾಗಿ ಇಬ್ಬರ ನಡುವಿನ ಬಿರುಕು ಹೆಚ್ಚುತ್ತಾ ಹೋಯಿತು. ಅಂದು ತಾನು ಹಟ ತೊಟ್ಟು ಕಿರಣಳನ್ನು ಎತ್ತಿಕೊಂಡೇ ಮೆರವಣಿಗೆಯಲ್ಲಿ ಹೋದೆ. ಸದಾಶಿವ ಸಿಟ್ಟಾಗಿ ತನ್ನನ್ನು ಹೊಡೆದು ಮರ್ಯಾದೆ ಹಾಳಾಗುತ್ತಿದೆಯೆಂದು ಕೂಗಾಡಿದ. ಇತ್ತಿತ್ತಲಾಗಿ ಅವನು ತನ್ನನ್ನು ತೀವ್ರವಾಗಿ ಪ್ರೇಮಿಸಲೂ ಹಿಂಜರಿಯುತ್ತಿದ್ದ. ನಮ್ಮ ದಾರಿ ಕವಲೊಡೆದಿದ್ದುವು. ಈ ಬದಲಾವಣೆ ಹೇಗೆ ಕೊನೆಗೊಳ್ಳುತ್ತದೆ ಎಂದು ತಾನು ಭಯಪಡುತ್ತಿದ್ದ ದಿನಗಳಲ್ಲೇ–

"ದೇವಕಿ, ನಾ ಹಳ್ಳೀಗೆ ಹೋಗಿ ಬರತೀನಿ. ಕೆಲಸ ಅದ. ತಿರುಗಿ ಬರೂದು ತಡಾ ಆಗ್ತದ, ನನ್ನ ದಾರೀ ನೋಡಬ್ಯಾಡಾ."

"ನಿಮ್ಮ ಅವ್ವನ್ನ, ಹಳ್ಳೀನ ನಾನೂ ನೋಡಬೇಕು. ಈ ಸಲಾ ಆದ್ರೂ ನನ್ನೂ ಕರಕೊಂಡು ಹೋಗ್ರಿ."

"ಇಲ್ಲಾ ನನ್ನ ಮದುವಿ ಆಗೇದ. ಅದೂ ಹರಿಜನ ಹುಡುಗೀ ಮಾಡಿ ಕೊಂಡೀನಿ ಅಂತ ನಾ ಯಾರಿಗೂ ಹೇಳಿಲ್ಲ. ಗೊತ್ತಾದರ ಅವ್ವ ಎದಿ ಒಡಕೊಂಡ ಸಾಯ್ತಾಳ. ನೀ ಬರೂದು ಬ್ಯಾಡಾ."

ಸದಾಶಿವ ಹೊರಟು ಹೋಗಿದ್ದ. ನಮ್ಮ ಮದುವೆಯಾಗಿ ಮೂರು ವರ್ಷ ಕಳೆದಿದ್ದರೂ ಈ ಸುದ್ದಿ ಮನೆಯಲ್ಲಿ ಹೇಳಿಲ್ಲ ಎಂದಿದ್ದ ಸದಾಶಿವನ ಇನ್ನೊಂದು ಮುಖದ ಪರಿಚಯ ಆದಾಗ ನಾನು ಕುಸಿದುಬಿದ್ದೆ. ಅದೇ ಕೊನೆಯ ಭೆಟ್ಟಿ. ತಿಂಗಳೂ ಕಳೆದರೂ ಸದಾಶಿವ ಬರಲಿಲ್ಲ. ಮನೆಯ ದಿನಸಿ ತೀರಿದಾಗ ಒಂದೆರಡು ಪಾತ್ರೆ ಮಾರಿದೆ. ಸದಾಶಿವನೇ ಬಿಟ್ಟು ಹೋದಮೇಲೆ ಆ ಮನೆಯಲ್ಲಿ ಇರುವ ಅಧಿಕಾರ ತನಗಿಲ್ಲ ಎನ್ನಿಸಿದಾಗ ಎರಡು ದಿನ ಉಪ ವಾಸವಿದ್ದೆ. ಪೈಸೆ ಖರ್ಚಿಲ್ಲದೆ ಮಗಳ ಜೊತೆ ಕೆರೆಗೆ ಬಿದ್ದು ಸಾಯಬೇಕೆನ್ನುವ ಯೋಚನೆಯೂ ಬಂದಿತ್ತು. ಮನೆಯವರು, ಕೇರಿಯವರು, ಸಮಾಜ, ವ್ಯವಸ್ಥೆ ಎಲ್ಲದರ ವಿರುದ್ಧ ಹೋರಾಡುವ ದಿಟ್ಟೆಯಾಗಿದ್ದ ನಾನು ಈ ಭಂಡ ಗಂಡನ ಜೊತೆಗಿದ್ದು ಹೇಡಿಯಾಗಿಬಿಟ್ಟೆನೇ? ಉಹುಂ-ಸೋತು ಸಾಯ

ಬಾರದು. ಕಷ್ಟ ನನಗೇನೂ ಹೊಸದಲ್ಲ. ಮಗಳೊಡನೆ ಸ್ವತಂತ್ರವಾಗಿ ಬದುಕ ಬೇಕು. ಆದರೆ ಅದಕ್ಕೂ ಮೊದಲು ಸದಾಶಿವನ ಬಣ್ಣ ಬಯಲು ಮಾಡ ಬೇಕು. ಅವನ ಅವ್ವನಿಗೆ ತಾನ್ಯಾರೆಂದು ತಿಳಿಯಬೇಕು.

ವಿಚಾರ ಮಾಡುತ್ತ ಮಲಗಿದ ದೇವಕಿಗೆ ಒಮ್ಮೆಲೆ ಎಚ್ಚರಾಯಿತು. ಕಿರಣಳ ಜ್ವರ ಇಳಿದು ಬೆವರು ಸುರಿದಿತ್ತು. ಕಿಡಿಕಿಯ ಕೆಳಗೆ ಪತ್ರವೊಂದು ಬಿದ್ದಿತ್ತು– ತನಗೆ ಬರೆಯುವವರಾದರೂ ಯಾರು– ಅಪರಿಚಿತ ಕೈಬರಹ. ಕುತೂಹಲದಿಂದ ಓದಿದಳು.

ಪ್ರೀತಿಯ ದೇವೂ,

ನಾನು ನಿನಗೆ ಬರೆಯುತ್ತಿರುವದು ಇದೇ ಮೊದಲು, ಕೊನೆಯದೂ ಇದೇ ಪತ್ರ. ಕೆಲವು ತಿಂಗಳುಗಳಿಂದ ನನ್ನ ಆರೋಗ್ಯ ಸರಿ ಇರಲಿಲ್ಲ. ಡಾಕ್ಟರರಿಗೆ ತೋರಿಸಲು ಹೋದೆ. ನಾನಾ ತರದ ಪರೀಕ್ಷೆಗಳಾದ ಮೇಲೆ ಡಾಕ್ಟರ ಕ್ಯಾನ್ಸರ ಆಗಿದೆ, ಬೇಗ ಆಪರೇಷನ್ ಮಾಡಬೇಕೆಂದರು. ಈ ರೋಗದ ಬಗ್ಗೆ ನಾನೂ ಅಷ್ಟಿಷ್ಟು ಓದಿಕೊಂಡಿದ್ದೇನೆ. ಇದು ಸಾವನ್ನು ಮುಂದೆ ಹಾಕುವ ರೋಗವೇ ಹೊರತು ಗುಣವಾಗುವದಲ್ಲ. ಮಕ್ಕಳಿಬ್ಬರ ಬೇಜವಾಬ್ದಾರಿಯಿಂದ ಆಸ್ತಿ ಹಾಳಾಗುತ್ತಿದೆ. ಅಂಥವರ ಮೇಲೆ ನನ್ನ ಆಪರೇಷನ್ ಖರ್ಚು ಹಾಕಲು ಮನಸ್ಸು ಒಪ್ಪುವುದಿಲ್ಲ. ನನ್ನ ಕೆಲಸ ಮುಗಿದಿದೆ. ಇನ್ನೂ ಬದುಕಬೇಕೆನ್ನುವ ಆಸೆಯೂ ನನಗಿಲ್ಲ. ನಿನಗೆ, ಕಿರಣಳಿಗೆ ಆಶೀರ್ವಾದಗಳು. ನನ್ನ ಬದುಕನ್ನು ಮುಗಿಸುವ ನಿರ್ಧಾರ ಕೈಗೊಂಡಿದ್ದೇನೆ. ಬದುಕೇ ಒಂದು ಹೋರಾಟ, ನಿನ್ನ ಹೋರಾಟದಲ್ಲಿ ಯಶಸ್ಸು ಸಿಗಲಿ.

ನಿನ್ನ
ಗೌರತ್ತೆ

ಮನೆಯ ಛಾವಣಿಯೇ ತನ್ನ ಮೇಲೆ ಕಡಿದುಕೊಂಡು ಬೀಳುತ್ತಿದೆಯೆ. ತಲೆ ಗಟ್ಟಿಯಾಗಿ ಹಿಡಿದುಕೊಂಡು ದೇವಕಿ ಚೀರಿದಳು. ಅತ್ತು ದುಃಖ ಹಗುರ ಮಾಡಿಕೊಳ್ಳಲು ತನಗೆ ಅತ್ತೆಯ ತೊಡೆಯೊಂದು ಇತ್ತು. ಈಗ... ಈಗ ತಾನು ನಿಜವಾಗಿಯೂ ಅನಾಥೆ. ಸಂಜೆಯ ಕತ್ತಲು ಆವರಿಸಿಕೊಳ್ಳುತ್ತಿ

ದ್ದಂತೆ ಆಳುವು ನಿಂತು ಮನಸ್ಸಿನಲ್ಲಿ ಶೂನ್ಯ ತುಂಬಿಕೊಳ್ಳತೊಡಗಿತ್ತು. ಕಿರಣ 'ಅವ್ವಾ ಹಸಿವಿ' ಎಂದಾಗ ಎಚ್ಚತ್ತು ಅವಳಿಗೆ ಹಾಲು ಕುಡಿಸಿ ಬಗಲಲ್ಲಿಟ್ಟು ಕೊಂಡು ಬಸ್‌ಸ್ಟ್ಯಾಂಡ್ ದಾರೀ ಹಿಡಿದಳು. ಏನಾದರಾಗಲಿ– ಅತ್ತೆಯ ನ್ನೊಮ್ಮೆ ನೋಡಲೇಬೇಕು– ಅವಳನ್ನು ಮೊದಲು ನೋಡಿದ ದಿನ–

"ನೀನು ದೇವಕಿ ಏನು ? ನಾನು ಸದಾಶಿವನ ಅವ್ವ ಗೌರವ್ವ. ಸರವೂ ರಿಂದ ಬಂದೀನಿ. ಇಂವಾ ನಮ್ಮ ಆಳುಮಗಾ ಫಕೀರ, ಫಕೀರಾ ನೀ ಹೊರಗ ಕಟ್ಟಿಮ್ಯಾಲೆ ಕೂಡ್ರು."

ಎತ್ತರವಾದ, ಕೆಂಪು ಬಣ್ಣದ ಬೆಳ್ಳಿಗೂದಲಿನ ಹೆಂಗಸೊಬ್ಬಳು ಹೊಸ್ತಿಲು ದಾಟಿ ಒಳಬರುತ್ತ ಹೇಳಿದಾಗ ದೇವಕಿಯ ಎದೆ ಡವಡವ ಎಂದಿತ್ತು. ಯಾವ ಉಪಚಾರಕ್ಕೂ ಕಾಯದೆ ಒಳಗೆ ಬಂದು ಕುಳಿತ ಅತ್ತೆ ಯನ್ನು ನೋಡಿ ಸಿಟ್ಟಿನ ಮಾತುಗಳೆಲ್ಲ ಒಳಗೇ ಇಂಗಿ ಹೋಗಿದ್ದವು. ನಿಧಾನ ವಾಗಿ ಮಾತನಾಡಿದ್ದಳು ಗೌರತ್ತೆ.

"ನಿನ್ನ ಪತ್ರಾ ಮುಟ್ಟಿತು ದೇವೂ, ಆದರ ಭಾಳ ತಡಾ ಆತು. ನಿನ್ನ ಮದುವೀ ಆಗೀನಿ ಅಂತ ಸದಾಶಿವ ನಮಗ ತಿಳಿಸೇ ಇಲ್ಲ– ಅಂವಗ ನನ ಮಗಾ ಅನಲಿಕ್ಕೂ ನಾಚಿಕೆ ಬರ್ತದ– ಈಗ ಹದಿನೈದು ದಿನಾ ಆತು ನಮ್ಮ ಜಾತೀದ ಇನ್ನೊಂದ ಹುಡುಗಿ ಮದುವೀ ಮಾಡಿಕೊಂಡು ಹನಿಮೂನಿಗೆ ಹೋಗ್ಯಾನ. ಈ ಸುದ್ದಿ ಕೇಳಿದರ ನಿನಗೆ ಕೆಟ್ಟ ಅನಸ್ತದ ಅನ್ನೂದು ಗೊತ್ತಾಗೇ ನಾನs ಬಂದೆ. ನಿನ್ನ ನೋಡಿ ಮಾತಾಡಬೇಕು ಅನ್ನಿಸ್ತು ಬಂದೆ." ಅವಳ ದನಿ ಯಲ್ಲಿಯ ನಿಷ್ಕಪಟತೆ ನನ್ನ ಮನಸ್ಸನ್ನು ಮುಟ್ಟಿ ನಂಬುವಂತೆ ಮಾಡಿತು. ತಾನು ಮೋಸಕ್ಕೆ ಬಲಿಯಾದೆ ಅನ್ನೋದು ನೆನಪಾಗಿ ದುಃಖ ಉಕ್ಕಿ ಬಂತು. ಅದನ್ನು ತಿಳಿದವಳಂತೆ ಗೌರತ್ತೆ ತನ್ನನ್ನು ಹತ್ತಿರ ಎಳೆದುಕೊಂಡಳು. ಆಕೀ ಉಡಿಯೊಳಗೆ ನಾ ಮನಸಾ ಅತ್ತುಬಿಟ್ಟೆ.

"ನನ್ನ ಮಗಾ ಒಂದ ಹೆಣ್ಣಿನ ಕುತಿಗೀ ಕೊಯ್ದಾ ಅಂದರ ಅಂವಾ ನನ್ನ ಪಾಲಿಗೆ ಸತ್ತಾಂಗ. ಆದರ ನಾ ಈಗ ಏನ ಮಾಡಿದರೂ, ಏನ ಆಡಿದರೂ ಆಗಿಹೋದ ತಪ್ಪು ತಿದ್ದಾಕ ಆಗೂದಿಲ್ಲ. ನಿನಗ ಏನ ಸಹಾಯ ಬೇಕಾದರೂ

ಕೇಳು, ಮಾಡ್ತೀನಿ." "ಮಗಳ್ನ ಕರಕೊಂಡು ಒಬ್ಬರ ಮನೀ ಬಾಗಿಲಿಗೆ ಹೋಗ ಬಾರದು. ಯಾರಿಗೂ ಭಾರ ಆಗಬಾರದು. ನನ್ನ ಕಾಲ ಮ್ಯಾಲೆ ನಾ ನಿಂತು ಜೀವನಾ ಮಾಡಬೇಕಂತೀನಿ." ಅನ್ನೂ ನನ್ನ ಮಾತು ಕೇಳಿ ಮತ್ತೊಮ್ಮೆ ಅಪ್ಪಿಕೊಂಡಳು.

"ಮಂಗಳಾ ನಿನ ಬಣ್ಣ ಕಪ್ಪ ಆದರೂ ಮನಸು ಬೆಳ್ಳಗೈತಿ. ನಿನ್ನಂತಾ ಹೆಣ್ತಿ ಕೂಡ ಬಾಳೇ ಮಾಡೂ ದೈವ ಆ ಎಡವಟ್ಟಗಿಲ್ಲ ಮತ್ತೇನ ಬೇಕಾದರೂ ಕೇಳು. ನಿನಗ ಅಧಿಕಾರ ಐತಿ. ಬರಬೇಕು ಅನ್ನಿಸಿದಾಗ ಹಳ್ಳೀ ಮನೀಗೆ ಬಾ. ನನಗೂ ಹೆಣಮಕ್ಕಳಿಲ್ಲ. ಎರಡೂ ಗಂಡು. ಸಾಲೀ ಕಲಿತು ಶಾಣ್ಯಾ ಆಗಿ ನಾಕ ಮಂದಿಗೆ ಉಪಕಾರ ಮಾಡಲಿ ಅಂತ ಕಲಸಿದರ ಇಂವಾ ಹಿಂಗ ಮಾಡಿದಾ. ಇವನ ತಮ್ಮ ಮಲ್ಲೇಶಿ ವಿದ್ಯಾ ತಲೀಗೆ ಹತ್ತಲಾರದ ಹೊಲಾ ಮಾಡ್ತೀನಿ ಅಂತ ಊರಾಗ ಬಿಳೇ ಅರಿವಿ ಹಾಕ್ಕೊಂಡ ತಿರಗತಾನ. ಮನ್ಯಾಗ ಹೆಣ್ತೀ ಮಕ್ಕಳು ಇದ್ರೂ ರಾತ್ರಿ ಯಾವಾಕಿನ್ನರೆ ಹುಡುಕ್ಕೊಂಡು ಹೊಲಗೇರಿಗೆ ಹೋಕ್ಕಾನ. ಹಿಂತಾ ಮಕ್ಕಳು ಹುಟ್ಟದಿದ್ದರ ಛೊಲೋ ಇತ್ತು. ಮುಪ್ಪಿನ ಕಾಲಕ್ಕ ಮನಸೀಗಿ ಶಾಂತಿ ಇರಬೇಕು. ಇದನೆಲ್ಲಾ ನೋಡಿದರ ಲಗೂನ ಕಣ್ಣು ಮುಚ್ಚಲಿ ಅಂತೀನಿ." ರಾತ್ರಿ ಪಕ್ಕದಲ್ಲಿ ಮಲಗಿದ ಗೌರತ್ತೆ ಕಣ್ಣೀರು ತಂದು ಹೇಳಿದ್ದಳು.

"ಯವ್ವಾ ನೀನs ನನ್ನವ್ವ. ಹಂಗ ಸಾಯೂ ಮಾತ ಆಡಬ್ಯಾಡಾ" ಅಂದಿದ್ದೆ. ಎಂದೂ ಕಾಣದ ಆ ಹೆಂಗಸಿನೊಡನೆ ತನ್ನ ಸಂಬಂಧ ಏನಿತ್ತು? ಅವಳು ತನ್ನನ್ನು ಬಿಟ್ಟು ಹೋದ ಗಂಡನ ಅವ್ವ. ಆದರೆ ಬದುಕಿನಲ್ಲಿ ಸುಖ ಕ್ಕಿಂತ ಕಷ್ಟವನ್ನೇ ಹೆಚ್ಚು ಉಂಡ ಹೆಣ್ಣು ಎಂದು ಕೇಳಿದ್ದೆ. ಬಹುಶಃ ಅದೇ ತಮ್ಮಿಬ್ಬರನ್ನು ತಳಕು ಹಾಕಿರಬೇಕು.

"ಯವ್ವಾ, ನೀ ಎಲ್ಲಾರ ಹಾಂಗ ಅಲ್ಲ. ಜಗತ್ತಿನ್ಯಾಗಿನ ಎಲ್ಲಾ ಹೆಂಗ ಸರೂ ಒಂದ ಆದರ, ನೀ ಒಬ್ಬಾಕೀನೇ ಒಂದು ಅನಿಸೇದ ನನಗ."

"ಹುಚ್ಚವ್ವಾ, ನಾ ಏನ ಹೆಚ್ಚಿನಾಕಿ ಕಂಡೆ ನಿನಗ."

"ನಿನ್ನ ಕುಲಾ ಹೆಂತಾದ್ದು ಏನ ಕತಿ. ಆದರೂ ನೀ ನನ್ನ ಒಪ್ಪಿಕೊಂಡು ಅಪ್ಪಿಕೊಂಡಿ, ಇದು ಭಾಳ ದೊಡ್ಡ ಮಾತು. ಸಭಾದಾಗ ದೊಡ್ಡ ಮನುಷ್ಯರು

ದೊಡ್ಡ ದೊಡ್ಡ ಮಾತ ಹೇಳತಾರ. ಆದರ ಮನೀ ಬಾಗಿಲಿಗೆ ಹೋದರ ಒಳಗ ಬಾ ಅನ್ನಾಂಗಿಲ್ಲ, ನೀ ಒಬ್ಬಾಕಿ ಅಪವಾದ ಅದೀ."

"ಅದಕ್ಕ ಬ್ಯಾರೇನ ಕಾರಣ ಐತಿ ದೇವೂ. ಹುಟ್ಟಿದ ಮನ್ಯಾಗ ನಾ ಬೆಳದದ್ದ ಹಾಂಗ. ನಮ್ಮಪ್ಪ ವೀರಪ್ಪ ದೇಶಕ್ಕ ಸ್ವತಂತ್ರ ತರಾಕ ಹೋರಾಡಿ ಪೊಲೀಸರ ಹೊಡೆತಾ ತಿಂದು ಜೇಲಿಗೆ ಹೋಗಿದ್ದ. ಗಾಂಧೀ ಅಜ್ಜನ ಕಟ್ಟಾ ಭಕ್ತ ಅಂವಾ. ಮಕ್ಕಳಿಗೆಲ್ಲಾ ಓದೂ-ಬರಹ ಕಲಿಸಿದಾ, ಖಾದೀ ತೊಡಾಕ ಹಚ್ಚಿದ್ದಾ, ನೂಲಾಕ ರಾಟೀ ತಂದಕೊಟ್ಟಿದ್ದಾ, ರಟ್ಟೀ ಮುರದು ದುಡದ ತಿನ್ರಿ ಅಂತಿದ್ದಾ. ಈ ಜಾತಿ ಪಾತಿ ಎಲ್ಲಾ ಮನಿಶೇರ ಮಾಡಿ ಕೊಂಡದ್ದೋ ಮಕ್ಕಳ್ರಾ, ಎಲ್ಲಾರ ಮೈಯಾನ ರಕ್ತ ಕೆಂಪs ಐತಿ, ಹುಟ್ಟಿಸಿದ ದೇವರು ಒಬ್ಬನs ಅದಾನ ತಿಳಕೊಳ್ರಿ ಅಂತ ಬುದ್ಧಿ ಹೇಳತಿದ್ದಾ."

"ಹಂತಾ ದೊಡ್ಡ ಮನಶ್ಯಾನ ಮಗಳಾಗಿ ನೀ ಹಿಂತಾಕಿ ಆಗೀ ಯವ್ವಾ. ಮತ್ತ ನಿನ್ನ ಮಗ್ಗ ಅಟ ಹಿಂತಾ ಬುದ್ಧಿ ಯಾಕ ಬರಲಿಲ್ಲಾ, ನಿನ ಟಂಕ ಸಾಲ್ಯಾಗ ಖೊಟ್ಟಿ ರೂಪಾಯಿ ಆದ ಅಲ್ಲ ಅಂವಾ ?"

ಗೌರತ್ತೆ ಉಸಿರು ಬಿಟ್ಟು ಎಷ್ಟೋ ಹೊತ್ತು ಸುಮ್ಮನಿದ್ದು ಹೇಳಿದ್ದಳು "ಸದಾಶಿವ ತಮ್ಮ ಅಪ್ಪನ್ನ ಹೋತಾನ ದೇವೂ" ಎಂದು, ತನ್ನ ಕುತೂಹಲ ತಡೆಯದೆ ಮತ್ತಷ್ಟು ಕೆದಕಿದ್ದಳು.

"ಹದಿನಾರು ವರ್ಷಕ್ಕ ಸರವೂರ ಸಾವಕಾರನ ಎರಡನೇ ಹೇಣ್ತಿ ಆಗಿ ಬಂದೆ ದೇವೂ. ಆಗಿಂದ ನಾ ಬರೇ ಕಷ್ಟಾನ ಸೋಸೇನಿ. ಬೇಕಾದಷ್ಟ ಶ್ರೀಮಂತಿಕಿ ಇದ್ರೂ ಗೌಡಗ ಗುಣಾ ಇದ್ದಿದ್ದಿಲ್ಲ, ಲಂಗು ಲಗಾಮು ಇಲ್ಲದ ಗೂಳಿ ಹಾಂಗ ಮೆರದಾ. ಮೊದಲನೆಯಾಕಿ ಇವನ ಹೊಡತಕ್ಕ ಸತ್ತಿದ್ದಳಂತ. ಪೊಲೀಸರ ಬಾಯಿಗೆ ರೊಕ್ಕಾ ತುಂಬಿ ಉಳಕೊಂಡಿದ್ದಾ. ಹೇಣ್ತಿ ಅಂದರ ಕಾಲಾನ ಚಪ್ಪಲಿ ಆಗಿತ್ತು ಅವಂಗ. ಹಾಂಗ ಗುದ್ದಾಡಿಕೊಂತ ಸದಾಶಿವ, ಮಲ್ಲೇಶಿ ಹುಟ್ಟಿದರು. ಗೌಡ ಊರಾಗ ರಂಡೀ ಇಟ್ಟಿದ್ದು ಗೊತ್ತಾತು. ನನ್ನ ರಕ್ತಾ ಕುದೀತು. ಇಂವನ ಕೂಡ ಬಾಳೇ ಸಾಕಾಗಿ ಹೋಗಿತ್ತು. ತಿರಿಗಿ ಬಿದ್ದೆ ನೋಡು, ನನ್ನ ಸನೇಕ ಬರಗೊಡಲಿಲ್ಲಾ. ನೀ ನನ್ನ ಮುಟ್ಟಿದಿ ಅಂದರ

ನೋಡು ಅಂತ ಕುಡಗೋಲ ತೋರಿಸಿದ್ನಿ. ಖೋಲಿ ಬಾಗಲಾ ಹಾಕ್ಕೊಂಡು ಮಕ್ಕಳ್ನ ಕರಕೊಂಡು ಕುಡಗೋಲ ತಲೆದಿಂಬಿಗೆ ಇಟಕೊಂಡ ಮಲಗತಿದ್ದೆ. ಸಾಯೂತನಾ ಹಿಂಗs ಇದ್ದಿವಿ. ಸೆರೆ, ಕೆಟ್ಟ ಚಾಳಿ ಎಲ್ಲಾ ಕೂಡಿ ಅಂವನ್ನ ಜೀವಾ ತೊಗೊಂಡ್ವು. ಮನೀ ಭಾರಾ ಎಲ್ಲಾ ನಾ ಹೊತ್ಕೊಂಡೆ.

"ಸತ್ಯಕ್ಕ ನ್ಯಾಯಕ್ಕ ಹೊಡದಾಡೂವಾಕಿ ಯವ್ವಾ ನೀನು. ಅದಕs ನಿನ ಮಾರೀ ಮ್ಯಾಲೆ ಕಳೇ ಹ್ಯಾಂಗ ಐತಿ ನೋಡು."

"ಸುಮ್ಮನ ಹೊಗಳಬ್ಯಾಡ ಹುಡುಗೀ ನೀನು. ಈ ಹೊಡೆದಾಟದಾಗ ನಮ ಜೀವಾ ಸಣ್ಣಾಗತೈತಿ ಅನ್ನೂದ ಮರೀಬ್ಯಾಡಾ. ಸರ್ಪದ ಜೋಡಿ ಸರಸಾ ಆಡಿದಾಂಗ ಆಕ್ಕೈತಿ ನಮ ಬಾಳೆ. ನೀ ಮನಸಿಗೆ, ದೇಹಕ್ಕ ಮುಗು ದಾಣಾ ಹಾಕಿ ಕೈಯಾಗ ಇಟಕೊಂಡು ತಪ್ಪ ಹೆಜ್ಜಿ ಇಡದಂಗ ನಡದೀ ಅಂದರ ಈ ಮಂದಿ ಡೊಗ್ಗಿ ಸಲಾಮು ಹಾಕತಾರ. ನೀ ಹಾದೀ ಬಿಟ್ಟೀ ಅಂದರ ಅದs ಮಂದಿ ಆಳಿಗೊಂದು ಕಲ್ಲು ಹೊಡೆದು ಸಾಯಿಸ್ತಾರ. ನಾಕ ಮಂದಿ ಬೆರಳ ಎತ್ತೂಹಾಂಗ ನಾ ಬಾಳೇ ಮಾಡಲಿಲ್ಲ. ನನಗ ಅದs ಬಲಾ. ನಿನಗೂ ಒಂದ ಮಾತ ಹೇಳ್ತೇನಿ. ನೆಪ್ಪ ಇಟಕೊ. ನಿನ್ನ ಕಾಲಮ್ಯಾಲ ನಿಂತು ಅನ್ನಾ ಸಂಪಾ ದಿಸಿಕೋ. ಆದರೂ ನೀ ಇನ್ನೂ ಸಣ್ಣಾಕಿ. ಜೋಡಿ ಬೇಕು ಅನಿಸಿದರ ಸದಾನ ಕಡೆ ಸೋಡಚೀಟಿ ತೊಗೊಂಡು ಬ್ಯಾರೆ ಮದುವೀ ಮಾಡಿಕೋ, ಅಂವನ ಕಿವಿ ಹಿಡಿದು ತಂದು ನಿಮ್ಮನ್ನ ಕೂಡಸಾಕ ನನಗ ಬರತೈತಿ. ಆದರ ಒಮ್ಮೆ ಮನಸ ಮುರದ ಮ್ಯಾಲೆ ಬಾಳೆ ಮಾಡಿದರ ಏನ ಸಂವಿ ಇರತೈತಿ. ಆ ಹುಡುಗೀಗೂ ಮೋಸ ಆಗೇದ. ಸಾಯೂತನಕ ಈ ಚಿಂತಿ ನನ್ನ ಕಾಡತೈತಿ."

ಆ ರಾತ್ರಿ ಅತ್ತೆ-ಸೊಸೆ ಕಣ್ಣು ಮುಚ್ಚಿರಲಿಲ್ಲ-

'ಸರವೂರು ಬಂತು, ಯಾರು ಇಳೀರಿ' ಕಂಡಕ್ಟರ ಕೂಗುತ್ತಿದ್ದ. ದಿಗ್ಗನೆ ಎದ್ದಳು ದೇವಕಿ. ಒಂದು ಕಾಲದ ಗಂಡನ ಮನೆ ಹುಡುಕಿಕೊಂಡು ಬಾಗಿಲಿಗೆ ಬಂದ ದೇವಕಿಯ ಕಾಲಿನ ಶಕ್ತಿ ಸೋರಿಹೋಯಿತು. ರಣಹಲಗೆ ಅಳು... ಜನರ ನೂಕು ನುಗ್ಗಲು ದಾಟಿದಳು-

"ನನ್ನವ್ವ ಏನು ಛಂದ ಕಾಣತಾಳ ನೋಡ್ರೇss ಕರೀ ಸೀರಿ ಉಟ ಗೊಂಡು, ಈಬೂತಿ ಪಟ್ಟಾ ಬಡಕೊಂಡು, ರುದ್ರಾಕ್ಷಿ ಸರಾ ಹಾಕ್ಕೊಂಡು

ಶಿವಪೂಜಿ ಮಾಡಾಕ ಹ್ವಾದಳೇನ್ರೇ ನನ್ನವ್ವ"- ಕೂಡಿದ ಹೆಂಗಸರೆಲ್ಲ ಹಾಡಿ ಹಾಡಿಕೊಂಡು ಅಳುತ್ತಿದ್ದಾಗ-

"ಸರ್ರಿ ಸರ್ರಿ ಸ್ವಾಮೇರ ಬಂದ್ರು ಜಾಗಾ ಬಿಡ್ರಿ. ಪಾದಪೂಜಿ ಮಾಡಸರಿ, ಕಾಯಿ ಒಡೀರಿ, ಕಪ್ಪಾರ ಹಚ್ಚರಿ, ಪತ್ರೀ ಹಂಚರಿ, ಬಾರೋ ಮಲ್ಲೇಶ, ಸದಾಶಿವ ನೀ ಇತ್ಲಾಗ ನಿಲ್ಲು. ಶೇಕವ್ವ, ವಿಜಯವ್ವ ಮುಂದಕ ಬರ್ರಿ. ಕಡೀ ಪೂಜಾ ಇದು, ಎತ್ತಬೇಕಿನ್ನ. ಮನೀ ಮಂದಿ ಎಲ್ಲಾರೂ ಬರ್ರಿ"- ಆ ಜನ ಜಾತ್ರೆಯಲ್ಲಿ ದೇವಕಿ ಯಾರೆಂದು ಯಾರೂ ಕೇಳಿರಲಿಲ್ಲ. ಸದಾಶಿವ ಮಾತ್ರ ಕೆಕ್ಕರಿಸಿ ನೋಡಿದ್ದ. ಅವನತ್ತ ಕಣ್ಣೆತ್ತಿಯೂ ನೋಡದೆ ಕಿರಣಳನ್ನೆತ್ತಿಕೊಂಡು ಗೋಡೆಗೆ ಒರಗಿ ನಿಂತಿದ್ದಳು ದೇವಕಿ.

ಗೌರತ್ತೆಯ ಮುಖ ಮಣ್ಣಿನಲ್ಲಿ ಮರೆಯಾದಂತೆ ದೇವಕಿಯೂ ಅಲ್ಲಿಂದ ಮರೆಯಾಗುತ್ತಿದ್ದಳು. ಸದಾಶಿವ ಸುಮ್ಮನಿರಲಿಲ್ಲ. ಶತಮೂರ್ಖ! ದೇವಕಿಯ ರಟ್ಟೆ ಹಿಡಿದೆಳೆದು ಹೊರಗಿನ ಕಟ್ಟೆಗೆ ಎಳೆದೊಯ್ದು, ನೀಯಾಕ ಬಂದಿ ಇಲ್ಲೆ? ಏನ ಸಂಬಂಧ? ಯಾರ ಹೇಳಿ ಕಳಿಸಿದ್ರು ನಿನಗ?" ಪೌರುಷ ತೋರಿಸಲು ದಬಾಯಿಸಿದ.

ಅಲ್ಲಿಯವರೆಗೆ ಅವಳ ಕಡೆಗೆ ಲಕ್ಷ್ಯ ಕೊಡದ ಮನೆಯ ಜನರೆಲ್ಲ ತಮಾಷೆ ನೋಡುವವರಂತೆ ಬಂದು ಗುಂಪಾದರು. ದೇವಕಿಯ ರಕ್ತ ಕುದಿಯಿತು. ಕಣ್ಣು ಕೆಂಪೇರಿದವು. ಹೊಟ್ಟೆಯ ಸಂಕಟ, ದುಃಖವೆಲ್ಲ ನುಗ್ಗಿ ಬಾಯಿಗೆ ಬಲ ಕೊಟ್ಟಿತು.

"ಏನೋ ಭಾಡ್ಯಾ. ನೀ ಯಾರು ಅಂತೀಯಲ್ಲ. ನಿನ್ನ ಹೇಣ್ತಿ ದೇವಕಿ ನಾನು. ಈ ಹುಡುಗಿ ನಿನ್ನ ಮಗಳು. ಈ ಮನೀ ಸೊಸಿ ನಾನು. ನಮ್ಮತ್ತೀ ಮಣ್ಣಿಗೆ ಬಂದೇನಿ. ಯಾರ ಯಾಕ ಕರಸಬೇಕೋ ನನ್ನs?"

ಸದಾಶಿವನ ಸಿಟ್ಟು ಏರುತ್ತಿದ್ದರೂ ಕಾಲಿನ ಬಲ ಸೋರಿಹೋಗಿ ಥರಥರ ನಡುಗತೊಡಗಿದ. ಆಧಾರಕ್ಕೆ ಹೆಬ್ಬಾಗಿಲ ಚೌಕಟ್ಟಿಗೆ ಆನಿಸಿ ನಿಂತು ಚೀರಿದ. "ಹೇಣ್ತೀ ಇದ್ದಿ. ಆದರ ಈಗಲ್ಲ. ಮಾನಾ ಮರ್ಯಾದಿ ಇದ್ದವರು

ಮನ್ಯಾಗ ಇರತಾರ. ಕಂಡ ಕಂಡ ಗಂಡಸರ ಹಿಂದ ಬೀದಿ ಬೀದಿ ಅಡ್ಯಾಡಾಕ ಓಡಿಹೋಗೂದಿಲ್ಲ."

"ಓಡಿ ಹೋದಾಕಿ ನಾ ಅಲ್ಲೋs ನೀನು. ಹೇಳದ ಕೇಳದ ಹೋಗಿ ಈ ಗೊಂಬೀನ್ನ ಲಗ್ನಾ ಮಾಡಿಕೊಂಡ ಬಂದಿ, ಪ್ರೇಮ, ಪ್ರೀತಿ ಅಂತ ನನ್ನ ಹಿಂದ ಓಡ್ಯಾಡಿ ಲಗ್ನಾ ಮಾಡಿಕೊಂಡದ್ದಕ್ಕ ರಜಿಸ್ಟ್ರಾರ ಕಚೇರ್ಯಾಗ ದಾಖಲೆ ಐತಿ ನಾ ಮನಸ ಮಾಡಿದ್ದರ ನಿನ್ನ ಜೇಲಿಗೆ ಕಳಸತಿದ್ದೆ. ಪುಣ್ಯವಂತಿ, ನಮ್ಮ ಗೌರತ್ತಿ ಮಾರೀ ನೋಡಿ ಸುಮ್ಮನಾಗೀನಿ. ಯಾಕ ಬಂದಿ ಅಂದೆಲ್ಲಾ. ಒಂಬತ್ತ ತಿಂಗಳ ಹೊತ್ತ ಹಡದ ತಾಯೀನ ಬಾವಿಪಾಲು ಮಾಡಿದವರು ನೀವು, ಗಂಡಸರs ? ನನಗ ಗೊತ್ತಾಗಿದ್ದರ ನಾ ಜ್ವಾಪಾನಾ ಮಾಡತಿದ್ದೆ ಅತ್ತೀನ. ಇಕಾ ನೋಡಿಲ್ಲೆ, ಅತ್ತೀ ಪತ್ರಾ" ಎಂದು ಗೌರವ್ವನ ಪತ್ರವನ್ನು ಅವನತ್ತ ಬೀಸಿ ಒಗೆದವಳೇ ಮಗಳನ್ನು ಎತ್ತಿಕೊಂಡು ಭರಭರ ನಡೆದುಬಿಟ್ಟಳು. ಕೂಡಿದ ಮಂದಿ ಉಸಿರಾಡುವದನ್ನೂ ಮರೆತು ಕಲ್ಲಿನಂತೆ ನಿಂತಿದ್ದರು. ಆ ನಿಶ್ಶಬ್ದವನ್ನು ತೂರಿಕೊಂಡು ಒಂದು ಹೆಣ್ಣಿನ ಬಿಕ್ಕಳಿಕೆ ಮಾತ್ರ ದೇವಕಿಯ ಬೆನ್ನು ಹತ್ತಿತ್ತು.

ಕಾಣೆಯಾದವನು

ಎತ್ತರವಾದ ದೊಡ್ಡ ಗೇಟು, ವಿಶಾಲವಾದ ಕಾಂಪೌಂಡಿನ ಒಂದು ಬದಿಗೆ ಹಚ್ಚ ಹಸುರು ಬಣ್ಣದ ಕಂತನಿಯಂಥ ಲಾನ್, ಸುತ್ತಲೂ ಬಣ್ಣ ಬಣ್ಣದ ಗುಲಾಬಿ ಗಿಡಗಳ ಚೌಕಟ್ಟು, ಇನ್ನೊಂದು ಬದಿಗೆ ವರ್ತುಲಾಕಾರದ ನೀರಿನ ತೊಟ್ಟಿ, ಮಧ್ಯ ಕಾರಂಜಿ, ತುಸು ದೂರದಲ್ಲಿ ದೊಡ್ಡ ಬಂಗಲೆ, ಗೇಟಿಗೆ ಇಂಗ್ಲಿಷಿನಲ್ಲಿ ಬಂಗಾರ ಬಣ್ಣದಲ್ಲಿ ಸುಂದರವಾಗಿ ಬರೆದ ಥಳಥಳಿಸುವ ಬೋರ್ಡು 'ಶ್ರೀ ಮುಕುಂದರಾವ್ ಐ. ಎ ಎಸ್., ಮಹಾನಿರ್ದೇಶಕರು' ಎಂದು. ಗೆಳೆಯನೇ ಮುಂದೆ ಬಂದು ನಿಂತಂತಾಗಿ ಸುಧೀರನ ಮನಸ್ಸು ತುಂಬಿ ಬಂದು ಬೋರ್ಡಿನ ಮೇಲೆ ಮೃದುವಾಗಿ ಕೈ ಆಡಿಸಿದ. ಮಾಲಿಯ ಹತ್ತಿರ ಕೂತು ಬೀಡಿ ಸೇದುತ್ತ ಹರಟೆ ಹೊಡೆಯುತ್ತಿದ್ದ ವಾಚ್‌ಮನ್ ಓಡೋಡಿ ಬಂದ. ಬಂಗ್ಲೆಯ ಸಂರಕ್ಷಣೆ ಅವನ ಕರ್ತವ್ಯವಲ್ಲವೇ ? ಯಾವನೋ ಹಾದಿ ಹೋಕ ಹೀಗೆ ಸಂಶಯಾಸ್ಪದ ರೀತಿಯಲ್ಲಿ ನಿಂತಿದ್ದರೆ ಸುಮ್ಮನಿದ್ದಾನೆಯೆ ಅವನು.

"ಯಾರ ಬೇಕಾಗಿತ್ತಪಾ ? ಇಲ್ಲ್ಯಾಕ ನಿಂತಿ ನೀನು ?" ಒರಟಾಗಿ ಕೇಳಿದ. ಸುಧೀರನ ವೇಷಕ್ಕೆ ತಕ್ಕ ಮಾತು.

"ನಾನು ಸಾಹೇಬರ ಗೆಳೆಯಾ. ಅವರ ಊರಿಂದ ಬಂದೀನಿ. ಸಾಹೇಬರು ಮನೀಯೊಳಗ ಅದಾರೇನು ?"

"ನಿಮ್ಮ ಹೆಸರಿನ ಚೀಟಿ ಕೊಡ್ರಿ. ಮಲ್ಲಣ್ಣ ತೋರಿಸಿಕೊಂಡು ಬರ್ತಾನ " ವಾಚ್‌ಮನ್ ತುಸು ಮೆತ್ತಗಾಗಿ ಹೇಳಿದ.

ಪೀಂ... ಪೀಂ... ಕಾರು ಇತ್ತ ಬರುತ್ತಿತ್ತು. "ಸಾಹೇಬರು ಆಫೀಸಿಗೆ ಹೊಂಟಾರ." ಗೇಟು ತೆಗೆಯುತ್ತ ಅವನೇ ಹೇಳಿದ. ಹತ್ತಿರ ಬರುತ್ತಿದ್ದ

ಹಾಗೆ ಕಾರಿನ ವೇಗ ಕಡಿಮೆಯಾಗಿತ್ತು. ಸುಧೀರ ಎರಡು ಹೆಜ್ಜೆ ಮುಂದಿಟ್ಟ. ಮೊದಲಿನಂತೆ 'ಮುಕುಂದಾ' ಎಂದು ಕೂಗಲು ಸಾಧ್ಯವಾಗದೆ ತಬ್ಬಿಬ್ಬಾಗಿ ನಿಂತ. ಅವನ ಅದೃಷ್ಟಕ್ಕೆ ಮುಕುಂದ ಹೊರಳಿ ನೋಡಿದ. ದಿಟ್ಟಿಸಿದ, ಬತ್ತಿದ ಕೆನ್ನೆ, ಹಣ್ಣಾಗುತ್ತಿದ್ದ ಮೀಸೆ, ಭಾವಪೂರ್ಣ ಕಣ್ಣುಗಳು, ನೀಳವಾದ ಮೂಗು, ಆ ಮೂಗನ್ನು ಆಗಾಗ ಜಗ್ಗಿ ಕೀಟಲೆ ಮಾಡುತ್ತಿದ್ದುದನ್ನು ಮುಕುಂದ ಮರೆತಿರಲಿಲ್ಲ. ಬಿಗಿದ ತುಟಿಗಳನ್ನು ಅರಳಿಸಿದ.

"ಓs ಸುಧೀ ಯಾವಾಗ ಬಂದಿ?" ತಟ್ಟನೆ ಮಾತು ನಿಲ್ಲಿಸಿ ಕೈಗಡಿಯಾರ ನೋಡಿಕೊಂಡ. "ಸ್ಸಾರಿ. ನಾ ಈಗ ಒಂದ ಅರ್ಜೆಂಟ ಮೀಟಿಂಗಿಗೆ ಹೊರಟೇನಿ, ಟೈಮಿಲ್ಲ. ಬಹುಶಃ ಸಂಜಿಗೇ ಬರ್ತೇನಿ, ಒಳಗ ಹೋಗು. ಮಲ್ಲಾs ಸಾಹೇಬರ್ನ ಕರಕೊಂಡು ಹೋಗಿ ಬಾಯಿಯವರಿಗೆ ಭೆಟ್ಟಿ ಮಾಡಿಸು. ಬಾಯ್ ಸುಧೀ ಬರ್ತೇನಿ. ಮತ್ತ ಮಾತಾಡೂಣು."

ಪಾವಟಿಗೆ ಹತ್ತುತ್ತಿರುವಾಗ ಮಾತು ಕೇಳಿತು, "ಯಾರ ಬಂದಾರ? ಸಾಹೇಬರ ಗೆಳೆಯ ಊರಿಂದ ಬಂದಾರ? ಹೊರಗಿನ ಗೆಸ್ಟರೂಮಿನ್ಯಾಗ ಕೂಡ್ರಸು. ಗಣೇಶಗ ಹೇಳಿ ಚಹಾ ತಿಂಡಿ ತಂದು ಕೊಡು."

ಭಾಮಿನಿ ಅತ್ತಿಗೆಯ ದನಿಯೇ ಇರಬೇಕು. ಆಕೆ ಹಳ್ಳಿಗೆ ಒಂದು ಸಲವೂ ಬರಲಿಲ್ಲ–ಮಾತಾಡಿಸಬೇಕೆಂದು ಸುಧೀರನ ಜೀವ ಹಾತೊರೆಯಿತು. ಅಪಚರಿತನಾಗಿ ಕರೆಯದೆ ಹೋಗುವುದು ಸಭ್ಯತೆಯಲ್ಲವೆನ್ನಿಸಿ ಅಲ್ಲಿಯೇ ಕೂತ. ಖಾರದ ಗೋಡಂಬಿ, ಉಪ್ಪಿಟ್ಟು ಬಿಸ್ಕಿಟಿನೊಡನೆ ಚಹ ಬಂದಿತು. ಯಾಂತ್ರಿಕವಾಗಿ ಬೆರಳುಗಳು ಉಪ್ಪಿಟ್ಟಿನಲ್ಲಿ ಆಡುತ್ತಿದ್ದವು...

"ಏ ಸುಮಾs, ಸುಮತೀs, ನೋಡಿಲ್ಲೆ ಯಾರ ಬಂದಾರ. ಹೂಗಾರ ಮಾಸ್ತರ್ರು ನಮಗ ಕನ್ನಡ ಕಲಸತ್ತಿದ್ದರು. ನನ್ನ ಮ್ಯಾಲೆ ಭಾಳ ಪ್ರೀತಿ ಅವರಿಗೆ ಅಂತ ಹೇಳತಿದ್ದೆ. ಪ್ಯಾಟ್ಯಾಗ ಭೆಟ್ಟಿ ಆದರು ಕರಕೊಂಡು ಬಂದೆ."

"ನಮಸ್ಕಾರರೀ, ನೀವು ಬಂದದ್ದಕ್ಕ ಸಂತೋಷ ಆತು. ನಿಮ್ಮ ಬಗ್ಗೆ ಇವರು ಭಾಳ ಹೇಳತಿರತಾರ."

"ನಮಸ್ಕಾರವಾ, ಎಲ್ಲಾ ಆರಾಮು ? ಸುಧೀರನ್ನೂ ನಾ ಭಾಳ ನೆನೆಸ ತಿದ್ದೆ. ಇಂಥಾ ಶಿಷ್ಯರು ಸಿಗೂದs ಅಪರೂಪ. ಕ್ಲಾಸಿನ್ಯಾಗ ಎಲ್ಲಾದರೊಳಗೂ ಅವನs ಫಸ್ಟು. ಏನವಾ ಬಹಳ ಶಾಣ್ಯಾ. ಆದರ ಏನ ಮಾಡೂದು, ನೀಲಕಂಠಪ್ಪ ತೀರಿಕೊಂಡ ಮ್ಯಾಲೆ ಮನೀ ಜವಾಬ್ದಾರಿ ಎಲ್ಲಾ ಇವನ ಕೊಳ್ಳಿಗೇ ಬಿತ್ತು. ಹೆಚ್ಚು ಕಲತಿದ್ದರ ಎಷ್ಟು ಮುಂದ ಬರತಿದ್ನೋ" ಮಾಸ್ತರರ ಅಂತಃಕರಣ ಮಿಡುಕಿತ್ತು.

ತಾನು ಹುಡುಗಿಯಂತೆ ನಾಚಿದ್ದ. "ಇರಲಿ ಬಿಡ್ರಿ ಮಾಸ್ತರ್ರ ಅದೆಲ್ಲಾ ಯಾಕೀಗ. ನಿಮ್ಮಂಥಾ ಹಿರಿಯರ ಆಶೀರ್ವಾದದಿಂದ ನಾವು ಆರಾಮs ಅದೀವಿ. ಕೂಡ್ರಿ ಚಾಪಿ ಮ್ಯಾಲ, ದಿಂಬಿಗೆ ಆನಿಸಿ ಆರಾಮು ಕೂಡ್ರಿ. ಸುಮಾ, ಮಾಸ್ತರ್ರಿಗೆ ಏನರೆ ಕೊಡಲ್ಲ."

ಅಡಿಗೆ ಮನೆಗೆ ಹೋದ ಸುಮತಿ ಪಾನಕಕ್ಕೆ ಲಿಂಬಿ ಹಣ್ಣು, ಚಹಕ್ಕೆ ಹಾಲು ಇಲ್ಲದೆ ಪೇಚಾಡಿ ಹುಣಿಸೆ ಹಣ್ಣಿನ ರಸಕ್ಕೆ ಬೆಲ್ಲ ಕೂಡಿಸಿ ಪಾನಕ ಮಾಡಿ ತಂದಿದ್ದಳು. ಅದನ್ನು ಕೊಡುವಾಗಲೂ ಎಷ್ಟು ಸಂಕೋಚ ಅವಳಿಗೆ. ಆದರೆ ಮಾಸ್ತರರು ಪ್ರೀತಿಯಿಂದ ಚಪ್ಪರಿಸುತ್ತ ಪಾನಕ ಕುಡಿದು ಮಾತಿಗೆ ಹಚ್ಚಿದ್ದರು. ಅವರಿಗೆ ಹೂಂಗುಟ್ಟುತ್ತ, ನಗುತ್ತ ತನ್ನ ಹರಿದ ಸೀರೆಯ ಸೆರಗು ಕಾಣದಂತೆ ಮರೆ ಮಾಡಿ ಹೊಸ್ತಿಲ ಒಳಗೆ ಕುಳಿತಿದ್ದಳು ಸುಮತಿ...

ಉಪ್ಪಿಟ್ಟು ಒಳಗೆ ಇಳಿಯಲು ಹಟ ಮಾಡುತ್ತಿತ್ತು. ಬಾಗಿಲ ಹತ್ತಿರ ಸಪ್ಪಳವಾಯಿತು. ತಲೆ ಎತ್ತಿದ. ದಿಗ್ಗನೆ ಎದ್ದು ನಿಂತ, ಮಾತೂ ಹೊರಡ ಲಿಲ್ಲ. ಆಭರಣ, ಆಧುನಿಕ ಕೇಶಾಲಂಕಾರ ರೇಶ್ಮೆಸೀರೆಯಿಂದ ಅಲಂಕೃತಳಾಗಿ ಹೊರಗೆ ಹೋಗಲು ಸಿದ್ಧಳಾಗಿ ಬಂದಿದ್ದಳು ಭಾಮಿನಿ.

"ನಮ್ಮ ಕ್ಲಬ್ಬಿನ ಮೀಟಿಂಗಿಗೆ ಹೊರಟೇನಿ. ಗಣೇಶ ಊಟಕ್ಕ ನೀಡತಾನ. ನೀವು ಊಟಾ ಮಾಡ್ರಿ. ನಾವು ಬರೋದು ಲೇಟ ಆಗ್ತದ."

"ಹುಡುಗರೂ ಇಲ್ಲೇನು ಮನಿಯೊಳಗ ?" ಮನಸ್ಸಿನ ಮಾತು ಹೊರ ಬಂದಿತ್ತು.

"ಅನುಪಮ ಟೂರಿಗೆ ಹೋಗ್ಯಾನ. ಆದಿತ್ಯ ಕ್ರಿಕೆಟ್ ಮ್ಯಾಚಿಗೆ ಹೋಗ್ಯಾನ. ಇಬ್ಬರೂ ದೊಡ್ಡವರಾಗ್ಯಾರ. ಅವರಿಗೂ ಸಾಕಷ್ಟು ಆ್ಯಕ್ಟಿ-ವಿಟೀಜ ಇರತಾವ. ಯಾವಾಗ ಮನೀಗೆ ಬರ್ತಾರೋ ಹೋಗ್ತಾರೋ ಗೊತ್ತs ಆಗೂದಿಲ್ಲ. ನಾ ಹೋಗಿ ಬರ್ತೀನಿ."

"ಇದನ್ನ..." ತಡವರಿಸುತ್ತ ಸುಧೀರ ಕೈ ಚಾಚಿದ. "ಮುಕುಂದಗ ಪ್ರೀತಿ ಅಂತ ಸುಮತಿ ಬೇಸನ್ ಉಂಡಿ ಮಾಡಿ ಕಳಿಸ್ಯಾಳ. ತೊಗೊಳ್ರಿ"

"ಅವರ ವೇಟ ಜಾಸ್ತಿ ಆಗೇದ ಅಂತ ಡಾಕ್ಟರರು ಡಯಟ್ ಮಾಡಲಿಕ್ಕೆ ಹೇಳ್ಯಾರ. ಅವರು ಸ್ವೀಟ ತಿನ್ನೂದಿಲ್ಲ. ಇರಲಿ, ಗಣೇಶಾ ಈ ಪ್ಯಾಕ್ ತಗಡ ಇಡು. ನಾ ಬರ್ತೀನಿ" ಸಕ್ಕರೆ ತುಪ್ಪಕ್ಕಾಗಿ ಶೆಟ್ಟಿ ಅಂಗಡಿಯಲ್ಲಿ ಮಾಡಿದ ೫೦ ರೂಪಾಯಿ ಸಾಲದ ನೆನಪಿನಿಂದ ಸುಧೀರನ ಕತ್ತು ಬಗ್ಗಿ ಹೋಯಿತು.

ಮಧ್ಯಾಹ್ನ ಸರಿಯಾಗಿ ೧೨ ಗಂಟೆಗೆ ಗಣೇಶ ಊಟಕ್ಕೆ ಕರೆದ. ಬಗ್ಗಿದರೆ ಮುಖ ಕಾಣುವಷ್ಟು ಫಳಫಳ ಹೊಳೆಯುವ ದೊಡ್ಡ ಮೇಜಿನ ಸುತ್ತಲಿನ ಖಾಲಿ ಕುರ್ಚಿಗಳ ನಡುವೆ ಸುಧೀರ ಒಬ್ಬನೇ ಕುಳಿತಿದ್ದ. ಎರಡು–ಮೂರು ತರದ ಪಲ್ಯಗಳು, ಚಟ್ನಿ, ಬಿಸಿ ಚಪಾತಿ, ಅನ್ನ, ತುಪ್ಪ, ಸಾರು, ಗಟ್ಟಿ ಮೊಸರು, ಸಿಹಿ ತಿಂಡಿ– ಅತಿಥಿ ತುಂಬ ಸಂತೋಷ ಪಡುವಂಥ ಸುಗ್ರಾಸ ಭೋಜನ. ಸುಧೀರನ ಮೌನ, ಸಂಕೋಚ ತಿಳಿದುಕೊಂಡ ಗಣೇಶ ಉಪಚಾರ ಮಾಡುತ್ತಿದ್ದ. ಆದರೆ ಅವನ ಮನಸ್ಸು, ದೇಹ ಎರಡೂ ಅಸ್ತವ್ಯಸ್ತ ಸ್ಥಿತಿಯಲ್ಲಿದ್ದವು. ಊಟದ ಮಧ್ಯೆ ಹಿಂಬಾಗಿಲಲ್ಲಿ ಯಾರೋ ಕರೆದರು. ಗಣೇಶ ಹೋದ. ಆಳುಗಳು ಮೂಟೆ ಇಳಿಸಿದ ಸದ್ದು. "ಪರಮೇಶಪ್ಪ ಗೋಧಿ, ಸಕ್ಕರೆ ಚೀಲಾ ಕಳಿಸ್ಯಾರಂತ ಬಾಯಿಯವರಿಗೆ ಹೇಳು ಗಣೇಶಪ್ಪಾ ಮರೀಬ್ಯಾಡಾ. ಇಕಾ ನೀನೂ ಚಹಾ ಕುಡಿ." ನಿಶ್ಶಬ್ದವನ್ನು ತೂರಿ ಬಂದ ಮಾತು ಸುಧೀರನ ಕಿವಿಯಿಂದ ಮಿದುಳಿಗೆ ತಟ್ಟಿ ಹೊಟ್ಟೆಗಿಳಿಯಿತು. ಏನೋ ಒಂಥರಾ ಸಂಕಟ, ಸುರುವಾಗಿ ಬಾಯಲ್ಲಿ ಚಿಳಿ ಚಿಳಿ ನೀರು ತುಂಬಿತು. ತಿಂದದ್ದೆಲ್ಲ ಹೊರಗೆ ಬರುವಂತೆ ಅನಿಸಿದಾಗ ಅರ್ಧಕ್ಕೇ ಊಟ ಬಿಟ್ಟು ಬಚ್ಚಲಿನಲ್ಲಿ ವಾಂತಿ ಮಾಡಿ, ಗಾಬರಿಯಾದ ಗಣೇಶನಿಗೆ ಸಮಾಧಾನ ಹೇಳಿ ಸುಧೀರ ಕೋಣೆಗೆ ಹೋಗಿ ಮಲಗಿಕೊಂಡ–

ತಿಂಡಿ ತಿಂದ ಮೇಲೆ ಒಬ್ಬನೇ ಕುಳಿತು ಏನು ಮಾಡುವದೆಂದು ಊರಲ್ಲಿ ಅಡ್ಡಾಡಲು ಹೋಗಿದ್ದ. ಅಪರಿಚಿತ ಊರು, ಜನ. ಕಾಲು ಹೋದತ್ತ ಅಡ್ಡಾಡಿ ಅವರಿವರನ್ನು ಕೇಳಿ ಅಲ್ಲಿಯ ಸುಪ್ರಸಿದ್ಧ ಎಸ್.ಎಮ್.ಕೆ. ಕಾಲೇಜಿನ ಭವ್ಯ ಕಟ್ಟಡ ನೋಡಿ ಸಂತಸಪಟ್ಟಿದ್ದ. ಅಲ್ಲಿಯೇ ಗಿಡದ ನೆರಳಲ್ಲಿ ಕುಳಿತು ತನ್ನ ಮಗ ಸಂದೀಪನ ಭವಿಷ್ಯವನ್ನು ಕುರಿತು ಕನಸು ಕಂಡಿದ್ದ. ತನ್ನ ಹಳ್ಳಿ, ತವರೂರು ಬಿಟ್ಟು ಬೇರೆ ಯಾವ ಊರನ್ನೂ ನೋಡದ ಸುಮತಿಯ ಬಗ್ಗೆ ಅನುಕಂಪ ಹುಟ್ಟಿ. ಅವಳನ್ನೂ ಒಮ್ಮೆ ಅಲ್ಲಿಗೆ ಕರೆದು ತರಬೇಕೆಂದು ಯೋಚಿಸಿದ್ದ. ಹಾದಿ ತಪ್ಪಿ ಅಲ್ಲಲ್ಲಿ ಅಡ್ಡಾಡಿ ಮನೆಗೆ ಬರುವಷ್ಟರಲ್ಲಿ ಬಿಸಿಲು ಏರಿತ್ತು, ತಲೆ ಸಣ್ಣಗೆ ನೋಯುತ್ತಿತ್ತು. ಈಗ ಊಟವೂ ಸೇರಲಿಲ್ಲ. ಹೀಗೆ ಏಕಾಗುತ್ತಿದೆ ತನಗೆ ! ತಿಳಿಯದೆ ಒದ್ದಾಡಿದ. ತುಪ್ಪಳದಂಥ ಹಾಸಿಗೆಯ ಮೇಲೆಯೂ ನಿದ್ದೆ ಬಾರದೆ ಹೊರಳಾಡುತ್ತ ಸಂಜೆ ಕಳೆದ. ಸುತ್ತೆಲ್ಲ ಝಗ ಝಗಿಸುವ ಬೆಳಕಿದ್ದರೂ ತನ್ನನ್ನು ಚುಚ್ಚುವ ನೀರವತೆಯನ್ನು ಎದುರಿಸ ಲಾಗದೆ ಮುಸುಕು ಬೀರಿ ಮಲಗಿಕೊಂಡಿದ್ದ.

ಬೈಕು ನಿಂತಿತು. ಬೂಟಿನ ಸದ್ದು ಒಂದೇ ಏಟಿಗೆ ಎರಡೆರಡು ಮೆಟ್ಟಲು ಹಾರಿ ಹತ್ತಿರ ಬರುತ್ತಿತ್ತು. ಜೀವ ತಡೆಯದೆ ಎದ್ದು ಹೊರಗೆ ಹೋದ. ತನ್ನೊಬ್ಬ ಗೆಳೆಯನೊಡನೆ ಒಳಗೆ ಬರುತ್ತಿದ್ದ. ನಿಂತು ಇವನಾರೋ ಅನ್ನು ವಂತೆ ಮಿಕಿ ಮಿಕಿ ನೋಡಿದ. "ನಿನ್ನ ಹೆಸರು ಆದಿತ್ಯ ಅಲ್ಲs ? ಮುಕುಂದ ಸಣ್ಣಾವ ಇದ್ದಾಗ ಥೇಟು ನಿನ್ಹಾಂಗ ಇದ್ದ. ನಾನು ಅವನ ಗೆಳೆಯಾ ಸುಧೀರ."

ಆದೇ ಅಪರಿಚಿತ ದೃಷ್ಟಿಯಿಂದ ನೋಡುತ್ತ ಆದಿತ್ಯ– "ಹೌದೇನು. ನಾ ಅಂತೂ ನಿಮ್ಮನ್ನ ಎಂದೂ ನೋಡಿಲ್ಲ ಪಪ್ಪಾ, ಮಮ್ಮಿ ಬರೂ ಹೊತ್ತು ಆಗೇದ. ಒಳಗ ಕೂಡ್ರಿ. ಬಾರೋ ಸಚಿನ್." ಎನ್ನುತ್ತ ಒಳಗೆ ಹೋಗಿ ಬಿಟ್ಟ. ಸುಧೀರನ ತಲೆನೋವು ಹೆಚ್ಚಾಯಿತು. ಮೈಯಲ್ಲಿ ಚಳಿ ಚಳಿ, ಊಟ ಬೇಡವೆಂದು ಗಣೇಶನಿಗೆ ಹೇಳಿ ಅವನ ಒತ್ತಾಯಕ್ಕೆ ಒಂದು ಲೋಟ ಹಾಲು ಕುಡಿದ. ತನ್ನ ಕೋಣೆ, ಮಂಚ, ಹಾಸಿಗೆಯೂ ಬೇಸರವಾಗಿ ಹಾಲಿನಲ್ಲಿ ಟಿ.ವಿ. ನೋಡುತ್ತ ಕುಳಿತ. ಹತ್ತು ಗಂಟೆಯ ಮೇಲೆ ಹೆಂಡತಿಯೊಡನೆ ಪಾರ್ಟಿ ಮುಗಿಸಿಯೇ ಬಂದ ಮುಕುಂದ ತುಂಬಾ ಬಳಲಿದ್ದ. "ಹಾಯ್ !

ಸುಧೀ ಊಟ ಆತೇನು, ನಿನಗ ಊಟಾ ಮಾಡಸು ಅಂತ ಭಾವಶಾ ಅಲ್ಲಿಂದ ಫೋನ್ ಮಾಡಿದ್ಲು" ಎನ್ನುತ್ತ ಉತ್ತರಕ್ಕೆ ಕಾಯದೆ ಒಳಗೆ ಹೋದ. ಡ್ರೆಸ್ ಬದಲಾಯಿಸಿ ಡ್ರಿಂಕ್ಸ್ ಗ್ಲಾಸ್ ಹಿಡಿದುಕೊಂಡು ಬಂದು ಸುಧೀರನ ಪಕ್ಕದಲ್ಲಿ ಕುಳಿತು ಬೆನ್ನು ಚಪ್ಪರಿಸಿ ಹೇಳಿದ, "ಊರೊಳಗ ಕೆಲಸಾ, ಅಂಗಡಿ, ಟ್ಯೂಶನ್, ಸಂಸಾರ ಅಂತ ಜಂಜಾಟ ಇದ್ದs ಇರತದ. ಆರಾಮ ಆಗಿ ನಾಲ್ಕು ದಿನಾ ಇದ್ದು ಹೋಗು." ಸುಧೀರ ಸುಮ್ಮನಿದ್ದ.

"ಸ್ವಲ್ಪ ಕುಡೀತಿಯಾ ಸುಧೀs ಹಾಕಲ್ಯಾ ?" ಸುಧೀರ ಮೌನವಾಗಿ ತಲೆ ಆಡಿಸಿದ. ಅವನ ದೃಷ್ಟಿಯೆಲ್ಲ ಟಿ.ವಿ. ಮೇಲಿತ್ತು. ಗೆಳೆಯನ ಕಣ್ಣು ಗಳಲ್ಲಿ ನೋಡಿದರೆ ಇನ್ನೇನು ಕಾಣುತ್ತೇನೋ ಎನ್ನುವ ಹೆದರಿಕೆ. ಮನಸ್ಸಿನಲ್ಲಿ ಮೂಡಿದ ಮಾತುಗಳಲ್ಲಿ ಒಂದನ್ನೂ ಹೇಳದಾದ. "ನಿನಗ ಬ್ಯಾಡಪಾ ಈ ದುರಭ್ಯಾಸ."

ದಿನಾಲು ನೂರಾರು ಜನರನ್ನು ಭೆಟ್ಟಿ ಆಗೂ ಮನುಷ್ಯಾಗ ಇನ್ನೊಬ್ಬರ ಮನಸ್ಸಿನ್ಯಾಗ ಇಳದು ಮಾತನಾಡೂ ಸ್ವಭಾವನ ಹೋಗಿ ಬಿಡತದೋ ಏನೋ. ಇಂವಾ ಅದs ಹಿಂದಿನ ಮುಕುಂದನs ಅಲ್ಲಾ. ಪೂರ್ಣ ಬದಲ ಆಗ್ಯಾನ. ಸುಧೀರ ಯೋಚಿಸುತ್ತಿದ್ದ. "ಸುಧೀ, ನಾ ಕುಡೀತಿನಂತ ತಪ್ಪು ತಿಳಕೋ ಬ್ಯಾಡಾ. ಹಾಯ್ ಸೊಸೈಟಿಯೊಳಗ ಇವೆಲ್ಲಾ ಬೇಕs ಬೇಕಾಗ ತಾವ. ಇರಲಿ, ನೀ ಹ್ಯಾಂಗ ಅದೀ. ಹೆಲ್ತ ಸರಿಯಾಗಿ ಇದ್ದಾಂಗ ಕಾಣೂ ದಿಲ್ಲ. ನನಗಿಂತ ಆರು ತಿಂಗಳು ಸಣ್ಣಾವ. ಆಗಲೇ ಮುದುಕ ಆಗೀದಿ. ಮನ್ಯಾಗ ಎಲ್ಲಾರೂ ಆರಾಮ ಅದಾರ ? ಮಕ್ಕಳು ಏನ ಕಲೀತಾರ ? ನಾವು ಭೆಟ್ಟಿ ಆಗಿ ಭಾಳ ವರ್ಷ ಆತ ಅಲ್ಲs" ಮತ್ತೆ ಇಂಥ ಅವಕಾಶ ಸಿಗಲಿಕ್ಕಿಲ್ಲ ವೆನ್ನುವಂತೆ ಮುಕುಂದ ಒಂದೇ ಉಸುರಿಗೆ ಮಾತನಾಡಿದ.

"ಸಂದೀಪ ಪಿ. ಯು. ಸಿ. ಸೆಕೆಂಡ್ ಇಯರ ಅದಾನ. ರ್‍ಯಾಂಕ್ ಸ್ಟೂಡಂಟು. ಶಾಣ್ಯ ಅದಾನ. ರೇವತಿ ಈಗ ಎಸೆಸೆಲ್ಸಿ ಕಲೀತಾಳ."

"ವ್ಹಾ ! ಅಡ್ಡೀಯಿಲ್ಲ. ಬ್ರಿಲಿಯಂಟ ಚ್ಯಾಪ್. ಮುಂದ ಭಾಳ ಕಲಸು ಅವಂಗ. ಇಂಜಿನಿಯರ ಆಗಲಿ ಅಥವಾ ಡಾಕ್ಟರ ಆಗಲಿ. ನಿನ್ನಾಂಗ

ಅಂಗಡ್ಯಾಗ ಕಾರಕೂನಕಿ ಮಾಡಾಕ ಹಚ್ಚಬ್ಯಾಡಾ. ಮಕ್ಕಳ ಭವಿಷ್ಯ ಛೊಲೋ ಆಗೂಹಾಂಗ ನಾವು ಪ್ರಯತ್ನ ಮಾಡಬೇಕು."

ಟ್ರಿನ್ ಟ್ರಿನ್... "ತಡಿ ಬಂದೆ." ಬೆಡ್‌ರೂಮಿಗೆ ಓಡಿದ ಮುಕುಂದ,

"ಅಪ್ಪಾs" ತಾನು ಬರುವಾಗ ಸಂದೀಪ ತುಂಬ ಸಂಕೋಚದಿಂದ ಕೇಳಿದ್ದ. "ನಮ್ಮ ರಿಜಲ್ಟ ಹತ್ತರ ಬಂತು. ಗೆಳೆಯರೆಲ್ಲಾ ಮುಂದಿನ ಕಾಲೇಜಿಗೆ ಹೋಗೂ ತಯಾರಿ ನಡಿಸ್ಯಾರ. ನಾ ಪರೀಕ್ಷೆಯೊಳಗ ಛೊಲೋ ಮಾಡೀನಿ. ೮೫ ರಿಂದ ೯೦ ಪರಸೆಂಟಾದ್ರೂ ಆಗ್ತದ. ನನ್ನೂ ಕಾಲೇಜಿಗೆ ಕಳಸ್ತೀರೇನು ? ಹೇಳ್ರಿ. ಒಂದ ಡಿಗ್ರಿ ಸಿಕ್ಕರ ನೌಕರಿ ಹಿಡದು ನಿಮಗೂ ನೆರವಾಗತೀನಿ. ನಮ್ಮ ಮನೀ ಆರ್ಥಿಕ ಪರಿಸ್ಥಿತಿನೂ ಸುಧಾರಸ್ತದ."

ಮೈತುಂಬ ಸಾಲದ ಹೊರೆ ಹೊತ್ತು ಎಂಟನೂರು ರೂಪಾಯಿ ಸಂಬಳದಲ್ಲಿ ಸಂಸಾರ ನಡೆಸಲು ಒದ್ದಾಡುವ ತಾನು ಏನು ಹೇಳಲೂ ತೋಚದೆ ಸುಮ್ಮನಿದ್ದ. ಸುಮತಿ ಒಂದು ಸೂಚನೆ-ನೀಡಿದ್ದಳು. "ನಿಮ್ಮ ಲಂಗೋಟಿ ಗೆಳೆಯಾ ವರ್ಗ ಆಗಿ ಈ ಜಿಲ್ಲಾಕ ಸಾಹೇಬರಾಗಿ ಬಂದಾರ ಅಂತ ಭೆಟ್ಟಿ ಆಗಲಿಕ್ಕೆ ಹೊರಟೀರಲ್ಲ. ಸಂದೀಪನ ವಿದ್ಯಾಭ್ಯಾಸಕ್ಕ ಏನಾದರೂ ಸಹಾಯ ಮಾಡ್ತಾರೇನೋ ಕೇಳಿ ನೋಡ್ರೆಲ್ಲ". ಆ ಮಾತನ್ನು ಅತ್ತ ತಳ್ಳು ವಂತೆ ತಲೆ ಕೊಡವಿದ ಸುಧೀರ.

"ಹಾಂ. ಹಲೋ ಹಲೋ ನಾನು... ನಾ ನು ಮುಕುಂದರಾವ್ ಮಾತಾಡ್ತಿರೋದು. ಯಾರು ? ಪಾಟೀಲರೇನು ? ಹಾಂ ನಮಸ್ಕಾರರೀ" ಟ್ರಂಕಾಲ್ ಬೇಡವೆಂದರೂ ಸುಧೀರನ ಕಿವಿಗೆ ಬೀಳುತ್ತಿತ್ತು. "ನಾ ಮೊನ್ನೆ ನಿಮಗೆ ಹೇಳಿದ್ನೆಲ್ಲ, ನಮ್ಮ ಹುಡುಗ್ಗ ಒಂದು ಮೆಡಿಕಲ್ ಸೀಟು ಬೇಕೂ ಅಂತ. ಡೊನೇಶನ್ ಎಷ್ಟಾದ್ರೂ ಕೊಡ್ತೀನಿ. ನಮಗ ಸೀಟು ಬೇಕs ಬೇಕು. ಹಾಂ, ಏನು ಕಮಿಟಿಯವರು ಎರಡು ಲಕ್ಷ ಕೇಳತಾರ ? ಹಾಂ ಹೆಚ್ಚಾತು. ಆದರೂ ಪರವಾಗಿಲ್ಲ. ನಾ ಕೊಡ್ತೀನಿ. ಹುಡುಗರು ಏನೇನೋ ಆಸೆ ಇಟಕೊಂಡಿರ್ತಾರ. ಅಂವಾ ಡಾಕ್ಟರ ಆಗsಬೇಕು ಅಂತಾನ. ಓ.ಕೆ. ಬಾ ಅಂದರ ನಾನs ಬರ್ತೀನಿ. ಹಾಂ. ಏನ ತೊಂದರಿ ಇಲ್ಲಾ. ನಾವಿಬ್ಬರೂ

ಚೀಫ್ ಸೆಕ್ರೆಟರಿಯವರ ಮಗಳ ಮದುವಿಗೆ ಬಂದು ಬರತೀವಿ. ಆಗ ಭೆಟ್ಟಿ ಆಗ್ತೀನಿ. ಥ್ಯಾಂಕ್ ಯು. ನಮಸ್ಕಾರ." ಮುಕುಂದ ಹತ್ತಿರ ಬಂದು ಕುಳಿತ. ತುಂಬ ಖುಷಿಯಲ್ಲಿದ್ದ.

"ಸುಧೀ, ನಮ್ಮ ಮಕ್ಕಳ ಸಲುವಾಗಿ ನಮಗೊಂದು ಕರ್ತವ್ಯ, ಜವಾಬ್ದಾರಿ ಇರತದ ಏನಪಾ. ಅವರ ಭವಿಷ್ಯ ರೂಪಿಸಬೇಕು. ಮುಂದ ಅವರನ್ನ ಸೆಟಲ್ ಮಾಡಬೇಕು. ಇದೆಲ್ಲಾ ನಮ್ಮ ಕೈನಡಿಯೂ ಮುಂದ ಮಾಡಬೇಕು. ಅದೆಲ್ಲಾ ಇರಲಿ. ಸಂದೀಪ ಭಾಳ ಶಾಣ್ಯಾ ಆದಾನ ಅಂತ ಹೇಳತಿದ್ದೆಲ್ಲ. ಅವನ್ನ ನೀನು ಕಾಲೇಜಿಗೆ ಕಳಸಲಿಕ್ಕೇ ಬೇಕು. ಇಲ್ಲೆ ಎಸ್.ಎಮ್.ಕೆ. ಕಾಲೇಜು ಭಾಳ ಛೋಲೋ ಅದ ಏನಪಾ. ಅದರ ಪ್ರಿನ್ಸಿಪಾಲರಿಗೆ ಬೇಕಾದರ ನಾ ಫೋನ್ ಮಾಡಿ ಹೇಳ್ತೀನಿ. ಹಾಸ್ಟೆಲಿನ್ಯಾಗ ರೂಮು ಕೊಡಸ್ತೀನಿ. ಪ್ರೀತಿ ಗೆಳೆಯಾ ಅಂದ ಮ್ಯಾಲೆ ಇಷ್ಟೂ ಮಾಡ ದಿದ್ದರ ಹ್ಯಾಂಗ?" ತೊಡೆ ತಟ್ಟಿ ಜೋರಾಗಿ ನಕ್ಕ ಮುಕುಂದನ ಗ್ಲಾಸು ತುಳುಕಿ ಸುಧೀರನ ಪೈಜಾಮ ಒದ್ದೆ ಆಯಿತು ಅತ್ತ ಲಕ್ಷ್ಯವಿಲ್ಲದ ಮುಕುಂದ ಬೇರೆಯೇ ಲೋಕದಲ್ಲಿ ತೇಲುತ್ತಿದ್ದ. ತನ್ನ ಪೈಜಾಮ ತೊಳೆ ಯಲು ಸುಧೀರ ಎದ್ದುಹೋಗಿ "ಗುಡ್‌ನೈಟ್" ಎಂದ.

ಟಕ್... ಟಕ್ ಬೂಟಿನ ಸದ್ದು ಹತ್ತಿರ ಬಂದು ಮಗ್ಗಲು ಕೋಣೆ ಯಲ್ಲಿ ಮಾಯವಾಯಿತು. ಅದು ಮುಕುಂದರಾವ್ ಅವರ ಬಂಗ್ಲೆಯ ಆಫೀಸ್ ರೂಮು. ಇನ್ನೊಂದು ದಿನವಾದರೂ ಇರಲೇಬೇಕೆಂದು ಗೆಳೆಯ ಹೇಳಿದ ಮಾತಿಗೆ ಕಟ್ಟುಬಿದ್ದು ಸುಧೀರ ಉಳಿದುಕೊಂಡಿದ್ದ.

"ರಂಗಪ್ಪಾ ನಿನ್ನೆ ಲೋಕಾಪುರದ ಪಾರ್ಟಿ ಬಂದಿತ್ತಲ್ಲ. ಏನಂತಾರ?"

"ಅವರು ಹತ್ತುಸಾವಿರ ತಂದಿದ್ದರ್ರಿ. ಇಪ್ಪತ್ತೈದರ ಕೆಳಗ ಆಗೂದಿಲ್ಲ ಅಂತ ನಾ ಸಾಫ ಹೇಳಿ ಬಿಟ್ಟಿನ್ರಿ." ಮಹಾ ನಿರ್ದೇಶಕರ ಪಿ.ಎ. ರಂಗಪ್ಪ ಹೇಳುತ್ತಿದ್ದ.

"ಸರಿ, ಅವರು ಪೂರ್ತಿ ಹಣಾ ತಂದ ಮ್ಯಾಲೇ ಅವರ ಫೈಲು ತಗೀರಿ."

"ಆದರ ಕಾಳಜಿ ಮಾಡಬ್ಯಾಡ್ರಿ ಸರ್. ನಾ ಎಲ್ಲಾ ಹ್ಯಾಂಡಲ್ ಮಾಡತೇನಿ. ಈಗ ಜ್ಯುವೆಲ್ಲರಿ ಅಂಗಡಿ ಸೇಠ ಬಂದಾರ್ರಿ. ಅವರದೊಂದು ಕೇಸ ಇತ್ತು..."

"ಹೌದೌದು, ನನಗೆಲ್ಲಾ ಗೊತ್ತದೆ. ಮನೀಗೆ ಬರ್ತೀನಿ ಅಂತ ಫೋನ್ ಮಾಡಿದ್ರು. ಅವರನ್ನ ಒಳಗ ಕರಕೊಂಡು ಹೋಗಿ ಬಾಯಿಯವರಿಗೆ ಭೆಟ್ಟಿ ಮಾಡಸರಿ. ಆಮ್ಯಾಲೆ ಇಲ್ಲಿಗೆ ಕರಕೊಂಡು ಬರ್ರಿ."

ಗೋಡೆಯ ಆಚೆಗೆ ನಡೆದ ಮಾತುಗಳೆಲ್ಲವೂ ಸುಧೀರನಿಗೆ ಅಶರೀರ ವಾಣಿಯಾಗಿದ್ದವು ಹಿಂದಿನ ರಾತ್ರಿ ನಾಳೆ ಮತ್ತೆ ಮಾತನಾಡೋಣ ಎಂದಿದ್ದ ಮುಕುಂದ ಮಾತನಾಡಲು ಇನ್ನೇನು ಉಳಿದಿದೆ ? ಏನೂ ಇಲ್ಲವೆಂದೇ ಒಮ್ಮೊಮ್ಮೆ ಅನಿಸುತ್ತದೆ. ಅವನ ಮಾತುಗಳು ತನಗೆ ಸೇರುವುದಿಲ್ಲ. ತನ್ನ ಮಾತುಗಳಿಗೆ ಅವನು ಕಿವಿ ಕೊಡುತ್ತಿಲ್ಲ. ಒಟ್ಟಿನಲ್ಲಿ ಇಬ್ಬರೂ ಕಿವುಡರು. ತನ್ನ ಒಳಗಿನ ಮಾತುಗಳು ಹೊರಬರಲು ದಾರಿಯನ್ನು ಹುಡುಕುತ್ತಿವೆ. ಆದರೆ ಎಲ್ಲ ದಾರಿಗಳು ಮುಚ್ಚಿಹೋಗಿವೆ. ತಮ್ಮಿಬ್ಬರ ಮಧ್ಯೆ ಒಂದು ಭದ್ರವಾದ ಅಡ್ಡಗೋಡೆ ನಿಂತಿದೆ. ಅದನ್ನು ದಾಟಿ ಹೋಗಲು ತನ್ನಿಂದ ಸಾಧ್ಯವಾಗುತ್ತಿಲ್ಲ. ತನಗೆ ಇನ್ನೇನೂ ಬೇಕಿಲ್ಲ. ತನ್ನ ಚಿಕ್ಕಂದಿನ ಮುಕುಂದ ಬೇಕು. ಅವನ ಪ್ರೀತಿ ಬೇಕು. ಅವನು ತನ್ನೊಡನೆ ಕಣ್ಣುಮುಚ್ಚಾಲೆ ಆಡುತ್ತ ಕೈಗೇ ಸಿಗುತ್ತಿಲ್ಲ. ಆದಕ್ಕೇ ತನಗೆ ಈ ತಳಮಳ, ಅಸ್ವಸ್ಥತೆ ಎಲ್ಲ... ಮೈ ಬೆಚ್ಚಗಾಗಿ ತುಂಬಾ ಸೆಕೆಯಾಗುತ್ತಿದೆ. ಕೋಣೆ ಎಲ್ಲ ಬಿಸಿಯಾಗಿ ಭಟ್ಟಿಯಾಗಿದೆ. ಉಸಿರು ಕಟ್ಟುತ್ತಿದೆ. ಸುಧೀರ ಚಡಪಡಿಸುತ್ತ ಎದ್ದುಹೋಗಿ ಕಿಡಿಕಿಗಳನ್ನು ಅಗಲವಾಗಿ ತೆರೆದ. ತಂಗಾಳಿಗೆ ಮುಖ ಒಡ್ಡಿದ. ಊಹುಂ, ಅಲ್ಲಿ ಎಲ್ಲವೂ ಸ್ತಬ್ಧವಾಗಿದೆ. ಸೂಸುವ ಗಾಳಿ ಇಲ್ಲ. ಎಲೆಗಳಲ್ಲಿ ಚಲನೆ ಇಲ್ಲ ಎಲ್ಲಿ ನಿರ್ಜೀವವಾಗಿದೆ. ತಾನಿನ್ನು ಇಲ್ಲಿ ಇರುವುದು ಸಾಧ್ಯವಿಲ್ಲ–ಇಲ್ಲ. ಕತ್ತು ಹಿಸುಕಲು ಬರುತ್ತಿರುವ ಈ ಬೆರಳುಗಳಿಂದ ಓಡಬೇಕು... ದೂರ... ದೂರ ಓಡಿ ಹೋಗಿ ಬಿಡಬೇಕು. ಈಗಲೇ ಹೊರಗೆ ಹೋಗಬೇಕು.

ಸುಧೀರ ತನ್ನ ಕೈಚೀಲ ಹಿಡಿದು ಎದ್ದು ನಿಂತ. ಇಲ್ಲಿಗೆ ಬಂದ ಮೇಲೆ ಹೇಳದೆ ಹೋಗುವುದು ಸಭ್ಯತೆ ಅಲ್ಲವಲ್ಲ. ನಡುಗುತ್ತಿದ್ದ ಹೆಜ್ಜೆಗಳಿಂದ ಪ್ರಯಾಸಪಟ್ಟು ಹಾಲಿನವರೆಗೆ ಹೋದ. ಮುಖ ಬಿಳುಪೇರಿತ್ತು. ತೀರ ನಿತ್ರಾಣನಾಗಿದ್ದ. ನಿನ್ನೆಯಿಂದ ಹೊಟ್ಟೆಗೆ ಅನ್ನ ಹೋಗಿರಲಿಲ್ಲ. ಉಂಡದ್ದೂ ವಾಂತಿಯಾಗಿತ್ತು. ತಲೆ ತಿರುಗಿದಂತಾಯ್ತು. ಆಧಾರಕ್ಕೆ ಹತ್ತಿರದ ಟೇಬಲ್ ಮೇಲೆ ಕೈ ಇಟ್ಟ. ಠಳ್ಳಳ್ಳ! ತಲೆಯಲ್ಲಿ ಬಾಂಬ್ ಸಿಡಿದಂತಾಯ್ತು. ಸುಂದರವಾದ ಬಿಳಿಯ ಕಾಜಿನ ಕೃಷ್ಣನ ಮೂರ್ತಿ ಒಡೆದು ಚೂರು ಚೂರಾಗಿತ್ತು.

ಮುಕುಂದ, ಭಾಮಿನಿ, ಆದಿತ್ಯ, ರಂಗಪ್ಪ ಎಲ್ಲರೂ ಒಮ್ಮೆಲೆ ಹಾಲಿನಲ್ಲಿ ಪ್ರತ್ಯಕ್ಷರಾದರು. "ಮುಕುಂದಾ, ನಾ ಊರಿಗೆ ಹೋಗತೀನಿ." ಅವರೆಲ್ಲರ ದೃಷ್ಟಿ ನೆಲದ ಮೇಲಿತ್ತು. ಹೊರಗೆ ಹೋಗುತ್ತಿದ್ದ ಸುಧೀರನ ಕಾಲಿಗೆ ಕಾಜಿನ ಚೂರು ನೆಟ್ಟು ಕೆಂಪು ಹೆಜ್ಜೆಯ ಗುರುತು ಮೂಡುತ್ತಾ ಹೋಯಿತು.

●

ವಸುಂಧರಾ

ಕಳೆದ ಕೆಲವು ದಿನಗಳಿಂದ ಅಹಲ್ಯೆ ತನ್ನ ಮನಸ್ಸು ತುಂಬಿದ್ದಾಳೆ. ಅದೇ ಅಹಲ್ಯೆ. ಪಂಚ ಮಹಾಪತಿವ್ರತೆಯರಲ್ಲಿ ಒಬ್ಬಳು. ಗಂಡನನ್ನು ಬಿಟ್ಟು ಬಂದ ತನಗೆ ಅವಳ ಬಗ್ಗೆ ಅನುಕಂಪವಿದೆ. ಅದಕ್ಕೆ ಅವಳ ಕಥೆಯೇ ಕಾರಣ. ಅದೇ ತನ್ನನ್ನು ಸೆಳೆದದ್ದು. ಅಪ್ರತಿಮ ಸುಂದರಿ, ರಾಜಕುಮಾರಿ, ಗೌತಮನಂಥ ಕಠೋರ ತಪಸ್ವಿಯನ್ನು ಮದುವೆಯಾಗಿ– ಇಂದ್ರನ ಚಾಪಲ್ಯಕ್ಕೆ ಬಲಿಯಾಗಿ- ಗಂಡನ ಶಾಪದಿಂದ ಕಲ್ಲಾದಳಂತೆ. ಅವಳು ಜಡಳಾಗಿ, ಜಗತ್ತಿನಿಂದ ವಿಮುಖಳಾಗಿ, ನಿರ್ಲಿಪ್ತೆಯಾಗಿರಬೇಕೆಂದು ತನ್ನ ಬಲವಾದ ಊಹೆ. ಕಲ್ಲಾದ ಅಹಲ್ಯೆ ರಾಮನ ಪಾದಸ್ಪರ್ಶದಿಂದ ಉದ್ಧಾರವಾದಳೆನ್ನುವ ಪವಾಡದ ಕಟ್ಟುಕಥೆಯನ್ನು ನಂಬುವಂಥ ಭಾವುಕಳು ತಾನಲ್ಲ. ಹಾಗೆಂದು ಭಾವನೆಗಳು ಸತ್ತುಹೋಗಿರುವವಳೂ ಅಲ್ಲ.

ಅತಿ ಸೂಕ್ಷ್ಮ ಭಾವನಾಜೀವಿ ಆಗಿದ್ದುದರಿಂದಲೇ ಒಂದು ಕಾಲದ ತನ್ನೊಳಗಿನ ನೋವು ತನ್ನ ಇಡೀ ಬದುಕನ್ನು ಮುಷ್ಟಿಯೊಳಗಿಟ್ಟುಕೊಂಡು ಆಟವಾಡಿಸುತ್ತಿರುವುದು. ಆ ನೋವಿನ ಬಗ್ಗೆ ತನ್ನನ್ನು ಬಿಟ್ಟು ತಿಳಿದಿದ್ದ ಇನ್ನೊಂದು ಜೀವವೆಂದರೆ ತಾಯಿಯೊಬ್ಬಳೇ. ಅವಳೂ ಸತ್ತು ಎಷ್ಟೋ ವರ್ಷಗಳಾದವು. ಆ ರಾತ್ರಿ ಗುಡುಗು, ಮಿಂಚು, ಸಿಡಿಲು, ಕೊನೆಗೆ 'ಧೋ' ಎಂದು ಮಳೆ. ಎಲ್ಲ ಪ್ರಕೃತಿಯಲ್ಲಿ ನಡೆದದ್ದಲ್ಲ. ತನ್ನಲ್ಲಿ– ತನ್ನ ಒಡಲೊಳಗೆ ಎಲ್ಲೋ ಒಂದು ಕಡೆ, ಇಲ್ಲೇ ಎಂದು ಹೇಳದಂಥ ಜಾಗದಲ್ಲಿ ಸಣ್ಣಗೆ ಮಿಡಿಯುತ್ತಿದ್ದ ನೋವು, ದೊಡ್ಡ ದೊಡ್ಡದಾಗಿ ಬೆಳೆದು ಜಾಗಟೆ ಬಾರಿಸುತ್ತಿತ್ತು. ಏಳೆಂಟು ವರುಷದ ಹುಡುಗಿ– ಇಡೀ ಶರೀರವೇ ಅಲ್ಲಾಡುವಂತೆ ಗಡಗಡ ನಡಗುತ್ತ, ಆಸರೆಗಾಗಿ ಕೈಚಾಚಿ ಓಡಿಹೋಗಿ ಅವ್ವನನ್ನು ತಬ್ಬಿಕೊಂಡಿದ್ದಳು. ಬೆಳಗಿನವರೆಗೂ ತೋಳತೆಕ್ಕೆಯಲ್ಲಿ ದುಃಖಿಸುತ್ತಿದ್ದ ಮಗಳನ್ನು

ಅವ್ವನ ಅಂತಃಕರಣದ ಕೈ ಬೆನ್ನಮೇಲೆ, ನೆತ್ತಿಯ ಮೇಲೆ ಕೈ ಆಡಿಸುತ್ತ ಕಣ್ಣೀರು ಒರೆಸಿತ್ತು. ಮೈಯ ಒಳಗೆ ಸೂಕ್ಷ್ಮಭಾಗದಲ್ಲಿ ಕುರು ಆಗಿದೆಯೆಂದು ಪರೀಕ್ಷಿಸಿ ಹೇಳಿದ ಡಾಕ್ಟರರು ಅದನ್ನು ಕತ್ತರಿಸಿ ಹಾಕಿದ್ದರು. ದಿನವೂ ಡ್ರೆಸ್ಸಿಂಗ್ ಆಗುವಾಗ ಪುಟ್ಟ ಮಗಳ ಅಳು, ಸಂಕಟ ನೋಡಲಾರದೆ ಅವ್ವನೂ ಕಣ್ಣೀರು ಸುರಿಸಿದ್ದಳು. ಶರೀರದ ಗಾಯ ಕೊನೆಗೊಮ್ಮೆ ಮಾಯ್ದಿತ್ತು. ಆದರೆ ನೋವು ಮನಸ್ಸಿನ ಮೂಲೆಯಲ್ಲಿ ಜಗಲಿ ಹಾಕಿ ಕುಳಿತುಬಿಟ್ಟಿತ್ತು.

ಕುಸುರಿನ ಕೆಲಸವಾದ ಕಣ್ಣರೆಪ್ಪೆ ಕೆತ್ತುತ್ತಲೇ ಯೋಚಿಸುತ್ತಿದ್ದ ವಸುಂಧರಾ ಚಾಣ ಕೆಳಗಿಟ್ಟು ನೋಯುತ್ತಿದ್ದ ಬೆರಳು ನೀವಿಕೊಂಡಳು. ಫ್ಯಾನ್ ಸ್ವಿಚ್ ಹಾಕಿ, ನೇರವಾಗಿ ಕಾಲುಚಾಚಿ ಗಾಳಿಗೆ ಮುಖವೊಡ್ಡಿದಳು. ಕೈಗೆ ಎಟಕುವಂತಿದ್ದ ಟೇಬಲ್ ಡ್ರಾ ಎಳೆದು ನೀಲಿ ಕವರಿನ ಡಾಯರಿ ತೆಗೆದು ಪುಟ ತಿರುವಿದಳು–

ಈ ದಿನ ಮನೆಗೆ ಬಂದಾಗ ಅಪ್ಪ ತುಂಬ ಖುಷಿಯಾಗಿದ್ದರು. ಗೌರಮ್ಮ ಮಾಡಿದ ತಿಂಡಿ, ಚಹಾ ಕೊಟ್ಟು, 'ಅಪ್ಪಾ, ನಾನು ಲೀಲಾನ ಕೂಡ ವಾಕಿಂಗ್ ಹೋಗಿ ಬರತೀನಿ' ಅಂದೆ. ನಾವಿಬ್ಬರೂ ಪರೀಕ್ಷೆ ಮುಗಿಸಿ ಹಾರಾಡುವ ಹಕ್ಕಿಗಳಾಗಿದ್ದೆವು. ದೂರ ಏಕಾಂತ ಜಾಗಕ್ಕೆ ನಡೆದುಹೋಗಿ ನಿಸರ್ಗ ನೋಡುತ್ತ ಕೂಡ್ರಲು ನನಗೆ ತುಂಬಾ ಇಷ್ಟ. ಸಾಲುಹಕ್ಕಿಗಳು, ಬಣ್ಣ ಬಣ್ಣದ ಹಿಂಜಿದ ಮೋಡಗಳು, ದೂರ ಎಲ್ಲೋ ಕಂಡೂ ಕಾಣದಂತೆ ಕಣ್ಣು ಮಿಟುಕಿಸುವ ನಕ್ಷತ್ರ ನೋಡುತ್ತ ಹೊತ್ತಿನ ಪರಿವೆ ಇಲ್ಲದೆ ಮೌನವಾಗಿ ಕುಳಿತಿರುತ್ತಿದ್ದೆವು. ಲೀಲಾ ನನ್ನ ಆತ್ಮೀಯ ಗೆಳತಿ. ಅವ್ವ ಹೋದ ಮೇಲೆ ಅವಳೇ ನನಗೆ ಎಲ್ಲಾ. ಆದರೆ ಅಪ್ಪ ಈ ದಿನ ನನ್ನನ್ನು ಹೊರಗೆ ಬಿಡಲಿಲ್ಲ. ಸುಧೀರಣ್ಣನನ್ನು ಕರೆದರು. ಅವರ ಸಂತೋಷದ ಕಾರಣ ಹೊರಬಿತ್ತು.

"ನಿನ್ನ ಗೆಳತಿ ಮದುವಿಗೆ ಹೋಗಿದ್ದಿಯಲ್ಲ ವಸೂ. ಅಲ್ಲೆ ದೇಸಾಯಿ ವಕೀಲರ ಮಗ ಶ್ರೀಕಾಂತ ನಿನ್ನ ನೋಡಿ ಒಪ್ಪಿಕೊಂಡಾರಂತ. ವರಾ ಶ್ರೀಮಂತ, ಸುಂದರ, ಸುಶಿಕ್ಷಿತ, ದೊಡ್ಡ ನೌಕರಿಯೊಳಗ ಇದ್ದಾರ. ನಮಗ ಪಸಂದಆಗೇದ. ನಾಳೆ ನೋಡಲಿಕ್ಕೆ ಬರತಾರ." ಎಂದು ಅಪ್ಪ ಬಾಯ್ತುಂಬ ನಕ್ಕಾಗ ಅಣ್ಣ ಹಿಗ್ಗಿ ಒಪ್ಪಿಗೆ ಕೊಟ್ಟ. ನನಗ ಅಳೂನ ಬಂತು.

"ನಾ ಮದುವೀ ಮಾಡಿಕೊಳ್ಳಾಕ ಒಲ್ಲೆ ಅಪ್ಪಾ" ಎಂದಾಗ ಅವರು ಇನ್ನಷ್ಟು ಜೋರಾಗಿ ನಕ್ಕರು. ನಾ ಸೀರಿಯಸ್ ಆಗಿ ಹೇಳ್ತೀನಿ ಅಂದಾಗ ಕಾರಣ ಕೇಳಿದರು. ಏನು ಹೇಳಬೇಕೋ ತಿಳಿಯದೇ ಸುಮ್ಮನಿದ್ದೆ. ಕೊನೆಗೂ ನನಗೆ ಸೂಕ್ತ ಕಾರಣ ಹೊಳೆಯದೆ ದಂಗುಬಡಿದು ಕುಳಿತಿದ್ದೆ. ಅಪ್ಪ ಹೇಳುತ್ತಲೇ ಹೋದರು, "ಸುಮ್ಮನ ಹುಡುಗಾಟಾ ಮಾಡಬ್ಯಾಡಾ, ಇಂಥಾ ವರಾ ಮತ್ತ ಸಿಗೂದಿಲ್ಲ. ಅವರಾಗಿ ಒಪ್ಪಿಕೊಂಡಾರ. ಎಲ್ಲಾ ಕೂಡಿ ಬಂದದ. ನಿನ್ನ ತಲೀ ಮ್ಯಾಲೆ ಅಕ್ಕೀಕಾಳು ಹಾಕಿಬಿಟ್ಟರ ನನಗೂ ನಿಶ್ಚಿಂತಿ. ನಿನ್ನ ತಾಯಿ ಇದ್ದರ ಈಗ ಎಷ್ಟು ಸಂತೋಷಪಡತಿದ್ಲೊ." ಅಪ್ಪನ ಗಂಟಲು ಕಟ್ಟಿತ್ತು. ನಾನು ಸೂತ್ರದ ಬೊಂಬೆಯಂತೆ ನಿರ್ಜೀವ ಆಗಿದ್ದೆ.

ಹೌದು, ಇಂದು ಅಪ್ಪ ಇದ್ದರೆ ಎಷ್ಟು ಚೆನ್ನಾಗಿತ್ತು. ನನ್ನ ಅಂತರಾಳದ ಭಯವನ್ನ, ಮದುವೆ ಎಂದರೆ ತನಗೆ ಮೈ ನಡುಕ ಎನ್ನುವುದನ್ನ ಅವಳಿಗೆ ವಿವರಿಸಿ ಹೇಳಬಹುದಾಗಿತ್ತು. ಪುರುಷನ ಸಹವಾಸ, ಸಂಪರ್ಕಕ್ಕೆ ತನ್ನ ದೇಹ, ಮನಸ್ಸು ಇನ್ನೂ ಸಿದ್ಧ ಇಲ್ಲ ಎನ್ನುವುದನ್ನು ಯಾರ ಹತ್ತಿರ ತೋಡಿಕೊಳ್ಳಲಿ? ತಾನು ಏಕಾಕಿ. ಆಗಲಿರುವ ಮದುವೆಯಿಂದ ತಪ್ಪಿಸಿಕೊಳ್ಳೋದು ಸಾಧ್ಯ ವಿಲ್ಲ. ಅಳುತ್ತಲೇ ಡಾಯರಿ ಬರೆಯುತ್ತಿದ್ದೇನೆ.

ವಸುಂಧರೆಯ ಬೆರಳು ಚಲಿಸಿದವು–

ಇಂದು ನಮ್ಮ ಪ್ರಥಮ ರಾತ್ರಿ. ಶ್ರೀಕಾಂತ ತುಂಬಾ ಖುಷಿಯಲ್ಲಿದ್ದ. ಅವನ ಕಣ್ಣು ತಪ್ಪಿಸಿ ಓಡಾಡುತ್ತಿದ್ದೆ. ನಾಚಿಕೆ ಎಂದು ಅವನು ಭಾವಿಸಿರ ಬೇಕು. ಮಲಗುವ ಕೋಣೆ ಹೊಕ್ಕಾಗ ನನ್ನೆದೆಯಲ್ಲಿ ಡವಡವ. ಅಂಗೈ-ಅಂಗಾಲು ಬೆವರು, ತಲೆಸುತ್ತಿ ಬರುತ್ತಿತ್ತು. ತುಂಬಾ ಆಯಾಸವಾಗಿತ್ತು. ಶ್ರೀಕಾಂತ ಹತ್ತಿರ ಬಂದಾಗ "ತುಂಬಾ ತಲೆ ನೋಯ್ತಿದೆ. ನಾ ಮಲಗ್ತೀನಿ, ಪ್ಲೀಜ" ಎಂದೆ. ನನ್ನನ್ನೇ ದಿಟ್ಟಿಸಿ ನೋಡಿ ಸುಮ್ಮನೆ ಸರಿದು ಮಲಗಿಕೊಂಡ. ನಾನು ಕಣ್ತುಂಬ ನಿದ್ದೆ ಮಾಡಿದೆ...

ನಾಲ್ಕು ದಿನ ಕಳೆದರೂ ದಿನವೂ ಒಂದು ನೆಪ ಹೇಳಿ ಶ್ರೀಕಾಂತನಿಂದ ದೂರವಿದ್ದೆ. ಅವನ ತಾಳ್ಮೆಗೂ ಒಂದು ಮಿತಿಯಿತ್ತು. ಆ ದಿನ ಅವನಿಗೆ

ಸಿಟ್ಟೂ ಬಂದಿತ್ತು. ಎಷ್ಟು ಬೇಡಿಕೊಂಡರೂ ಬಿಡದೆ ತುಂಬಾ ಹಿಂಸೆ ಮಾಡಿದ. ಅವನನ್ನು ನೂಕಿದಾಗ ಎರಡೂ ಕೈಚಾಚಿ ನನ್ನ ಕುತ್ತಿಗೆ ಹಿಚುಕಿದ, ಭಯದಿಂದ ಬೆಪ್ಪಳಾದೆ, ಚೀರಬಾರದೆಂದು ನನ್ನ ಬಾಯಿ ಒತ್ತಿ ಹಿಡಿದು ಬಲಾತ್ಕಾರ ಮಾಡಿದ. ಅವನಿಗೇನು ಸುಖ ಸಿಕ್ಕಿತೋ ತಿಳಿಯದು. ನನಗಂತೂ ನನ್ನೊಳಗಿನ ನೋವು ಮತ್ತೆ ಮರುಕಳಿಸಿತ್ತು. ಇಡೀ ರಾತ್ರಿ ಎಲ್ಲ ಅಳುತ್ತಿದ್ದೆ.

ದಿನವೂ ನನಗೆ ನರಕಯಾತನೆ. ಅವನಿಗೆ ಪೌರುಷಕ್ಕೆ ಅವಮಾನ. ಒಂದು ರಾತ್ರಿ ಸಹಿಸಲಾರದೆ ಅವನ ಎದೆ, ಮುಖವನ್ನೆಲ್ಲ ಪರಚಿಬಿಟ್ಟಿದ್ದೆ. ಮನೆಯವರಿಗೂ ಅಸಂತೋಷ. ಗಂಡ–ಹೆಂಡಿರಲ್ಲಿ ಏನೋ ಸರಿ ಇಲ್ಲವೆನ್ನುವ ಅನುಮಾನ. ಅತ್ತೆ ಕೂಡ ಬಾಯಿಬಿಟ್ಟು ಕೇಳಿರಲಿಲ್ಲ. ಒಂದು ರಾತ್ರಿ ಚಿಟ್ಟನೆ ಚೀರಿಕೊಂಡಾಗ ಎಲ್ಲರೂ ಎದ್ದುಬಂದಿದ್ದರು. ಧಡಾರನೆ ಬಾಗಿಲು ತೆಗೆದು ಹೊರ ಹೋದ ಶ್ರೀಕಾಂತ "ಅವ್ವಾಽ ಆಕೀ ತಲೀ ಸರಿ ಇಲ್ಲ. ನಮಗ ಮೋಸ ಆಗೇದ. ರೂಪಾ ನೋಡಿ ಮಳ್ಳ ಆದ್ವಿ. ನಾಳೆ ಆಕಿನ್ನ ತವರ್ಮನಿಗೆ ಕಳಸು" ಎಂದು ಹೋಗಿಬಿಟ್ಟ. ವಿಚಿತ್ರ ಪ್ರಾಣಿಯಂತೆ ಎಲ್ಲರೂ ನನ್ನನ್ನು ನೋಡಿದರು. ನನಗೆ ಏನೂ ಅನಿಸಲಿಲ್ಲ...

ಒಂದು ಮೋಜಿನ ಸಂಗತಿ ಇಲ್ಲಿದೆ. ನಾನು ಮನೋರೋಗಿ–ಅಂದರೆ ಹುಚ್ಚಿ– ಎಂದು ಗಂಡನ ಮನೆಯವರ ಹೇಳಿಕೆ. ಕೋರ್ಟಿನಲ್ಲಿ ಮಾವ ಅದನ್ನು ಸಿದ್ಧಮಾಡಿ ನನ್ನಿಂದ ಬಿಡುಗಡೆಯನ್ನೂ ಪಡೆದಿದ್ದಾರೆ. ಶ್ರೀಕಾಂತನ ಮನೆಯವರು ಮನುಷ್ಯರೇ ಅಲ್ಲ. ವರದಕ್ಷಿಣೆ ಆಸೆಗೆ ನಮ್ಮ ವಸೂಗೆ ಚಿತ್ರ ಹಿಂಸೆ ಕೊಟ್ಟರು ಎಂದು ತವರುಮನೆಯವರ ತಿಳುವಳಿಕೆ. ನನಗಂತೂ ಬಿಡುಗಡೆ ಸಿಕ್ಕಿತೆನ್ನುವ ಸಂತೋಷದಲ್ಲಿ ನಿಜ ಯಾರಿಗೂ ಹೇಳಲಿಲ್ಲ. ಯಾರಿಗೂ ಗೊತ್ತಿಲ್ಲ- ಕೊನೆಗೆ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಸಂಜೀವಿನಿಗೆ ಕೂಡ ನಿಜ ಏನು ಗೊತ್ತಿಲ್ಲ...

ನನ್ನ ಹೆರಿಗೆ ನಾರ್ಮಲ್ ಆಗುತ್ತದೆಂದು ಲೇಡಿಡಾಕ್ಟರ್ ಮತ್ತು ವಿಶೂ ಕಾಕಾ ಇಬ್ಬರೂ ಅಪ್ಪನಿಗೆ ಭರವಸೆ ಕೊಟ್ಟಿದ್ದರು. ಆದರೆ ಬೇನೆ ಸುರುವಾದಾಗ ನನ್ನಲ್ಲಿ ಚಂಡಮಾರುತವೆದ್ದಿತ್ತು. ಇಡೀ ದೇಹದ ನರನರವೂ ನೋವಿನಿಂದ ಮಿಡಿಯುತ್ತಿದ್ದವು. ಎಲ್ಲ ಅಂಗಗಳನ್ನು ಗಾಣಕ್ಕೆ ಹಾಕಿ ಮುರಿಯುತ್ತಿ

ದ್ದಂತೆ ನನ್ನ ಮಿದುಳಿನಲ್ಲಿ ಚಟ್‌ಚಟ್ ಸಪ್ಪಳವಾಗುತ್ತಿತ್ತು. "ಅವ್ವಾs, ಅವ್ವಾs" ಎಂದು ಚೀರುತ್ತಿದ್ದೆ. ನನ್ನ ಒದ್ದಾಟ, ಸಂಕಟ ನೋಡಲಾಗದೆ ಅಪ್ಪ, ಸಿಜೇರಿಯನ್ ಮಾಡಲೇಬೇಕೆಂದು ಡಾಕ್ಟರರಿಗೆ ಒತ್ತಾಯ ಮಾಡಿದ್ದರು. ಅವರಿಗೆ ಮಗಳು ಬದುಕಿದರೆ ಸಾಕು ಎನಿಸಿತ್ತು. ಡಾಕ್ಟರರಿಗೆ ನಾನೊಂದು ಸ್ಪೆಸಿಮನ್ ಆಗಿದ್ದೆ...

ಅಷ್ಟೇ ಅಲ್ಲ, ಹೊರಜಗತ್ತಿಗೆ ನಾನೊಂದು ವಿಚಿತ್ರ, ವಿಕ್ಷಿಪ್ತ ಜೀವಿ. ಯಾರ ಜೊತೆಗೂ ಕೂಡದೆ, ಏಕಾಂಗಿಯಾಗಿರಲು ಇಷ್ಟಪಡುವ ನಾನು ನಿಜವಾಗಿಯೂ ತಲೆ ಸರಿ ಇಲ್ಲದವಳು ಎಂದು ಜನ ತಿಳಿಯುವುದು ಸಹಜ. ಜನರ ಪರಿವೆ ನನಗಿಲ್ಲ. ನನಗೆ ನನ್ನದೆ ಹವ್ಯಾಸವಿದೆ. ಸಂಜೀವಿನಿ ದೊಡ್ಡವಳಾದಂತೆ ಕೈಗೆ ಬಿಡುವಾಗಿ ಚಿತ್ರ ಬರೆಯುತ್ತಿದ್ದ ಕುಂಚವನ್ನು ಬಿಟ್ಟು ಚಾಣವನ್ನು ಎತ್ತಿಕೊಂಡಿದ್ದೇನೆ. ಕಲ್ಲಿನೊಳಗೆ ಅಡಗಿರುವ ಬೇರು ಚಿಗಿತು, ಮೊಗ್ಗಾಗಿ, ಹೂವಾಗಿ ಅರಳುವುದನ್ನು ನೋಡಿದ ಅಪ್ಪ ವಿಶೂಕಾಕಾ ಸೋಜಿಗಪಟ್ಟರು. ಅವರಿಬ್ಬರ ನೆರವಿಲ್ಲದಿದ್ದರೆ ನಾನು ಈ ಮಟ್ಟಕ್ಕೆ ಬರುವುದೇ ಕನಸಿನ ಮಾತಾಗಿತ್ತು. ಚಾಣ, ಸುತ್ತಿಗೆ, ಕಲ್ಲುಗಳ ಜೊತೆ ಮಾತನಾಡುತ್ತ ಕಾಲ ಕಳೆಯುವ ಈ ಹುಚ್ಚಿಯನ್ನು ಅಂಗೈಯಲ್ಲಿಟ್ಟುಕೊಂಡು ಜೋಪಾನ ಮಾಡಿದರು. ಸಾಯುವ ಮೊದಲು ಅಪ್ಪನಿಗೆ ಒಂದು ತರದ ಮನಃಶಾಂತಿ ಸಿಕ್ಕಿತು...

ಎರಡೂ ಮಂಡಿಗಳ ಮೇಲೆ ತಲೆ ಒರಗಿಸಿ ಕುಳಿತ ಅಹಲ್ಯೆಯ ನೀಳ ಕೂದಲುಗಳನ್ನು ಸೂಕ್ಷ್ಮವಾಗಿ ಕೆತ್ತಲು ಚಿಕ್ಕ ಚಾಣವನ್ನು ಹಿಡಿದು ಕನ್ನಡಕವನ್ನು ಎತ್ತಿಕೊಂಡು, ಅಲ್ಲಿಯೇ ಇದ್ದ ಸಂಜೀವಿನಿಯ ಪತ್ರ ನೋಡಿ ಮುಗುಳು ನಕ್ಕಳು ವಸುಂಧರಾ.

ಪ್ರೀತಿಯ ಅವ್ವ,

ನಿನ್ನ ಹುಟ್ಟುಹಬ್ಬಕ್ಕೆ ನಾನು ಕಳಿಸಿದ ಗ್ರೀಟಿಂಗ್ ಮುಟ್ಟಿರಬಹುದು. ಆ ದಿನ ನಾನೇ ಬರಬೇಕೆಂದು ಯೋಚಿಸಿದ್ದೆ. ಆದರೆ ಸಮೀರನಿಗೆ ತ ಂಬಾ ಜ್ವರ ಬಂದವು. ದೆಹಲಿಯಲ್ಲಿ ಹಿಂದೂ– ಸಿಖ್ ಗಲಾಟೆ, ಕರ್ಫ್ಯೂನಿಂದಾಗಿ

ಆಯಾ ನಾಲ್ಕು ದಿನ ಬರಲೇ ಇಲ್ಲ. ಹೀಗಾಗಿ ನಾನು ಮನೆಯಲ್ಲಿ ಉಳಿಯ ಬೇಕಾಯಿತು. ನಾಲ್ಕು ದಿನ ಹೊರಗಿನ ಜಗತ್ತು ನೋಡಿರಲಿಲ್ಲ ಮಗೂನ ನೋಡಿಕೊಳ್ಳೋದರಲ್ಲಿ, ಮನೆ ಕೆಲಸದಲ್ಲಿ ಚೇತನ ತುಂಬ ಸಹಾಯ ಮಾಡಿದರು. ಈ ಯಾಂತ್ರಿಕ ಬದುಕಿನಲ್ಲಿ ನಾಲ್ಕು ದಿನ ನಮ್ಮ ಒಡನಾಟ ಹೊಸ ಹುರುಪು ನೀಡಿತು. ದುಃಖದ ನೆರಳಿನಲ್ಲಿ ಸುಖ ಕಾಣುವುದರಿಂದಲೇ ಈ ಬದುಕು ಸಹ್ಯವಾಗುವುದು ಎಷ್ಟು ವಿಚಿತ್ರ ಅಲ್ಲವೇ ? ಈಗ ಪರವಾಗಿಲ್ಲ, ಸಮೀರ ಆರೋಗ್ಯವಾಗಿದ್ದಾನೆ. ಚಿಂತೆ ಮಾಡಬೇಡ. ಆಯಾ ಬರುತ್ತಿದ್ದಾಳೆ. ಅವಳ ಗಂಡನಿಗೂ ಜ್ವರ ಬಾದಿದ್ದ ವಂತೆ. ಸಮೀರ ಬಹಳ ಬಳಲಿದ್ದಾನೆ ಎಂದು ಕಳವಳಪಟ್ಟಳು. ನೀನು ಮಾಣಿಕಬಾಯಿಯನ್ನು ನೋಡಿಲ್ಲ ಅವ್ವ. ನಿಜವಾಗಿಯೂ ನೀನು ಸಾವಿರಾರು ಮೈಲು ದೂರವಿರುವ ಕೊರತೆಯನ್ನು ಅವಳು ತುಂಬಿದ್ದಾಳೆ. ಪಾಪ ! ದೆಹಲಿಯನ್ನು ಆಗಾಗ ಇಷ್ಟಿಷ್ಟೇ ಸುಡುತ್ತಿರುವ ಬೆಂಕಿಯಲ್ಲಿ ತನ್ನ ಮಕ್ಕಳನ್ನು ಕಳೆದುಕೊಂಡಿದ್ದಾಳೆ. ಈಗ ಮುದುಕ-ಮುದುಕಿ ಇಬ್ಬರೇ. ನಾನು ಕೊಡುವ ಐನೂರು ರೂಪಾಯಿಗಳಿಗಿಂತ ಅವಳು ಬರುವುದು ಸಮೀರನಿಗಾಗಿ ಎಂದು ನನಗೆ ಗೊತ್ತು.

ಇರಲಿ, ನಾನೀಗ ಪತ್ರ ಬರೆಯುತ್ತಿರುವುದು ಒಂದು ಮುಖ್ಯ ಕಾರಣಕ್ಕಾಗಿ. ನನ್ನ ಪತ್ರವನ್ನು ನಿಧಾನವಾಗಿ ಓದಿಕೊಂಡು ಅದರ ಹಿಂದಿನ ಆಸೆಯನ್ನು ತಿಳಿದುಕೋ. ಒಮ್ಮೆ ಓದಿ ಬದಿಗಿಟ್ಟು ಮತ್ತೆ ಚಾಣವನ್ನು ಕೈಗೆತ್ತಿಕೊಳ್ಳಬೇಡ. ನಮ್ಮ ರಿಸರ್ಚ್ ಸೆಂಟರಿನಲ್ಲಿರುವ ಪ್ರೊ. ಮನದೀಪ ಸೇನ ಚಹಕ್ಕೆ ಮನೆಗೆ ಬಂದಿದ್ದರು. ಅವರು ನನ್ನ ಬಾಸ್ ಮತ್ತು ಗೈಡ್. ಇತಿಹಾಸದಲ್ಲಿ ಪಂಡಿತರು. ಒಟ್ಟಿನಲ್ಲಿ ಇಂಟರನ್ಯಾಷನಲ್ ಫಿಗರ್. ಅವರು ನೀನು ಕಟೆದ ಚಿಕ್ಕ ಬುದ್ಧನ ಮೂರ್ತಿ ನೋಡಿದರು. ಅಚ್ಚರಿಯಿಂದ ಅದನ್ನೇ ದಿಟ್ಟಿಸುತ್ತ ನಿಂತುಬಿಟ್ಟರು.

“ವಾಹ್ ! ವಂಡರ್‌ಫುಲ್. ಎಲ್ಲಾ ಕಡೆಗೆ ತಪಸ್ವಿ ಬುದ್ಧನನ್ನೇ ನೋಡಿದ್ದೆ. ಆದರೆ ಬಾಲಬುದ್ಧನ ಇಂಥ ಮೂರ್ತಿಯನ್ನೇ ನೋಡಿರಲಿಲ್ಲ. ಆ ನಿರ್ಲಿಪ್ತ ಮುಖಭಾವವೇ ಹೇಳ್ತದೆ ಇವನು ಚಿಕ್ಕ ಸಿದ್ಧಾರ್ಥನಲ್ಲ. ಬಾಲಬುದ್ಧ ಎಂದು, ಸಿಂಪ್ಲಿ ಬ್ಯೂಟಿಫುಲ್.” ನನ್ನ ಕಾಲು ನೆಲದ ಮೇಲೆ ಇರಲಿಲ್ಲ. ಉಬ್ಬಿಹೋಗಿ ಆಕಾಶದಲ್ಲಿ ತೇಲಾಡುತ್ತಿದ್ದೆ.

"ನಿಮಗೆ ಎಲ್ಲಿ ಸಿಕ್ಕಿತು ಇದು, ಇಂಥ ಅಪರೂಪದ ಕಲಾಕೃತಿ?" ಎಂದು ಅವರು ಕೇಳಿದಾಗ ಭೂಮಿಗೆ ಇಳಿದೆ. ಆಗ ಎಲ್ಲ ಹೇಳಲೇಬೇಕಾಯಿತು. "ಎಂಥ ಉತ್ತಮ ಕಲಾವಿದೆ ನಿಮ್ಮ ತಾಯಿ. ನಿಮ್ಮ ಆತಿಥ್ಯದ ಜೊತೆಗೆ ಇದೊಂದು ಸಂತೋಷದ ಸುದ್ದಿ." ಎಂದರು. ಹೋಗುವಾಗ ಮತ್ತೊಮ್ಮೆ ಕಣ್ತುಂಬ ಮೂರ್ತಿ ನೋಡಿ ಹೋದರು. ಇದಿಷ್ಟು ನಡೆದ ವಿಷಯ. ಆದರೆ ಈಗ ಒಂದು ಪೇಚಿನ ಪ್ರಸಂಗ ಬಂದಿದೆ. ಮೊನ್ನೆ ಪ್ರೊ॥ ಸೇನ "ನಾನು ಒಂದು ಸೆಮಿನಾರಿಗೆ ಬೆಂಗಳೂರಿಗೆ ಹೋಗ್ತಾ ಇದ್ದೀನಿ. ನಿಮ್ಮ ತಾಯಿಯವರನ್ನು ಒಂದು ಸಲ ನೋಡಬೇಕು, ಮಾತನಾಡಬೇಕು ಅನ್ನೋ ಆಸೆ. ದಯವಿಟ್ಟು ಅವರ ಅಡ್ರೆಸ್ ಕೊಡಿ." ಅಂದರು. ಬೇರೆ ದಾರಿ ಕಾಣದೆ ನಿನ್ನ ಅಡ್ರೆಸ್ ಬರೆದು ಕೊಟ್ಟೆ. ಮನೆಗೆ ಬಂದ ಮೇಲೆ ಚೇತನ ಜೊತೆ ಮಾತನಾಡಿದೆ. ನನ್ನ ಪ್ರೊಫೆಸರ್ ನಿನ್ನನ್ನು ನೋಡಲು ಇಷ್ಟಪಟ್ಟಿರುವಾಗ ನೀನು ಅವರನ್ನು ಭೇಟಿಯಾಗುವುದೇ ಒಳ್ಳೆಯದೆಂದು ಅನ್ನಿಸುತ್ತದೆ. ನಿನ್ನನ್ನು ಕೇಳದೆ ಇಷ್ಟೆಲ್ಲ ಆಗಿದೆ. ಆದ್ದರಿಂದ ಈ ಪತ್ರ ಬರೆಯುತ್ತಿದ್ದೇನೆ. ಬರುವ ಸೋಮವಾರ ಪ್ರೊ॥ ಸೇನ ನಿನ್ನ ಮನೆಗೆ ಬರುತ್ತಾರೆ. ವಿಶೂಕಾಕಾರಿಗೆ ತಮ್ಮ ಕ್ಲಿನಿಕ್‌ನಿಂದ ಒಂದೆರಡು ಗಂಟೆ ಬಿಡುವು ಮಾಡಿಕೊಂಡು ಸೇನರನ್ನು ನಿನಗೆ ಭೆಟ್ಟಿ ಮಾಡಿಸಲು ಕೇಳಿಕೊಂಡಿದ್ದೇನೆ. ದಯವಿಟ್ಟು ಸಿಟ್ಟಾಗಬೇಡ. ಒಲ್ಲೆ ಎನ್ನಬೇಡ. ನೀನು ಯಾರ ಜೊತೆಗೂ ಮಾತು, ಭೆಟ್ಟಿ, ಸಂಪರ್ಕ ಇಟ್ಟುಕೊಳ್ಳುವುದಿಲ್ಲ ಎನ್ನುವುದು ನನಗೆ ಗೊತ್ತು. ಆದರೆ ಈಗ ನಾನು ಅಸಹಾಯಕಳು. ಇದೊಂದು ಸಲ ಒಪ್ಪಿಕೋ. ನಿನ್ನ ಧಾಬಳಿ–ಅರ್ಥಾತ್ ಏಪ್ರನ್ ಕಟ್ಟಿಡು. ನೀಟಾಗಿ ಡ್ರೆಸ್ ಮಾಡಿಕೋ, ನಿನ್ನ ತಾಯಿ ತುಂಬ ಚೆನ್ನಾಗಿದ್ದಾರೆ ಎಂದರೆ ನನಗೆ ಇನ್ನೆರಡು ಕೋಡು. ಹುಂ, ಹಾಗೆಯೇ ನಿನ್ನ ಕಾಲೇಜಿನ ಇಂಗ್ಲಿಷು ಸ್ವಲ್ಪ ನೆನಪು ಮಾಡಿಕೋ. ಸೇನರಿಗೆ ಬೆಂಗಾಲಿ. ಇಂಗ್ಲಿಷ್ ಬಿಟ್ಟರೆ ಬೇರೆ ಭಾಷೆ ಬರುವುದಿಲ್ಲ. ನೀನು ಮಾಡಿಟ್ಟ ಮೂರ್ತಿಗಳನ್ನು ಅವರಿಗೆ ತೋರಿಸು. ಒಳ್ಳೆಯ ಮನುಷ್ಯರು. ಸಂಕೋಚ ಬಿಟ್ಟು ಮಾತನಾಡು. ನಿನ್ನ ಶಿಲ್ಪಕಲೆಗೆ ಅವರಿಂದ ಹೊಸ ಮಾತುಗಳೂ ತಿಳಿಯಬಹುದು. ಒಟ್ಟಿನಲ್ಲಿ ನನ್ನ ಮಾನ ಉಳಿಸು. ಎಲ್ಲ ನಿನ್ನ ಕೈಯಲ್ಲಿದೆ. ನೀನು ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯ. ನನ್ನನ್ನು ನಿರಾಶೆ ಮಾಡಬೇಡ. ಸೇನರ ಭೆಟ್ಟಿಯಾದ ಮೇಲೆ ಪತ್ರ ಬರೆ. ಚೇತನ ನಮಸ್ತೆ ಹೇಳಿದ್ದಾರೆ. ಸಮೀರ ಅಮ್ಮ ಅನ್ನಲು ಕಲಿತಿದ್ದಾನೆ.

ಮರೆತ ಮಾತು: ಹಾಂ, ಪ್ರೋ॥ ಸೇನ ಚೇಯ್ನ್ ಸ್ಮೋಕರ್. ಹೇಗಾದರೂ ತಡೆದುಕೋ.

ನಿನ್ನ

ಸಂಜೂ.

* * * *

ತಿಳಿನೀಲಿ ಹೂಗಳಿದ್ದ ಬಿಳಿ ಸೀರೆ ಉಟ್ಟುಕೊಂಡು ಕುಂಕುಮವನ್ನು ದುಂಡಗೆ ತೀಡುತ್ತಿರುವಾಗ ಕಿರುಗಂಟೆ ಝಣಝಣಿಸಿತು. ಮುತ್ತಿನೋಲೆಯ ಕಿವಿಯನ್ನು ಸುತ್ತಿದ್ದ ಬೆಳ್ಳಿಕೂದಲನ್ನು ಹಿಂದೆ ಸರಿಸುತ್ತ ವಸುಂಧರಾ ಬಾಗಿಲು ತೆರೆದಳು.

ಬೊಜ್ಜು ಮೈ, ಬೋಳು ತಲೆಯ, ಕನ್ನಡಕಧಾರಿ, ಇತಿಹಾಸ ಪಂಡಿತರ ಬದಲು ಬಾಹುಬಲಿಯಂತೆ ಎತ್ತರ ನಿಲುವಿನ, ಅಗಲ ಭುಜದ ತೀಕ್ಷ್ಣ ದೃಷ್ಟಿಯ ಪ್ರೊ। ಸೇನರನ್ನು ನೋಡಿ ಅಚ್ಚರಿಯಿಂದ ತಲೆ ತಗ್ಗಿಸಿದಳು. ವಿಶೂಕಾಕಾಗೆ ಅರ್ಜೆಂಟ್ ಕೆಲಸ ಬಂದಿದ್ದರಿಂದ ಅವರೊಡನೆ ಕಾಕಾನ ಮಗ ಪ್ರಶಾಂತ ಬಂದಿದ್ದ. ಪರಿಚಯ ಮಾಡಿಸಿ ಹೊರಟು ನಿಂತ.

"ಅಕ್ಕಾ, ನೀವಿಬ್ರೂ ಮಾತನಾಡ್ತಿರ್ರಿ. ಸ್ವಲ್ಪ ಕೆಲಸ ಅದ. ನಾ ಹೋಗಿ ಮತ್ತ ಬರ್ತೀನಿ. ಬಾಯ್."

ಈ ಅಪರಿಚಿತ ಪುರುಷನೊಡನೆ ಹೇಗೆ ಮಾತು ಪ್ರಾರಂಭಿಸಬೇಕು ತಿಳಿಯದೆ ಕುಳಿತಲ್ಲೇ ಚಡಪಡಿಸಿದಳು. ಸೇನ ತುಂಬ ಚುರುಕು. ಅವಳ ಸಂಕೋಚ ಹೋಗಲಾಡಿಸಲು ತಾನೇ ಮಾತಿಗೆ ಮೊದಲಿಟ್ಟರು, ಸಂಜೂನ ಜಾಣತನ, ಬುದ್ಧಿವಂತಿಕೆ, ಎಲ್ಲದರ ಬಗ್ಗೆ ಹೇಳಿದರು. ಕೋಣೆಯಲ್ಲಿ ಅಲ್ಲಲ್ಲಿ ಇಟ್ಟ ಮೂರ್ತಿಗಳನ್ನು ನೋಡುತ್ತ ತಿರುಗಾಡಿದರು. ಡವ ಡವ ಎನ್ನುತ್ತಿದ್ದ ಎದೆಯನ್ನು ವಸುಂಧರೆ ಹಿಡಿತಕ್ಕೆ ತಂದಳು. ಧೈರ್ಯ ಮಾಡಿ, "ನೀವು ಆರಾಮಾಗಿ ಕೂತುಕೊಳ್ರಿ. ಬಹಳ ಮಾತಾಡೂದುಕ ಅದ. ಚಹಾ ತರ್ತೀನಿ." ಎಂದು ತಡವರಿಸುತ್ತ ಇಂಗ್ಲಿಷ್‌ನಲ್ಲೇ ಹೇಳಿದಳು.

ಚಹ ಕುಡಿಯುತ್ತ ಸೇನ ಹೇಳಿದರು, "ನಿಮ್ಮ ಒಂದು ವೈಶಿಷ್ಟ್ಯ ನನಗ ಎದ್ದು ಕಂಡಿದೆ ವಸುಂಧರಾ. ನಿಮ್ಮ ಮೂರ್ತಿಗಳಲ್ಲಿ ಒಂದೂ

ಪುರುಷನದಿಲ್ಲ. ಎಲ್ಲವೂ ಸ್ತ್ರೀಯರು, ಇಲ್ಲವೇ ಮಕ್ಕಳು. ಯಾಕೆ ಅಂತ ನಾನು ಕೇಳೋದಿಲ್ಲ. ನೀವು ಪುರುಷದ್ವೇಷಿ ಅಲ್ಲ ಅಂತ ತಿಳಕೊಂಡಿದೀನಿ." ತುಟಿಯಂಚಿನಲ್ಲಿ ನಗೆ ಮಿನುಗುತ್ತಿತ್ತು.

ಅವರಿಂದ ಮುಖ ಮರೆಸಲು ವಸುಂಧರಾ ದಿಗ್ಗನೆ ಎದ್ದಳು. ಅತ್ತಿತ್ತ ಏನೋ ಹುಡುಕಾಡಿದಂತೆ ಮಾಡಿ ಕಿಟಕಿಯ ದಂಡೆಯ ಮೇಲಿದ್ದ ಕರೀಕಲ್ಲಿನ ಚಿಕ್ಕ ಬಟ್ಟಲು ತಂದಿಟ್ಟಳು. "ಪ್ರೊಫೆಸರ ಸೇನ, ನೀವು ಚೇನ ಸ್ಮೋಕರ ಅಂತೆ. ಸಿಗರೇಟ್ ಹಚ್ಚಬಹುದು. ಸಂಕೋಚ ಪಡಬೇಡಿ."

"ಪರವಾಗಿಲ್ಲ. ಥ್ಯಾಂಕ್ ಯೂ. ಓಹ್ ! ಎಷ್ಟು ಚೆನ್ನಾಗಿದೆ." ಬಟ್ಟಲಿನ ಸುತ್ತಲಿನ ಸುಳುವುಗಳನ್ನು ತಿರುಗಿಸಿ ನೋಡಿ ಮೆಚ್ಚಿದರು.

"ಅದು ನಿಮಗೆ ನನ್ನ ಕಾಣಿಕೆ. ದಯವಿಟ್ಟು ಇಟ್ಟುಕೊಳ್ಳಿ."

"ಥ್ಯಾಂಕ್ ಯೂ ವಸುಂಧರಾ, ತುಂಬಾ ಸಂತೋಷ."

ಮುಂದೆ ಕಲಾವಿದರ ಬಗ್ಗೆ, ಶಿಲ್ಪಕಲೆಯ ಶಾಸ್ತ್ರೀಯ ಗ್ರಂಥಗಳ ಬಗ್ಗೆ ಮಾತು ಮುಂದುವರಿಸಿದರು ಪ್ರೊ। ಸೇನ. ಹೆಚ್ಚು ಮಾತೆಲ್ಲ ಅವರದೇ. ದೇಶ ವಿದೇಶಗಳನ್ನು ಸುತ್ತಿದವರು, ಇತಿಹಾಸದ ಪಂಡಿತರು, ಕಲಾಭಿಮಾನಿಗಳು, ಶಿಲ್ಪಕಲೆಯ ಬಗ್ಗೆ ಹೆಚ್ಚು ತಿಳಿದವರು, ಅವರ ಮಾತಿನಲ್ಲಿ ಕಾಲ ಸರಿದದ್ದೇ ತಿಳಿಯಲಿಲ್ಲ. ವಸುಂಧರಾನ ಬದುಕಿನಲ್ಲಿ ಈ ಕಾಲ ತುಂಬ ಅಮೂಲ್ಯವಾದದ್ದು. ಶಿಲ್ಪಶಾಸ್ತ್ರದ ಬಗ್ಗೆ ತಾನು ಓದಿದ್ದು, ತಿಳಿದದ್ದು ತುಂಬಾ ಕಡಿಮೆ ಎನ್ನಿಸ್ತಿದೆ ಅವಳಿಗೆ. ಹವ್ಯಾಸವೆಂದು ಪ್ರಾರಂಭವಾಗಿದ್ದ ಅವಳ ಮೂರ್ತಿಗಳು ಇತ್ತೀಚೆಗೆ ಚೆನ್ನಾಗಿ ಮಾರಾಟವಾಗುತ್ತಿದ್ದವು. ಬೇಡಿಕೆಗಳೂ ಬಂದಿದ್ದವು. ಆದರೆ ಬೇರೆಯವರ ಬೇಡಿಕೆಗಿಂತ ತನ್ನ ಮನದಾಳದಿಂದ ಹೊರ ಹೊಮ್ಮುವ ಭಾವನೆಗಳಿಗೆ ರೂಪ ಕೊಡುವುದು ತನ್ನ ಸ್ವಭಾವ ಅದರಲ್ಲೇ ತನಗೆ ಹೆಚ್ಚಿನ ತೃಪ್ತಿ ಎಂದ ಅವಳ ಮಾತು ಮನದೀಪರ ಮನ ತಟ್ಟಿತು. ಕೈಚಾಚಿ ಮೇಜಿನ ಮೇಲಿದ್ದ ಅವಳ ಕೈ ಹಿಡಿದು ಮೃದುವಾಗಿ ಅಂಗೈ ಮೇಲೆ ಕೈಯಾಡಿಸಿ ಬೆರಳು ನೇವರಿಸಿದರು. ಉಗುರು

ಮುರಿದು, ಅಲ್ಲಲ್ಲಿ ಗೀರು ಬಿದ್ದು, ಗೆರೆಗಳಲ್ಲಿ ಕೊಳೆ ತುಂಬಿದ ಅಂಗೈಯನ್ನು ಸಂಕೋಚದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದಳು ವಸುಂಧರಾ. ಸೇನ ಬಿಡಲಿಲ್ಲ.

"ನಿಮ್ಮ ಕೈಯಲ್ಲಿ ಕಲ್ಲೂ ಮೇಣವಾಗಿದೆ ವಸುಂಧರಾ, ಅದಕ್ಕೆ ಯಾವ ರೂಪವನ್ನೂ ಕೊಡಬಲ್ಲಿರಿ. ನಿಜವಾಗಿಯೂ ನಿಮ್ಮ ಏಕಾಗ್ರಚಿತ್ತ, ತಾಳ್ಮೆ ಅಪರೂಪದ್ದು. ಹೀಗೇ ಮುಂದುವರಿಸಿ. ಬೆಸ್ಟ್ ಆಫ್ ಲಕ್. ಬೆಂಗಳೂರಿಗೆ ಬಂದಾಗಲೆಲ್ಲ ನಿಮ್ಮ ಭೆಟ್ಟಿಗೆ ಬರ್ತೀನಿ." ಮನದೀಪ ನಕ್ಕರು. ಮಗುವಿನಂಥ ಆ ನಿಷ್ಕಲ್ಮಷ ನಗೆ! ವಸುಂಧರಾನ ಮನಸ್ಸಿನಲ್ಲಿ ಅಚ್ಚೊತ್ತಿ ಹೋಯಿತು. ಸಂಕೋಚದ ಪೊರೆ ಕಳಚಿಬಿತ್ತು.

ಕಲ್ಲಿನಿಂದ ಅಹಲ್ಯೆ ಎದ್ದು ಬಂದಿದ್ದಳು. ವಸುಂಧರಾ ಚಾಣ ಕೆಳಗಿಟ್ಟು ಪೆನ್ ಎತ್ತಿಕೊಂಡಳು.

ಪ್ರಿಯ ಸಂಜೂ,

ಪ್ರೊ। ಸೇನ ಬಂದಿದ್ದರು...

ಮನದಲ್ಲಿ ಮೂಡಿದ ಭಾವನೆಗಳನ್ನು ಅಕ್ಷರಗಳಲ್ಲಿ ಇಳಿಸಲು ಅವಳಿಂದ ಸಾಧ್ಯವಾಗದೆ ಹೋಯಿತು.

●

ಹುಚ್ಚು

ಹೆಚ್ಚು ಬೆಳಕಿಲ್ಲದ ಆ ಚಿಕ್ಕ ಕೋಣೆಯಲ್ಲಿ ಬಂದಾಗ ಗೋಡೆಗೆ ಒರಗಿಸಿಟ್ಟ ಬಟ್ಟೆಯ ಗಂಟಿನಂತೆ ಅವಳು ಕುಳಿತಿದ್ದಳು. ಛೇ ಇವಳು ಯಾರೋ ಬೇರೆ. ಅರ್ಧ ನರೆತ ಕೂದಲು, ಮಾಸಿದ ಸೀರೆ, ಸೊರಗಿದ ಮೈ-ಮುಖ ಸರಿಯಾಗಿ ಕಾಣುತ್ತಿಲ್ಲ.

"ನಿಮ್ಮನ್ನ ನೋಡಾಕ ಯಾರೋ ಬಂದಾರ ಗಿರಿಜವ್ವಾ" ಹತ್ತಿರದ ಹಾಸಿಗೆಯಲ್ಲಿ ಮಲಗಿದ್ದ ಮುದುಕಿ ಕೂಗಿದಾಗ ಗಂಟು ಚಲಿಸಿತು. ಬೋಳು ಹಣೆ, ಒಡವೆಗಳಿಲ್ಲದ ಕಿವಿ, ಮೂಗು, ಹೂವಿಲ್ಲದ ತುರುಬು- ಈ ಸಲ ಅವಳಲ್ಲ ಎನಿಸಲಿಲ್ಲ- ಅವಳಿನ್ನೂ ದಿಟ್ಟಿಸಿ ನೋಡುತ್ತಲೇ ಇದ್ದಳು ನಂಬದಂತೆ. ಕಣ್ಣಿನ ಅಪರಿಚಿತ ಭಾವ ಮಾಯವಾಗುತ್ತ ಕ್ರಮೇಣ ದುಃಖ ತುಂಬಿಕೊಳ್ಳುತ್ತಿತ್ತು. ಅಲ್ಲಿಯ ನೋವು, ಅಸಹಾಯಕತೆ- ತಡೆಯಲಾಗಲಿಲ್ಲ, ಮೊಣಕಾಲೂರಿ ಕುಳಿತು, 'ದೊಡ್ಡವ್ವಾ' ಎನ್ನುತ್ತ ಅಪ್ಪಿಕೊಂಡಳು ಸರೋಜ. ಅವಳಿಗೂ ತನ್ನ ಒಂಟಿತನದ ಆಳದ ನೋವು ಚಿಮ್ಮಿ ಬಂದಿತ್ತು.

"ಸರೂ, ಸುಮ್ಮನಾಗು, ಅಳಾಕ ಏನ ಆಗೇತಿ ಈಗ?" ಬೆನ್ನು ನೇವರಿಕೆಯೊಡನೆ ಬಂದ ಮಾತು ಹಿತವೆನಿಸಿತು. ಕಣ್ಣು ಮುಚ್ಚಿ ಸುಮ್ಮನೆ ಅವಳ ತೊಡೆಯ ಮೇಲೆ ಮಲಗಿದಳು ಸರೋಜ, ಎಷ್ಟೋ ವರ್ಷಗಳ ಹಿಂದೆ ಮಲಗುತ್ತಿದ್ದಂತೆ. ಹೆಣ್ಣುಮಕ್ಕಳಿಲ್ಲದ ದೊಡ್ಡವ್ವನಿಗೆ ತನ್ನನ್ನು ಕಂಡರೆ ಆಟದ ಗೊಂಬೆ ಸಿಕ್ಕಂತೆ. ಮಗುವಾಗಿ ಆಡುವವಳು. ಅವಳ ಮುದ್ದುಗಳಿನ್ನೂ ಕೆನ್ನೆಯ ಮೇಲೆ ಹಸಿಯಾಗಿರುವಂತೆ ಅನಿಸುತ್ತಿತ್ತು. ಹಾಗೇ ಹೊತ್ತೆಷ್ಟು ಸರಿಯಿತೋ ಇಬ್ಬರಿಗೂ ತಿಳಿಯಲಿಲ್ಲ. ಇವಳನ್ನು ಬಿಟ್ಟು ವಿಮಲಾಬಾಯಿ ಹೊರಟುಹೋಗಿದ್ದಳು. ವಾತ್ಸಲ್ಯದಿಂದ ಬಗ್ಗಿ ಅವಳ ಸುರುಳಿಗುರುಳುಗಳನ್ನು ಸರಿಸುತ್ತ ಕೇಳಿದಳು ಗಿರಿಜಮ್ಮ.

"ನಾ ಇಲ್ಲೆ ಇದ್ದದ್ದು ನಿನಗ ಹ್ಯಾಂಗ ಗೊತ್ತಾತು ?"

"ನಿನಗ ಗೊತ್ತಿಲ್ಲ ದೊಡ್ಡವ್ವಾ. ನಾ ಇದs ಊರ ಕಾಲೇಜದಾಗ ಲೆಕ್ಚರರ ಅದೀನಿ. ಹತ್ತು ವರ್ಷದಿಂದ ಯಾರೂ– ಅವ್ವ ಅಪ್ಪ ಸುದ್ದಾ– ನನಗ ಪತ್ರಾ ಬರದಿದ್ದಿಲ್ಲ. ಗಿರೀಶಣ್ಣನ ಪತ್ರ ಬಂತು ಮೊನ್ನೆ. ಎರಡ ತಿಂಗಳಾದ್ವು ಅವ್ವ ಮನೀ ಬಿಟ್ಟು ಎಲ್ಲೋ ಹೋಗ್ಯಾಳ. ಅಪ್ಪ ತೀರಿಕೊಂಡಾಗಿಂದ ಮನಸ್ಸಿಗೆ ಹಚ್ಚಿಕೊಂಡು ಆಕಿ ಹುಚ್ಚಿ ಆಗ್ಯಾಳ. ನಿಮ್ಮೂರ ವೃದ್ಧಾಶ್ರಮದಾಗ ನೋಡಿದ್ಹಾಂಗ ಆಯ್ತು ಅಂತ ಯಾರೋ ಅಂದರು. ಅದಕ್ಕ ನೀ ನೋಡಿ ಬಂದು ಖರೇ ಏನದ ನಮಗ ತಿಳಿಸು. ನಾವು ಬಂದು ಕರಕೊಂಡು ಹೋಗ್ತೀವಿ ಅಂತ ಬರದಿದ್ದಾ."

"ಹುಚ್ಚು ಯಾರಿಗೆ ಹಿಡಿದsದೋ ಏನೋ ನನಗೆ ತಿಳೀವೊಲ್ಲದು. ಅವರಿಗೋ ? ನನಗೋ ?" ಕಣ್ಣೀರಿನಲ್ಲೇ ನಕ್ಕಳು ಗಿರಿಜಮ್ಮ.

"ಏಳಿನ್ನ ಮನೀಗೆ ಹೋಗೂಣು. ನಿನ್ನ ಕೂಡ ಭಾಳ ಮಾತಾಡ ಬೇಕು ನಾನು. ಏ ಮ ಲಾ ಬಾ ಯಿ ನ್ನೂ ಕೇಳೀನಿ. ಅವರೂ ಒಪ್ಪಿಗಿ ಕೊಟ್ಟಾರ." ಏನೋ ಒಂದ ನ ಮೂ ನಿ ಅದಾರ, ನಿಮ್ಮ ದೊಡ್ಡವ್ವ, ನಾರ್ಮಲ್ ಇದ್ದಾಂಗ ಇಲ್ಲಾ. ನಮಗೂ ಪ್ರಾಬ್ಲೆಮ್ ಆಗ್ಯಾರ. ಅಗತ್ಯ ಮನೀಗೆ ಕರಕೊಂಡು ಹೋಗರಿ ಎಂದು ಅವರು ಹೇಳಿದ್ದನ್ನು ನೆನಪಿಸಿ ಕೊಂಡಳು ಸರೋಜ.

"ಬ್ಯಾಡವ್ವ, ನಿಮ್ಮ ಮನೀಗೆ ಬ್ಯಾಡಾ. ನಿನ್ನ ಗಂಡ ಏನರೆ ಅಂದಾರು. ಇಲ್ಲೇ ಮಾತಾಡೂಣು. ನಾಳೆ ಮ ತ್ತ ಬಾ" ಕಳುಹಿಸಿಕೊಡುವವಳಂತೆ ಕೈಯೂರಿ ಮೇಲೆದ್ದಳು. ಮುಖದಲ್ಲಿ ಕಳೆ ಮೂಡತೊಡಗಿತ್ತು.

"ನಾ ಕರಿಯೂದು ನನ್ನ ಮನೀಗೆ ದೊಡ್ಡವ್ವಾ, ಗಂಡನ ಮನೀಗಲ್ಲ. ನಾನು ಗಂಡನ್ನ ಬಿಟ್ಟು ಬಂದು ಎರಡ ವರ್ಷಾದ್ವು. ಈಗ ಒಬ್ಬಾಕಿ ಅದೀನಿ. ನೀ ಬರಲಿಕ್ಕೇಬೇಕು." ಯಾವುದೇ ಸಂಕೋಚವಿಲ್ಲದೆ ಹೇಳಿದ ಸರೋಜ ಮೂಲೆಯಲ್ಲಿದ್ದ ಹಳೆಯ ಕೈ ಚೀಲ ಎತ್ತಿಕೊಂಡಳು.

ಒಂದು ಕ್ಷಣ ಸರೋಜಳ ಮುಖ ದಿಟ್ಟಿಸಿ ಮಾತಾಡಿದಳು ಗಿರಿಜಮ್ಮ ಕನವರಿಸುವವಳಂತೆ. "ಆತು, ಇಬ್ಬರೂ ಹುಚ್ಚರ ಆಗೀವಿ. ನಾನು ಮನೀ ಬಿಟ್ಟೆ, ನೀನು ಗಂಡನ್ನ ಬಿಟ್ಟಿ. ಆದರ ಸರೂ ನಿಮ್ಮವ್ವನ ಪತ್ರ ಬಂದಾಗ ಇವರು ಮೈಮ್ಯಾಗ ದೆವ್ವ ಬಂದವರ್ಹಾಂಗ ಕುಣಿದರು. ಆ ಲೌಡಿ ಎಲ್ಲಾರ ಮುಖಕ್ಕೆ ಮಸೀ ಬಳದು, ಬ್ಯಾರೆ ಜಾತಿಯವನ ಕೂಡ ಓಡಿಹೋಗ್ಯಾಳ ಅಂದವ್ಯಾಲೆ, ನಮ್ಮ ಪಾಲಿಗೆ ಸತ್ತುಹೋದಳು. ಆಕೀ ಕೂಡ ಯಾವುದೇ ರೀತಿ ಸಂಬಂಧ ಇಟಕೋಬಾರದು. ಆಕಿ ನಮ್ಮ ಮನೀ ಕಟ್ಟೀಕಲ್ಲ ಹತ್ತ ಬಾರದು ಅಂತ ಒದರಾಡಿದರು. ಆಕಳಾ ಹಿಂಡೂ ನೆವಾ ಮಾಡಿ ಹಿತ್ತಲದಾಗ ಹೋಗಿ ಅತ್ತೆ, ಒಬ್ಬಳs ಕೊತಕೊಂಡು ಸಂಕಟಾಪಟ್ಟೆ. ಆದರ ಒಳಗೊಳಗ ಸಂತೋಷಾನೂ ಆಗ್ತಿತ್ತು. ಯಾಕ ಗೊತ್ತೈತೇನ ? ನಮ್ಮ ಸರೂ ತಾನು ಪ್ರೀತಿ ಮಾಡೂ ಹುಡುಗನ್ನ ಮದುವಿ ಆಗಿ ಸುಖದಿಂದ ಇರತಾಳಲ್ಲಾ ಅಂತ." ಆದರ...

ಒಂದು ಶಬ್ದವೂ ಕಿವಿಗೆ ಬೀಳದಂತೆ ಹೊರಗೆ ಹೊರಟ ಸರೋಜಳನ್ನು ಹಿಂಬಾಲಿಸಿದಳು ಗಿರಿಜಮ್ಮ. ದಿಂಬಿನ ಚೀಲದಿಂದ ಕಾಗದದ ಪುಡಿಕೆಯೊಂದನ್ನು ತೆಗೆದು ಕುಪ್ಪಸದೊಳಕ್ಕೆ ಸೇರಿಸಿಕೊಂಡದ್ದನ್ನು ಸರೋಜ ನೋಡಿಯೂ ನೋಡದಂತಿದ್ದಳು.

ಬೆಳಿಗ್ಗೆ ಸ್ನಾನ ಮಾಡಿ ಪೂಜೆ ಮಾಡಿದ ಹೊರತು ಬಾಯಲ್ಲಿ ಹನಿ ನೀರೂ ಹಾಕಿದವಳಲ್ಲ ದೊಡ್ಡವ್ವ. ಅವಳ ಮಡಿ, ಉಪವಾಸ, ವ್ರತ ಎಲ್ಲ ತಾನು ಕಂಡಿದ್ದಳು– 'ದೇವರ ಕ್ವಾಣಿ ಎಲ್ಲೈತಿ ಸರೂ' ಎಂದು ಕೇಳಿದರ 'ದೇವರು ಅದಾನಂತ ನಾನು ನಂಬೂದಿಲ್ಲ. ಪೂಜಿ ಮಾಡೂದೂ ಇಲ್ಲಾ. ದೊಡ್ಡವ್ವಾ ನಿನಗ ಬೇಕs ಬೇಕು ಅಂದರ ಆ ಶಿವನ ಕ್ಯಾಲೆಂಡರಕ ಪೂಜಿ ಮಾಡು' ಎಂದು ಹೇಳಬೇಕೆಂದುಕೊಂಡಿದ್ದಳು. ಆದರೆ ತಲೆಗೆ ಸ್ನಾನ ಮಾಡಿದ ಗಿರಿಜಮ್ಮ ಏನೂ ಕೇಳದೆ ಹಿತ್ತಿಲಿಗೆ ಕೂದಲು ಒಣಗಿಸಲು ಹೋಗಿ ಹೂವಿನ ಗಿಡಗಳ ಅಂದ-ಚಂದ ನೋಡುತ್ತ ನಿಂತದ್ದು ನೋಡಿ ಪೆಚ್ಚಾದಳು ಸರೋಜ.

ತನ್ನದೆನ್ನುವ ಮನೆಯನ್ನು ಬಿಟ್ಟುಬಂದವಳು. ಇನ್ನೊಬ್ಬರಿಗೆ ತೊಂದರೆ ಕೊಡಬಾರದೆನ್ನುವಷ್ಟು ಸೂಕ್ಷ್ಮ ಮನಸ್ಸಿನವಳು. ಅವಳ ನಂಬಿಕೆ

ಅವಳಿಗೆ. ಪಾಪ, ಪೂಜೆ ಮಾಡದ್ದಕ್ಕೆ ಮತ್ತೆ ಅವಳ ಹುಚ್ಚು ಮರುಕಳಿಸ ಬಾರದಲ್ಲ. ತನ್ನ ಮನಸ್ಸಿಗಾದ ನೋವಿನಿಂದ ತಲೆ ಕೆಟ್ಟು ಮನೆ ಬಿಟ್ಟಿದ್ದಾಳೆ. ಇಲ್ಲವಾದರೆ ಅವಳಿಗೇನು ಕಡಿಮೆ. ಮೂವರು ಮಕ್ಕಳು, ಸೊಸೆಯಂದಿರು, ಆಸ್ತಿ-ಪಾಸ್ತಿ, ತುಂಬಿದ ಮನೆಯ ಯಜಮಾನಿಯಾಗಿ ಇರಬಹುದಿತ್ತು. ಮನೆ ಬಿಟ್ಟ ಕಾರಣವನ್ನು ತಾನಿನ್ನೂ ಕೇಳಿಲ್ಲ. ಸದ್ಯಕ್ಕೆ ಬೇಡ, ಅವಳಾಗಿಯೇ ಹೇಳಲಿ. ಅವಳಿಗೆ ಬೇಕೆನ್ನಿಸುವಷ್ಟು ದಿನ ಇಲ್ಲಿಯೇ ಇರಲಿ. ಸಂತೋಷವಾಗಿ-ದ್ದರೆ ಸಾಕು. ತನಗೂ ಒಂದು ಆಸರ. ಮನೆಯ ಬಗ್ಗೆ ನಿಶ್ಚಿಂತೆ- ಯೋಚಿಸುತ್ತ ತಲೆ ಬಾಚಿಕೊಳ್ಳುತ್ತಿದ್ದ ಸರೋಜ ಕಿಡಿಕಿಯಲ್ಲಿ ಇಣಿಗಿದಳು. ಪಾತ್ರೆ ತೊಳೆಯುತ್ತಿದ್ದ ಪಾರ್ವತಿಯ ಮೊಮ್ಮಗನನ್ನು ದೊಡ್ಡವ್ವ ಸೊಂಟದಲ್ಲಿಟ್ಟುಕೊಂಡು ಓಡಾಡುತ್ತಿದ್ದಳು. ನಾಳೆ ಅವಳ ಜಾತಿ ಗೊತ್ತಾದರೆ ? —ಸರೋಜಳಿಗೆ ನಗು ಬಂತು.

ಮತ್ತೊಂದು ದಿನ ಸರೋಜ ಮನೆಗೆ ಬಂದಾಗ ಬಾಗಿಲು ತೆರೆದ ದೊಡ್ಡವ್ವನ ಹಣೆಯಲ್ಲಿ ದೊಡ್ಡ ದುಂಡು ಕುಂಕುಮ, ತಲೆ ತುಂಬ ಹೂವು. ಅಚ್ಚರಿಯಾದರೂ ಸಂತೋಷವಾಯಿತು. "ದೊಡ್ಡವ್ವಾ, ಹಸಿವಿ ಆಗೇದ" ಎನ್ನುತ್ತ ಕಾಲು ತೊಳೆಯಲು ಹೋದಳು.

ಎಂಥಾ ವಿಚಿತ್ರ ಅದಾಳ ಈ ಹುಡುಗಿ. ನನ್ನ ನೋಡಿದರೂ ಸುಮ್ಮನs ಹೋದಳು. ಯಾಕ ಹಚಿಕೊಂಡಿರಿ ಅಂತ ಸುದ್ದಾ ಕೇಳಲಿಲ್ಲ. ಹಿಂಗ ಒಂದಿನಾ ಕುಂಕುಮಾ ಹಚಿಕೊಂಡರ ಮುಕ್ತಾ ಎಷ್ಟು ರಂಪಾಟ ಮಾಡಿದಳು. ಬಯ್ದಳು ಛೀ ಅಂದಳು. ಗಂಡ ಬಂದ ಕೂಡಲೇ ಹೇಳಿದಳು. ಸುರೇಶ ಅಂತೂ ಆಕಾಶಾನs ಕಡಕೊಂಡ ತಲೀಮ್ಯಾಲೆ ಬಿದ್ಹಾಂಗ 'ಕಾಲು ಬೀಳತೀನಿ ಅವ್ವಾ ನಮ್ಮ ಮನೀ ಮರ್ಯಾದಿ ಕಳಿಬ್ಯಾಡಾ ಅಂತ ಹೇಳಿ ಆಣಿ ಮಾಡಿಸಿಕೊಂಡಾ. ಇವರ ಮನೀ ಮರ್ಯಾದಿ ನನ್ನ ಕುಂಕುಮದಾಗ ಇರತೈತೇನು ? ಇವರು ಹಣಾ ಗಳಿಸೂ ದಾರಿ ನೋಡಿದರ ಸೂಳಿ ಒಳ್ಳೇಕಿ ಭ್ರಷ್ಟರು— ದುಷ್ಟರು. ಇಂಥಾ ಹುಳುಗೋಳು ನನ್ನ ಹೊಟ್ಟ್ಯಾಗ ಹ್ಯಾಂಗ ಹುಟ್ಟಿದವೋ ಏನೋ, ನಾನೂ ಹಟಕ್ಕ ಬಿದ್ದು ದಿನಾ ಕುಂಕುಮಾ ಹಚಿಕೊಂಡೆ. ಹೂ ಮುಡಕೊಂಡೆ ಖೋಲ್ಯಾಗ ಹಾಕಿದರು, ಹೊಡೆದರು, ಹುಚ್ಚಿ ಅಂದರು—

ಚಕ್ಕುಲಿ ತಿನ್ನುತ್ತ ಸರೋಜಾ ಅಂದಳು, "ದೊಡ್ಡಪ್ಪಾ ನಾ ಒಂದು ಮಾತ ಹೇಳ್ತಿನಿ ಕೇಳ್ತಿಯಾ? ಇವತ್ತು ಎಷ್ಟ ಛಂದ ಕಾಣತೀ, ದಿನಾ ಹಿಂಗs ಇರು" ಕಪ್ಪಿನೊಳಗಿನ ಚಹ ತುಳುಕುತ್ತಿತ್ತು ಗಿರಿಜಮ್ಮನ ಕಣ್ಣಂಚಿನ ಮುತ್ತಿನ ಹನಿಯಂತೆ.

ದೊಡ್ಡವ್ವ ಹೇಳಿದಳು ಮೂರು ದಿನದಿಂದ ಕೆಲಸಕ್ಕೆ ಬಾರದ ಪಾರ್ವತಿ ಬಂದಿದ್ದಳಂತೆ. ಸಣ್ಣ ಮೂರು ಮಕ್ಕಳನ್ನು ಬಿಟ್ಟು ಅವಳ ಮಗಳು ಲಕ್ಷ್ಮಿ ಜಡ್ಡಾಗಿ ಸತ್ತುಹೋಗಿದ್ದಳು. ಅಳಿಯ, ಹೆಂಡತಿ ಮಕ್ಕಳನ್ನು ಮೊದಲೇ ಹೊರಗೆ ಹಾಕಿದ್ದ. ತಾಯಿ–ಮಗಳು ಹಗಲೆಲ್ಲಾ ದುಡಿದರೂ ಎಲ್ಲರ ಹೊಟ್ಟೆ ತುಂಬುತ್ತಿರಲಿಲ್ಲ. ಈಗ ಈ ಚಿಳ್ಳೆ ಪಿಳ್ಳೆಗಳನ್ನು ತನ್ನ ಉಡಿಯಲ್ಲಿ ಹಾಕಿ ಹೋಗಿಬಿಟ್ಟ. ನೆನೆಸಿ ಬಹಳ ಗೋಳಾಡಿದ್ದಳು ಪಾರ್ವತಿ. ಹಡೆದ ಕರುಳು, ಅವಳ ಸಂಕಟ ನೋಡಿದ ದೊಡ್ಡವ್ವನೂ ತುಂಬಾ ಅತ್ತಿದ್ದಳು. ಸರೋಜಾ ಬಂದಾಗ ಕಣ್ಣಿನ ಕೆಂಪು ಇನ್ನೂ ಮಾಸಿರಲಿಲ್ಲ. ಮೂಲೆಯಲ್ಲೊಂದು ಚಾಪೆಯ ಮೇಲೆ ಪುಟ್ಟ ಜಯಾ ಮಲಗಿತ್ತು.

ಬೆದರುಗಣ್ಣುಗಳಿಂದ ತನ್ನ ಮುಖವನ್ನು ನೋಡುತ್ತ ನಿಂತ ದೊಡ್ಡವ್ವನ ಮನದ ಭಾವ ತಿಳಿದುಕೊಂಡ ಸರೋಜ ಹತ್ತಿರ ಹೋಗಿ ಸಲುಗೆಯಿಂದ ಗಿರಿಜಮ್ಮನ ಕೈ ಹಿಡಿದುಕೊಂಡಳು. "ದೊಡ್ಡವ್ವಾ, ಜಯಾನ್ನ ಇಲ್ಲೆ ಇಟ್ಟಕೊಂಡು ಛೊಲೋ ಮಾಡಿದಿ. ಪಾಪ, ಪಾರ್ವತಿ ಭಾಳ ಕಷ್ಟದಾಗ ಅದಾಳ ನಾಳಿಂದ ಹಾಲು ಜಾಸ್ತಿ ಹಾಕಿಸಿಕೋ ಕೂಸಿನ ಸಲುವಾಗಿ." ಗಿರಿಜಮ್ಮ ಅವಳನ್ನು ಗಟ್ಟಿಯಾಗಿ ಅಪ್ಪಿಕೊಂಡುಬಿಟ್ಟಳು. ಮೌನವಾಗಿ ಅಳುತ್ತಿದ್ದ ದೊಡ್ಡವ್ವನ ಮೇಲಿನ ಹಿಡಿತ ಬಿಗಿ ಮಾಡಿದಳು ಸರೋಜ—

ದೊಡ್ಡವ್ವನದು ತುಂಬ ಅಂತಃಕರಣದ ಜೀವ. ಅವಳ ದೊಡ್ಡ ಮನೆ, ಅತಿಥಿಗಳ ಉಪಚಾರ, ಬಡಬಗ್ಗರಿಗೆ ಕರುಣೆ, –ದೊಡ್ಡಪ್ಪನಿಗೆ ತಿಳಿಯದಂತೆ ಹಿತ್ತಲು ಬಾಗಿಲಿನಲ್ಲಿ ಕೈ ಎತ್ತಿ ಕೊಟ್ಟದ್ದು, ತಾನು ಕಂಡಿಲ್ಲವೇ? ಅಳುತ್ತ ಬರುವವರ ಕಣ್ಣೀರು ಒರೆಸಿದ ಕೈ ಅವಳದು. ಈಗ ನೋಡಿದರೆ ಈ ಪರಿಸ್ಥಿತಿ. ತನ್ನದೆನ್ನುವದು ಏನೂ ಇಲ್ಲ. ಕೈತುಂಬ ಇದ್ದ ಬಂಗಾರದ ಬಳೆಗಳು ಏನಾದವೋ, ಎಲ್ಲ ಯಾರಿಗೆ ಕೊಟ್ಟಳೋ? ಹತ್ತಿರವಿರುವ ಫುಡಿಕೆಯಲ್ಲಿ

ಇದ್ದರೂ ಇರಬಹುದು. ಕೇಳಿದರೆ ಏನಾದರೂ ತಿಳಿದುಕೊಂಡಾಳು. ಅಷ್ಟಾಗಿ ಅವಳ ಬಂಗಾರಕ್ಕಾಗಿ ಆಸೆಪಟ್ಟು ನಾನು ಇಲ್ಲಿಗೆ ಕರೆದುಕೊಂಡು ಬಂದಿಲ್ಲವಲ್ಲ. ಅವಳು ನನ್ನವಳು, ತಾಯಿಗಿಂತ ತುಂಬಾ ಹತ್ತಿರದವಳು— ಯೋಚಿಸುತ್ತ ಪುಸ್ತಕ ಕೈಗೆತ್ತಿಕೊಂಡಳು. ಮಗುವಿನ ಉಚ್ಚೆ ಬಟ್ಟೆ ತೆಗೆಯುತ್ತಿದ್ದಳು ಗಿರಿಜಮ್ಮ.

ತಾಯಿ ಇಲ್ಲದ ಮಗುವನ್ನು ಜೋಪಾನ ಮಾಡುವದು ಸುಲಭದ ಮಾತಲ್ಲ. ಎಂಟ್ಹತ್ತು ದಿನ ರಾತ್ರಿ ಎಲ್ಲ ನಿದ್ದೆಗೆಟ್ಟಿದ್ದರೂ ಗಿರಿಜಮ್ಮ ಸೋಲೊಪ್ಪಿಕೊಂಡಿರಲಿಲ್ಲ. ಅವಳಿಗಿದ್ದ ಚಿಂತೆ ಒಂದೇ, ಮಗುವಿನ ಕೆಲಸ ಗಳಲ್ಲಿ ಸರೋಜಳನ್ನು ಚೆನ್ನಾಗಿ ನೋಡಿಕೊಳ್ಳಲು ಆಗುತ್ತಿಲ್ಲ ಎನ್ನುವದು. ಹೆಗಲಿಗೆ ಆನಿಸಿಕೊಂಡು ಓಡಾಡಿ, ತೊಡೆಯ ಮೇಲೆ ಹಾಕಿಕೊಂಡು ತಟ್ಟಿ ತಟ್ಟಿ, ಕಳ್ಳದನಿಯಲ್ಲಿ ಜೋಗುಳ ಹಾಡಿ ಆಗ ತಾನೆ ಮಗುವನ್ನು ಮಲಗಿಸಿ ದ್ದಳು. ಕರೆ ಗಂಟೆ ಸದ್ದಾಯಿತು. ಸಿಡುಕಾಡಿ ಮತ್ತೆ ಮಲಗಿದ ಮಗುವಿನತ್ತ ನೋಡಿ ಬೆಕ್ಕಿನ ಹೆಜ್ಜೆ ಇಟ್ಟು ಹೊರಗೆ ನಡೆದಳು.

ಬಾಗಿಲಾಚೆ ಎತ್ತರದ ಸಾದುಗಪ್ಪಿನ ಯುವಕ ನಿಂತಿದ್ದ. ಚಕಿತನಾಗಿ ಹೆಜ್ಜೆ ಹಿಂದಿಟ್ಟು ಕೇಳಿದ. "ಸರೋಜ ಇನ್ನೂ ಬಂದಿಲ್ವಾ?"

ಇಲ್ಲಿಗೆ ಬಂದು ಎರಡು ತಿಂಗಳಾದರೂ ಇವನನ್ನು ನೋಡಿದ ನೆನಪಿಲ್ಲ. "ಕಾಲೇಜ್ನಿಂದ ಸರೂ ಇನ್ನೂ ಬಂದಿಲ್ಲಾ. ಯಾಕ ಏನ ಕೆಲಸಿತ್ತು?" ಅವಳು ಬರುವ ಹೊತ್ತಾಗಿದ್ದರೂ ಒಳಗೆ ಕೂಡ್ರಲ್ಲ ಎಂದು ಹೇಳಲು ಹಿಂಜರಿಕೆ. ಯಾರೋ ಏನೋ.

"ಅವಳಿಗೆ ಈ ಪುಸ್ತಕ ಬೇಕೂಂತ ಕೇಳಿದ್ಲು ಕೊಡೋದಕ್ಕೇಂತ ಬಂದೆ. ನೀವು ಯಾರೋ ಗೊತ್ತಾಗಲಿಲ್ಲ, ನಾನು ಯಾರೂಂತ ನಿಮಗೂ ಗೊತ್ತಿಲ್ಲ. ನಾನು ಸರೋಜಳ ಗಂಡ ಚಂದ್ರನಾಥ."

ಗಂಟಿಕ್ಕುತ್ತಿದ್ದ ಹುಬ್ಬು ಸಡಿಲವಾಯಿತು. "ಹಾಂ, ಹೌದೇನು. ನಾನು ಆಕಿ ದೊಡ್ಡವ್ವ. ಬರ್ರಿ ಒಳಗ ಬರ್ರಿ ಕೂಡ್ರಿ ನಾವ್ಯಾರೂ ನಿಮ್ಮನ್ನ ನೋಡೇ ಇಲ್ಲಲ್ಲ, ಅದಕ್ಕs ಗೊತ್ತಾಗಲಿಲ್ಲ. ಈ ಪುಸ್ತಕಾ ನಾನs ಕೇಳಿದೆ."

"ನೀವು ತುಂಬಾ ಓದ್ತಿರಾ ಅಮ್ಮ" ಚಂದ್ರನಾಥನಿಗೆ ಆಶ್ಚರ್ಯ.

"ಇಷ್ಟು ದಿನಾ ಅಂತೂ ಓದಲಿಕ್ಕೆ ಆಗಲೇ ಇಲ್ಲ. ಇನ್ನಾರೆ ಓದಬೇಕು ಅಂತ ಮಾಡಿದ್ದೆ. ಮನೀಯೊಳಗ ಇರೂವವರಿಗೆ ಜ್ಞಾನಾ ಬೆಳಸಿಕೊಳ್ಳಲಿಕ್ಕೆ ಪುಸ್ತಕಾನ ಬೇಕಲ್ಲ. ಇರಲಿ, ಮಾತೆಲ್ಲಾ ಆಮ್ಯಾಲೆ, ಈಗ ಏನ ತೊಗೋ ತೀರಿ. ಚಹಾನೋ ಕಾಫೀನೋ ?"

"ಬೇಡಿ ಅಮ್ಮ, ನಾನು ಚಹಾ, ಕಾಫಿ ಕುಡಿಯೋಲ್ಲ. ತೊಂದರೆ ತೊಗೋಬೇಡಿ."

"ಹಾಗಂದರ ಬೋರ್ನವಿಟಾ ತರ್ತೀನಿ" ಸಂಭ್ರಮದಿಂದ ಒಳನಡೆದಳು ಗಿರಿಜಮ್ಮ.

ಕಪ್ಪ ಇದ್ದರೂ ಏನ ಕಳಾ ಐತಿ ಮಾರೀಮ್ಯಾಲೆ, ಎಷ್ಟ ಎತ್ತರ ಆದಾನ. ಆ ವಿನಯ, ಸರಳತನಾ. ಸರೋಜಾ ಪುಣ್ಯಾ ಮಾಡಿದ್ಲು ಇಂಥಾ ಗಂಡ ಸಿಗಾಕ. ಆದರ ಇಬ್ಬರೂ ಯಾಕ ದೂರ ಆದ್ರು ? ಏನು ಕಾರಣ ಇದ್ದೀತು. ಮನೀಗೆ ಬಂದದ್ದು ನೋಡಿದರ ಅಂಥಾ ಜಗಳ ಗಿಗಳ ಏನೂ ಆಗಿರಲಿಕ್ಕಿಲ್ಲ.

"ನೀವು ಏನೂ ತಿಳಕೊಳ್ಳದಿದ್ದರ ಒಂದ ಮಾತು ಕೇಳಲ್ಯಾ ?"

"ಕೇಳಿ ಅಮ್ಮ. ನೀವು ನನ್ನ ತಾಯಿ ಸಮಾನ."

"ನೀವಿಬ್ಬರೂ ಪ್ರೀತಿ ಮಾಡಿ ಮದುವಿ ಆಗಿದ್ದರೂ ಬ್ಯಾರೆ ಯಾಕ ಆದಿರಿ ?"

"ಸರೂ ಏನೂ ಹೇಳಿಲ್ವಾ ?"

"ನಾನು, ಮನೀ ಮಕ್ಕಳು ಎಲ್ಲಾ ಬಿಟ್ಟು ಯಾಕ ಬಂದೆ ಅಂತ ಆಕೀನೂ ಕೇಳಿಲ್ಲ, ನಾನೂ ಆಕಿನ್ನ ಏನೂ ಕೇಳಿಲ್ಲ. ನಿಮ್ಮನ್ನ ನೋಡಿ ಯಾಕೋ ಕೇಳಬೇಕು ಅನ್ನಿಸ್ತು. ಹೇಳಬೇಕು ಅನ್ನಿಸಿದರ ಹೇಳ್ರಿ, ಒತ್ತಾಯ ಇಲ್ಲ."

"ಅವಳಿಗೆ ಮಕ್ಕಳೇ ಬೇಡಾಂತ ಅಮ್ಮ. ನನಗೆ ಒಂದು ಮಗುವಾದರೂ ಬೇಕು. 'ನಮ್ಮದೇ ಯಾಕೆ ಬೇಕು. ಪ್ರೀತಿಗೆ ಒಂದು ಮಗು ತಂದು

ಸಾಕ್ಕೊಂಡರೆ ಆಯ್ತಲ್ಲ' ಅಂತಾಳೆ. ಸಿಟ್ಟು, ಜಗಳ, ಮಾತು ಎಲ್ಲ ಆದ್ಮೇಲೆ ನೀವು ಬೇರೆ ಮದುವೆ ಮಾಡಿಕೊಳ್ಳಿ, ಮಕ್ಕಳಿಗಾಗಿ ಅಂತ ಮನೆಬಿಟ್ಟು ಬಂದಿದ್ದಾಳೆ."

ಇಷ್ಟು ಚಿಕ್ಕವಳಾಗಿ ಇವಳಿಗೆ ಇಂಥ ಬುದ್ಧಿ ಹೇಗೆ ಬಂದಿತು. ಹೆತ್ತ ಮಕ್ಕಳ ಸುಖ ನಾನು ಕಂಡಿಲ್ಲವೇ ? ನಮ್ಮ ಮಕ್ಕಳು ನಮ್ಮಂತೆಯೇ ಇರ್‍ತಾರೆ ಅನ್ನುವ ಭರವಸೆಯೇ ಇಲ್ಲ. ಹಿಂದಿನ ತಲೆಮಾರಿನ ಯಾರನ್ನಾದರೂ ಹೋಲಬಹುದು. ಸಂತ, ವಂಚಕ, ಕವಿ, ಕಲಾವಿದ, ಭ್ರಷ್ಟ, ದರೋಡೆಕೋರ ಏನಾದರೂ ಆಗಬಹುದು. ಈ ಸುಖಕ್ಕೆ ಮಕ್ಕಳು ಬೇಕೆಬೇಕಾ ?

ಚಲನೆಯಿಲ್ಲದೆ ಗೊಂಬೆಯಂತೆ ಕುಳಿತ ಗಿರಿಜಮ್ಮನನ್ನು ಚಂದ್ರನಾಥ ಕೇಳಿದ. "ಅಮ್ಮ ನೀವು ಹಿರಿಯರು, ಕಷ್ಟ-ಸುಖ ಕಂಡವರು. ನೀವು ಸರೋಜಳಿಗೆ ನನ್ನ ಪರವಾಗಿ ಒಂದೆರಡು ಮಾತು ಹೇಳ್ತೀರಾ. ಒಂದಾದರೂ ನಮ್ಮ ಮಗು ಬೇಕಲ್ವಾ ?"

ಏನು ಹೇಳಲೂ ತೋಚದೆ ಸುಮ್ಮನೆ ತಲೆಯಾಡಿಸಿದಳು ಗಿರಿಜಮ್ಮ. ಸಣ್ಣಗೆ ಮಗು ಅತ್ತ ದನಿ ಕೇಳಿತು. ಬೆಚ್ಚಿದ ಚಂದ್ರನಾಥ ತಟ್ಟನೆ ಕುರ್ಚಿ ಬಿಟ್ಟೆದ್ದ. ಧಾವಿಸಿ ಒಳಗೆ ಹೋಗುತ್ತಿದ್ದ ಗಿರಿಜಮ್ಮ ಹೊರಳಿ ನೋಡಿ ನಗುತ್ತ ಹೇಳಿದಳು "ತಾಯಿ ಇಲ್ಲದ ಕೂಸು. ನಮ್ಮ ಕೆಲಸದಾಕಿ ಮೊಮ್ಮಗಳು ಜಯಾನ್ನ ಇಲ್ಲೇ ಇಟಕೊಂಡೀವಿ." ಮಗುವನ್ನೆತ್ತಿಕೊಂಡು ಗಿರಿಜಮ್ಮ ಹೊರಗೆ ಬಂದಾಗ ಚಂದ್ರನಾಥ ಹೊರಟುಹೋಗಿದ್ದ. ಟೇಬಲ್ ಮೇಲೆ ಅವನು ಬಿಟ್ಟು ಹೋದ ಪುಸ್ತಕಗಳು ಅಣಕಿಸುತ್ತಿದ್ದವು. ಕಿರುನಗೆಯೊಂದಿಗೆ ಅವುಗಳನ್ನೆತ್ತಿಕೊಂಡು ಗಿರಿಜಮ್ಮ ಸರೋಜಳ ಬೆಡ್‌ರೂಮಿನಲ್ಲಿಡಲು ಬಂದಾಗ...

ನಿಲುವುಗನ್ನಡಿ ಇದ್ದ ಕರಿಮರದ ದೊಡ್ಡ ಮಂಚ, ತುಪ್ಪಳದಂಥ ಸುಪ್ಪತ್ತಿಗೆ, ರೇಶಿಮೆಯ ಹೊದಿಕೆ, ಮತ್ತೇರಿಸುವ ಮಲ್ಲಿಗೆಯ ಕಂಪು, ಸುಗಂಧಿತ ವಾತಾವರಣ, ಬಾದಾಮಿ ಹಾಲು, ಸಿಹಿ ತಿಂಡಿ, ಹಣ್ಣುಗಳು, ದಿನವೂ ಪ್ರಥಮ ರಾತ್ರಿಯೇ ಅವನಿಗೆ. ಮಕ್ಕಳಿಗಾರಿಗೂ ಕೋಣೆಯಲ್ಲಿ

ಪ್ರವೇಶವಿರಲಿಲ್ಲ, ರಸಿಕ ಶಿಖಾಮಣಿ ಸಾವಿರಾರು ರೂಪಾಯಿ ಚೆಲ್ಲಲ್ಲು ಸದಾ ಸಿದ್ಧ. ದಿನದ ಕೆಲಸಗಳನ್ನೆಲ್ಲ ಮುಗಿಸಿ ಮಲಗಲು ಹೋದಾಗ ಹೊಸ ತೊಂದು ಲೋಕವೇ ತೆರೆದುಕೊಳ್ಳುತ್ತಿತ್ತು. ಬಾಹು ಬಂಧನ, ಚುಂಬನ ಗಳಲ್ಲಿ ಮೈಮರೆತೇಹೋಗುತ್ತಿತ್ತು. ಎಂದಾದರೊಮ್ಮೆ ಎಚ್ಚರವಾಗಿ ಪ್ರತಿಭಟಿಸಿದರೆ, ತಿರಸ್ಕರಿಸಿದರೆ ಮೈ ನುಗ್ಗಾಗಿಹೋಗುತ್ತಿತ್ತು ಹೊಡೆತ ಗಳಿಂದ. ಆ ಸುಖಕ್ಕಾಗಿಯೇ ಅಲ್ಲಿ ಉಳಿದಿದ್ದನೇ ?– ನಾಚಿಕೆಯಿಂದ ಗಿರಿಜಮ್ಮ ಮಂಚದ ಮೇಲೆ ಕುಕ್ಕರಿಸಿದಳು. ಕಟ್ಟಿಗೆಯ ಚಿಕ್ಕ ಮಂಚ, ಒಣ ಹಾಸಿಗೆ, ಭಣಭಣವೆನ್ನುವ ಕೋಣೆ ಬುಕ್-ಶೆಲ್ಫ. ಟೇಬಲ್ ಲ್ಯಾಂಪ್, ರಾತ್ರಿ ಬಹಳ ಹೊತ್ತಿನವರೆಗೆ ಆ ದೀಪ ಉರಿಯುತ್ತಿತ್ತು. ಸರೋಜ ನಿದ್ದೆ ಇಲ್ಲದೆ ಹೊರಳಾಡುತ್ತಿರಬಹುದೆ ? ಚಿಕ್ಕವಳು, ಅವಳಿಗೇನು ಬಯಕೆ ಇರುವ ದಿಲ್ಲವೇ ? ಆದರೂ ಅದ್ಭುತ ಹುಡುಗಿ ! "ನಾನು ೭–೮ ವರ್ಷ ಸಂಸಾರ ಸಾಕಷ್ಟು ಅನುಭೋಗಿಸೇನಿ. ಈಗ ನನಗೇನೂ ಅದರೊಳಗ ಆಸಕ್ತಿ ಉಳಿದಿಲ್ಲಾ" ಎಂದು ಸರೋಜ ಮಾತಿನ ಮಧ್ಯೆ ಒಮ್ಮೆ ಹೇಳಿದಾಗ ಗಿರಿಜಮ್ಮನ ಮನದ ಮೂಲೆಯಲ್ಲೊಂದು ಆಸೆ ಮೊಳೆತಿತ್ತು. ಕತ್ತಲು ಕವಿಯುತ್ತಿದ್ದ ಮನೆಯಲ್ಲಿ ಎದ್ದು ದೀಪ ಹಾಕಿದಳು ಗಿರಿಜಮ್ಮ.

ಧಡ್ ಎನ್ನುವ ಸಪ್ಪಳ ಕೇಳಿ ಓಡಿ ಬಂದಳು ಸರೋಜ. ಗಿರಿಜಮ್ಮ ಅಡಿಗೆ ಮನೆಯಲ್ಲಿ ಪ್ರಜ್ಞೆತಪ್ಪಿ ಬಿದ್ದಿದ್ದಳು. ಕೂಡಲೇ ಡಾಕ್ಟರ್ ಬಂದು ನೋಡಿದರು. ಲೋ ಬಿ.ಪಿ. ಇತ್ತು. ಸಂಪೂರ್ಣ ವಿಶ್ರಾಂತಿ ಬೇಕೆಂದರು. ಸರೋಜ ರಜೆ ಹಾಕಿದಳು. ಪಾರ್ವತಿಯ ಸಹಾಯದಿಂದ ಗಿರಿಜಮ್ಮ ಬೇಗ ಚೇತರಿಸಿಕೊಂಡರೂ ನಿಶ್ಶಕ್ತಿ ಇತ್ತು. ಅವರೊಬ್ಬರನ್ನೇ ಬಿಟ್ಟುಹೋಗಲು ಸರೋಜಳಿಗೂ ಭಯ. ಕಣ್ಣು ಮುಚ್ಚಿ ಮುದ್ದೆಯಾಗಿ ಮಲಗಿದ ದೊಡ್ಡವ್ವ ನನ್ನು ನೋಡಿ ಹತ್ತಿರ ಬಂದು ಕುಳಿತು ಹಣೆಯ ಮೇಲೆ ಕೈ ಇಟ್ಟು ಕೇಳಿದಳು.

"ದೊಡ್ಡವ್ವಾ, ನಿನಗ ಕೆಲಸ ಹೆಚ್ಚಾಗೇದ. ಆರಾಮನೂ ಇಲ್ಲ. ವಿಶ್ರಾಂತಿ ಬೇಕು. ಅದಕ್ಕ ಜಯಾನ್ನ ಕಳಿಸಿಬಿಡೂಣಂತ ವಿಚಾರ ಮಾಡೇನಿ. ಪಾರ್ವತಿಗೆ ರೊಕ್ಕದ ಸಹಾಯ ಮಾಡಿದ್ರಾತು."

ದೊಡ್ಡವ್ವನಿಂದ ಮಾತು ಬರಲಿಲ್ಲ. ಬದಲು ಮುಚ್ಚಿದ ಕಣ್ಣ ತುದಿಯಲ್ಲಿ ನೀರು ಇಳಿಯಿತು. ಸರೋಜ ಕಸಿವಿಸಿಗೊಂಡಳು. "ನಿನಗ ಮನಸ್ಸ ಇಲ್ಲದಿದ್ದರ ಬ್ಯಾಡಾ ದೊಡ್ಡವ್ವಾ."

"ಸರೂ, ನನ್ನ ದಿಂಬಿನ ಕೆಳಗ ಏನದ ನೋಡು."

"ಏನಿದು ದೊಡ್ಡವ್ವಾ" ಮನೆ ಲೆಕ್ಕದ ನೋಟ್‌ಬುಕ್ ತೆಗೆದಿದ್ದಳು.

"ಏನೇನೋ ಮನಸ್ಸಿಗೆ ಬಂದದ್ದೆಲ್ಲಾ ಗೀಚೇನಿ. ಒಂದ ಮನ್ಯಾಗ ಅದೀವಿ ಅಂದಮ್ಯಾಲೆ ಗುರುತು ಇಲ್ಲದವರ್‍ಹಾಂಗ ಇರೂದು ಬ್ಯಾಡ ಸರೂ. ಅದನ್ನು ನೀ ಓದಿನೋಡು." ಆಯಾಸಗೊಂಡವಳಂತೆ ಮತ್ತೆ ಕಣ್ಣು ಮುಚ್ಚಿದಳು ಗಿರಿಜಮ್ಮ.

ಮೊದಲ ಪುಟ ತೆರೆದಳು. ದೊಡ್ಡಪ್ಪನ ಕೈ ಬರಹ ನೋಡಿ ರೊಮಾಂಚನಗೊಂಡಳು ಸರೋಜ.

ಈ ಜಗತ್ತಿನಲ್ಲಿ ಮನುಷ್ಯರೇ ಹುಟ್ಟಿರದಿದ್ದರೆ ಏನಾಗುತ್ತಿತ್ತು. ಇದಕ್ಕೆ ಅಸ್ತಿತ್ವವೇ ಇರುತ್ತಿರಲಿಲ್ಲ. ಗಂಡು, ಹೆಣ್ಣು, ದಾಂಪತ್ಯ, ಮಕ್ಕಳು– ವಂಶ, ಆಸ್ತಿ– ಮನೆತನ, ಪ್ರೀತಿ-ದ್ವೇಷ, ಸಿಟ್ಟು ಮೋಹ-ಏನೂ ಇಲ್ಲದೆ ಬರೀ ಕಲ್ಲು ಮಣ್ಣುಗಳಿಂದ, ನೀರು, ನದಿ, ಸಮುದ್ರ, ಪರ್ವತಗಳಿಂದ ಕೂಡಿದ ಒಂದು ಗೋಲವಾಗಿರುತ್ತಿತ್ತು. ಸ್ತಬ್ಧ, ನಿಶ್ಯಬ್ದ ನಿರ್ಜೀವ, ಶೂನ್ಯವಾಗಿರುತ್ತಿತ್ತು. ಅಯ್ಯೋ ನನ್ನ ಹುಚ್ಚುತನವೇ, ಮನುಷ್ಯರೇ ಹುಟ್ಟಿರದಿದ್ದರೆ ಈ ಎಲ್ಲ ಶಬ್ದಗಳಾದರೂ ಎಲ್ಲಿರುತ್ತಿದ್ದವು. ಸಾವಿರಾರು ವರ್ಷಗಳಿಂದ ಮನುಷ್ಯರ ಹುಟ್ಟು ಸಾವಿನ ನಿರಂತರ ಚಕ್ರ ಚಲಿಸುತ್ತಲೇ ಇದೆ. ದಿನದಿನಕ್ಕೆ ಜನನ ಸಂಖ್ಯೆ ಹೆಚ್ಚಾಗಿ ಈಗಂತೂ ಕೋಟಿಗಟ್ಟಲೆ ಜೀವಿಗಳಿದ್ದಾರೆ. ಅಷ್ಟೊಂದು ಜನ ಹುಟ್ಟಿ ಏನು ಮಾಡುತ್ತಾರೆ ? ಇದೊಳ್ಳೆ ಪ್ರಶ್ನೆ. ಹುಟ್ಟುವದಂತೂ ಅವರ ಕೈಯಲ್ಲಿಲ್ಲ. ಹುಟ್ಟಿದ ಮೇಲೆ ಸಾವಿಗೆ ಹೆದರುತ್ತ ಬದುಕುವುದೊಂದೇ ಅವರಿಂದಾಗುವ ಕೆಲಸ. ಎಲ್ಲರ ಹಾಗೆ ನಾನೂ ಹುಟ್ಟಿದೆ. ಹೆಣ್ಣಾಗಿಯೇ ಹುಟ್ಟಬೇಕೆಂದು ನನಗೇನೂ ಆಸೆ ಇರಲಿಲ್ಲ. ಆದರೆ ಹುಟ್ಟಿದ ಮೇಲೆ ಯಾಕಾದರೂ ಹೆಣ್ಣಾಗಿ ಹುಟ್ಟಿದೆ ಎಂದು ದುಃಖಪಟ್ಟದ್ದಂತೂ ಸಾವಿರ ಸಲ.

ಹೆಣ್ಣಾದರೂ ನನಗೂ ಮನಸ್ಸಿದೆ, ಭಾವನೆಗಳಿವೆ, ವಿಚಾರಗಳಿವೆ, ವ್ಯಕ್ತಿತ್ವವಿದೆ ಎಂದುಕೊಂಡಿದ್ದೆ. ಈ ಕುತ್ತಿಗೆ ಹಿಚುಕಲು ಕಬ್ಬಿಣದ ಕೈಗಳ ವ್ಯವಸ್ಥೆಯೊಂದಿದೆ ಎಂದು ಗೊತ್ತಿರಲಿಲ್ಲ.

ಹದಿವಯಸ್ಸಿಗೆ ಬಂದಾಗ ಹೊಳೆಯುವ ನಕ್ಷತ್ರಗಳನ್ನು ಮುಡಿಯಲ್ಲಿಟ್ಟುಕೊಂಡು ಕಾಮನಬಿಲ್ಲಿನ ಬಣ್ಣದ ರೆಕ್ಕೆಗಳನ್ನು ಕಟ್ಟಿಕೊಂಡು ಆಕಾಶದಲ್ಲೆಲ್ಲಾ ಅಪ್ಸರೆಯಂತೆ ಹಾರಾಡುತ್ತಿದ್ದೆ. ಕಾಲೇಜಿಗೆ ಹೋಗುವಾಗ ಏನೇನೋ ಆಸೆಗಳನ್ನಿಟ್ಟುಕೊಂಡಿದ್ದೆ. ನಮಗೆ ಇಂಗ್ಲೀಷ್ ಹೇಳುತ್ತಿದ್ದ ಪ್ರೊ. ರಾಮಮೂರ್ತಿ ತುಂಬ ಓದಿಕೊಂಡವರು, ಸ್ಕಾಲರ್. ಚೆನ್ನಾಗಿ ಪಾಠ ಹೇಳುತ್ತಿದ್ದರು. ಅವರ ಪ್ರಭಾವ ವಿದ್ಯಾರ್ಥಿಗಳ ಮೇಲೆ-ನನ್ನನ್ನೂ ಹಿಡಿದು- ಬಹಳವಾಗಿತ್ತು. ಜ್ಞಾನ ಹಿಡಿದುಕೊಳ್ಳಲು ಬಹಳಷ್ಟು ಓದಬೇಕೆನ್ನುವ ಹುಚ್ಚು ಹಚ್ಚಿಕೊಂಡಿದ್ದೆ. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು, ಸತ್ಯವಂತ, ಪ್ರಾಮಾಣಿಕ, ನ್ಯಾಯನಿಷ್ಠರಿಯಾಗಿರಬೇಕೆನ್ನುವ ಆದರ್ಶವನ್ನಿಟ್ಟುಕೊಂಡಿದ್ದೆ. ಈ ಗುಣಗಳೆಲ್ಲ ಕೇವಲ ಗಂಡಿನ ಸೊತ್ತೇನೂ ಅಲ್ಲವಲ್ಲ. ಕನಸಿನ ಲೋಕದಲ್ಲೇ ವಿಹರಿಸುತ್ತಿದ್ದ ನನಗೆ ವಾಸ್ತವದ ಅರಿವಿರಲಿಲ್ಲ. ಸೃಷ್ಟಿ ಸೌಂದರ್ಯವನ್ನು ವೀಕ್ಷಿಸುತ್ತಾ ಆನಂದದಿಂದ ಮೈಮರೆತು ಅಡ್ಡಾಡುತ್ತಿದ್ದಾಗ ಹೋಗಿ ಹಾಳು ಬಾವಿಯಲ್ಲಿ ದುಡುಮ್ಮನೇ ಬಿದ್ದಂತಾಗಿತ್ತು ನನ್ನ ಪರಿಸ್ಥಿತಿ.

ಅಪ್ಪ ನನ್ನ ಕೊರಳಿಗೊಂದು ಗುದ್ದಿ ಕಟ್ಟಿಕೊಂಡ ವಾಡೆಗೆ ಅಟ್ಟಿದಂತೆ ಗಂಡನ ಮನೆಗೆ ಅಟ್ಟಿಬಿಟ್ಟರು. ನನ್ನ ಗಂಡ, ದುಷ್ಟ, ಭ್ರಷ್ಟ, ಅಧಿಕಾರಿ. ಹಣ ಎಂದರೆ ಬಾಯಿ ಬಿಡುವವನು. ಎಂಥ ಕೆಲಸಕ್ಕೂ ಹಿಂಜರಿಯುವವನಲ್ಲ. ಅವನ ಇಚ್ಛೆಯಂತೆ ಲಕ್ಷ್ಮಿ ಕಾಲು ಮುರಿದುಕೊಂಡು ನಮ್ಮ ಮನೆಯಲ್ಲಿ ಬಿದ್ದಿದ್ದಳು. ಇಂಥ ಪಾಪಿಯ ಮನೆಯಲ್ಲಿ ನೆಲೆಯಾಗುವ ಅವಳನ್ನು ದೇವಿ ಎಂದು ಯಾಕೆ ಕರೆಯಬೇಕು ? ಅವಳು ವೇಶ್ಯೆಯೇ ಎಂದು ನನ್ನ ಸಂತಾಪ. ಆದರೂ ಗಂಡನ ಹೊಡೆತ ತಾಳಲಾರದೆ ಲಕ್ಷ್ಮಿಪೂಜೆ ಮಾಡುತ್ತಿದ್ದೆ. ಪೂಜಾ ಗೃಹದಲ್ಲಿಯ ಬೆಳ್ಳಿಯ ಪಾತ್ರೆಗಳನ್ನು ಒಯ್ದು ತಿಪ್ಪೆಗೆ ಎಸೆಯಲೇ ಎನ್ನುವಷ್ಟು ಸಿಟ್ಟು ನನಗೆ. ನನ್ನ ಮೆಲುಮಾತು, ಹಿತವಚನ, ಸಿಟ್ಟು, ಸೆಡವು,

ಅಳು ಉಪವಾಸ ಒಂದೂ ಅವನನ್ನು ಸರಿದಾರಿಗೆ ತರಲಿಲ್ಲ. ಬದುಕಿನಲ್ಲಿ ನಾನು ಸೋತು ಹೋಗಿದ್ದೆ. ಇಲ್ಲಿ ಸೋತರೂ ಮಕ್ಕಳನ್ನಾದರೂ ನನ್ನ ಇಚ್ಛೆಯಂತೆ ಬೆಳೆಸುತ್ತೇನೆ ಎಂದು ಆಸೆ ಇಟ್ಟುಕೊಂಡಿದ್ದೆ. ಅವರೂ ತಂದೆಯ ದಾರಿಯನ್ನೇ ಹಿಡಿದರು. ಈಗ ಲೋಕವೆಲ್ಲ ಹೇಗೆ ನಡೆಯುತ್ತದೆಯೋ ಹಾಗೆಯೇ ಇರಬೇಕು ನಾವೂ ಎಂದು ನನಗೇ ಬುದ್ಧಿ ಹೇಳತೊಡಗಿದರು. ಸ್ವಲ್ಪ ಸ್ವಲ್ಪವಾಗಿ ನನ್ನ ಕೈಯಿಂದ ಜಾರುತ್ತ ಜಾರುತ್ತ ಹೋಗಿ ನನ್ನಿಂದ ದೂರವಾಗಿಬಿಟ್ಟರು. ನನ್ನ ಯಾವ ಮಾತೂ ನಾಟದಷ್ಟು ದಪ್ಪ ಚರ್ಮದವರಾದರು. ಮನೆಯಲ್ಲಿಯ ಇಂಥ ಹತ್ತು ಜನ ಜಾಣರೆದುರು ನಾನೊಬ್ಬಳೇ ಹುಚ್ಚಿಯಾದೆ. ಇದು ನನ್ನ ಬಾಳು ಅಲ್ಲ ಅನ್ನುತ್ತ ಅಲ್ಲಿಯೇ ಬದುಕಿದೆ. ದಿನವೂ ವಿಷವನ್ನುಂಡೆ. ಸಂಕಟಪಡುತ್ತ ನಗುತ್ತಿದ್ದೆ. ತವರಿಗೆ ಹೋದಾಗ ಹೇಳಿ ಮನಸ್ಸು ಹಗುರ ಮಾಡಿಕೊಳ್ಳಬೇಕೆಂದರೆ ಅಲ್ಲಿ ಕೇಳುವವರೇ ಇರಲಿಲ್ಲ ಅಪ್ಪ, ಅವ್ವ, ಅಣ್ಣ, ತಂಗಿಯರು ಎಲ್ಲರಿಗೂ ಇವಳಿಗೇನು ಕಡಿಮೆ ಎನ್ನುವ ಭಾವನೆ. ಆಡಿಯೂ ತೋರಿಸುತ್ತಿದ್ದರು. ಆ ಮರುಭೂಮಿಯಲ್ಲಿಯೂ ನನಗೊಂದು ಒಯಾಸಿಸ್ ಇತ್ತು. ನಮ್ಮ ಅಪ್ಪನ ಸೋದರತ್ತೆ ಶೆಂಬವ್ವ. ಅವಳು ನನ್ನ ದುಃಖವನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಳು. ನಾನು ಅಳುತ್ತಿದ್ದಾಗ ಅಂತಃಕರಣದ ಸೆಲೆ ಹರಿಯುತ್ತಿರುವಂತೆ ನನ್ನ ಬೆನ್ನ ಮೇಲೆ ಕೈ ಆಡಿಸುತ್ತ–

"ಗಿರಿಜಾs, ನೀನು ಥೇಟ ನಮ್ಮಪ್ಪನ ಹಾಂಗ ಅದಿ. ನಿನ್ನ ಮುತ್ತಜ್ಜನೂ ಹಿಂಗs ಅಂತಿದ್ದಾ. ಖರೀತನಕ ಜೀಂವಾ ಕೊಡಾಂವ. ಕುತ್ತಿಗಿತನಾ ಬಂದರೂ ಕೊಟ್ಟ ಮಾತಿಗೆ ತಪ್ಪಾಂವ ಅಲ್ಲ. ಒಂದು ದುಡ್ಡು ಬ್ಯಾರೇಯವರದು ತಿಂದಾಂವ ಅಲ್ಲಾ. ರೊಕ್ಕಾ ಗಳಿಸೂದು ಮುಖ್ಯ ಅಲ್ಲಾ. ಒಬ್ಬ ಸೂಳೀನೂ ಗಳಸ್ತಾಳ. ಮನುಷ್ಯಾ ದೇವರಾಗದಿದ್ದರೂ ಮನುಷ್ಯಾನಂಗರೆ ಬದಕಬೇಕು ಅಂತಿದ್ದಾ. ಅಂವಾ ಗಂಡಸು. ಎಷ್ಟು ಕಷ್ಟ ಬಂದರೂ ತನಗೆ ಸರಿ ಅನಿಸಿದಾಂಗ ನಡಕೊಂಡ. ಆದರ ಬಾಳಾ, ನೀನು ಹೆಣ್ಣು. ಇದು ನಿನ್ನ ಪರೀಕ್ಷಾ ಅಂತ ತಿಳಕೋ. ಒಂದಿಲ್ಲ ಒಂದಿನಾ ನೀ ಇದರಿಂದ ಪಾರಾಗ್ತಿ" ಅಂತಿದ್ದಳು. ಆ ಮೇಲೆ ಬಿಟ್ಟುಬಿಟ್ಟೆ. ಎಲ್ಲರೂ ಗಿರಿಜವ್ವಗ ರೊಕ್ಕದ ಸೊಕ್ಕು ಅಂದರು.

ರಿಟೈರ ಆದ ಗಂಡನೊಡನೆ ನಾನು ಕಾಶೀಯಾತ್ರೆಗೆ ಹೊರಟಾಗ ಎಲ್ಲರೂ ನನ್ನ ದೈವ ಕಂಡು ಕರುಬಿದರು. ಆದರೆ ನಾನು ಮಾತ್ರ ಮನಸಾ

ಹೋಗಿರಲಿಲ್ಲ. ದನ ಎಳೆದಂತೆ ನನ್ನನ್ನು ಎಳೆದುಕೊಂಡು ಹೋಗಿದ್ದ. ಕಾಶಿಯಲ್ಲಿ ಆ ಗಂಗೆಯನ್ನು ನೋಡಿ ನನಗೆ ಅಳು ಬಂದುಬಿಟ್ಟಿತು. ಆ ಕೊಳಕು ನೀರಿನಲ್ಲಿ ಎಷ್ಟು ಜನ ಪಾಪಿಗಳು ಮುಳುಗಿ ಎದ್ದಿದ್ದಾರೋ ಆ ನೀರನ್ನು ಮುಟ್ಟಲೂ ಹೇಸಿಗೆಯಾಯಿತು. ಹಿಮಗಿರಿಯಿಂದ ಸ್ಫಟಿಕ ಶಿಲಾರಸದಂತೆ, ಬಿಳಿಯ ಮುತ್ತಿನ ರಾಶಿಯಂತೆ, ಸ್ವಚ್ಛವಾಗಿ, ತಿಳಿಯಾಗಿ ಹರಿಯುವ ಗಂಗೆಯನ್ನು ಬೊಗಸೆಯಲ್ಲಿ ಹಿಡಿದು ಕುಡಿಯಬೇಕೆನ್ನುವ ನನ್ನ ರೆಪ್ಪೆಯೊಳಗಿನ ಕನಸು ಕರಗಿಹೋಗಿತ್ತು. ಕಣ್ಣೀರು ಕುಡಿಯುತ್ತಿದ್ದೆ. ಪಾಪ! ಗಂಗೆಗೂ ನನ್ನದೇ ಸ್ಥಿತಿ. ಅವಳಿಗೆ ಇಚ್ಛೆ ಇರಲಿ, ಇಲ್ಲದಿರಲಿ ದಿನಾಲು ಲಕ್ಷಗಟ್ಟಲೆ ಜನ ಮುಳುಗಿ ಎದ್ದು ಅವಳ ಬದುಕನ್ನು ನರಕವನ್ನಾಗಿ ಮಾಡುತ್ತಿದ್ದಾರೆ. ಒಂದು ವೇಳೆ ಅವಳಿಗೂ ಜೀವವಿದ್ದಿದ್ದರೆ– ಯೋಚಿಸುತ್ತ ನಿಂತಿದ್ದೆ. ಒಬ್ಬ ಪೂಜಾರಿಯೊಡನೆ ನನ್ನ ಗಂಡ ಬಂದ. ನಾನು ಕೊಸರಾಡಿದರೂ ಬಿಡದೆ ಕೈ ಹಿಡಿದು ಎಳೆದುಕೊಂಡೊಯ್ದು ನನ್ನೊಡನೆ ಗಂಗೆಯಲ್ಲಿ ಇಳಿದ. ನನ್ನ ಬಿಚ್ಚಿದ ಕೂದಲನ್ನು ಎಳೆದು ಜಗ್ಗಿ ನಾನು ಮುಳುಗುವಂತೆ ಮಾಡಿದ. ಅವನ ಕುತ್ತಿಗೆ ಹಿಡಿದು ಅಲ್ಲಿಯೇ ಮುಳುಗಿಸಿ ಸಾಯಿಸಿಬಿಡಲೇ ಎನ್ನುವಷ್ಟು ಸಿಟ್ಟು ಬಂದಿತ್ತು ನನಗೆ. ಆ ಮನುಷ್ಯ ಹೂವು, ಮಂತ್ರಾಕ್ಷತೆ ಎರಚಿ, ಮಂತ್ರ ಹೇಳಿ ದಕ್ಷಿಣೆ ವಸೂಲು ಮಾಡಿಕೊಂಡು ಹೋದ. ನನ್ನ ಶರೀರ ಮೈಲಿಗೆಯಾದಂತೆ ಮುದುಡಿಕೊಂಡಿತು. ಕಾಶಿಯಲ್ಲಿ ಇದ್ದಾಗಲೇ ಗಂಡನಿಗೆ ಜ್ವರ ಬರಲು ಸುರುವಾಗಿತ್ತು. ಅವನು ಮಾಡಿದ ಪಾಪದ ಜೊತೆಗೆ ಗಂಗೆಯಲ್ಲಿಯ ಕೊಳಕೂ ಸೇರಿಕೊಂಡು ಅವನ ಜೀವ ಬಲಿ ತೆಗೆದುಕೊಳ್ಳುವವರೆಗೂ ಬಿಡಲಿಲ್ಲ. ಮುಂದೆ ನನ್ನ ಜೀವವಿಧಾನ ಬೇರೆಯಾದೀತು ಎಂದು ಭಾವಿಸಿದ್ದೆ. ಆದರೆ ಮನು ಮಹರ್ಷಿಯ ಮರಿಮೊಮ್ಮಕ್ಕಳಾದ ನನ್ನ ಮೂವರು ಮಕ್ಕಳು ನನ್ನನ್ನು ಅತ್ತಿತ್ತ ಬಿಡದೆ ಕಣ್ಣಲ್ಲಿಟ್ಟುಕೊಂಡು ಕಾಪಾಡತೊಡಗಿದರು. ಅದೇ ನನಗೆ ನರಕವಾಯಿತು ಆಯುಷ್ಯದಲ್ಲಿ ಉಳಿದ ದಿನಗಳನ್ನಾದರೂ ನನ್ನಿಚ್ಛೆಯಂತೆ ಬದುಕಬೇಕೆನ್ನುವ ಇಚ್ಛೆ ಪ್ರಬಲವಾಗತೊಡಗಿತು ಮನಸ್ಸು ಪ್ರಕ್ಷುಬ್ಧವಾಗತೊಡಗಿತು......

ನಾನು ಪೃಥ್ವಿ, ನಾನು ಹೆಣ್ಣು. ಭೂಮಿ, ನೀರು, ಗಾಳಿ, ಬೆಂಕಿ, ಆಕಾಶ ಈ ಎಲ್ಲವೂ ನನ್ನಲ್ಲಿವೆ. ನನ್ನಲ್ಲಿ ಜೀವ ಹುಟ್ಟುತ್ತದೆ, ಆದರೆ ಪೃಥ್ವಿ

ಮುನಿದಾಗ ಜಗತ್ತನ್ನು ವಿನಾಶಪಡಿಸುವಂತೆ ಜೀವವನ್ನು ಕೊಲ್ಲುವದು ನನ್ನಿಂದ ಸಾಧ್ಯವಾಗುವುದಿಲ್ಲ. ಆ ಶಕ್ತಿಯೂ ನನ್ನಲ್ಲೇ ಇದ್ದರೆ ಎಷ್ಟು ಚೆನ್ನಾಗಿತ್ತು. ನನ್ನ ಮನಸ್ಸು ಕುದಿಯುತ್ತದೆ. ಹೊಟ್ಟೆಯಲ್ಲಿ ಬೆಂಕಿ ಸುಡುತ್ತದೆ. ಆದರೆ ಜ್ವಾಲಾಮುಖಿಯಂತೆ ಸ್ಫೋಟಗೊಳ್ಳುವುದಿಲ್ಲ......

"ಸಾಕು, ನಾ ಇನ್ನ ಓದೂದಿಲ್ಲ. ಸಾಕು" ಮಂಜಾಗುತ್ತಿದ್ದ ಕಣ್ಣುಗಳನ್ನು ಒರೆಸಿಕೊಳ್ಳುತ್ತ ಸರೋಜ ದೊಡ್ಡವ್ವನತ್ತ ನೋಡಿದಳು. ಗಿರಿಜವ್ವನ ಕಣ್ಣುಗಳಲ್ಲೀಗ ಬೆಳಕಿತ್ತು. 'ಕಡೀ ಪ್ಯಾರಾ ನಾನs ಹೇಳತೀನಿ ಕೇಳಿಲ್ಲೆ." ಹಾಸಿಗೆಯ ಕೆಳಗಿನಿಂದ ಬಂಗಾರದ ನಾಲ್ಕು ಬಳೆ ತೆಗೆದುಕೊಟ್ಟು ಹೇಳಿದಳು.

"ನಿಮ್ಮಜ್ಜ ನನ್ನ ಮದುವೀಯೊಳಗ ಕೊಟ್ಟದ್ದು ಈ ಬಳಿ. ಆ ಮನೆಯಿಂದ ಬರುವಾಗ ಇವಿಷ್ಟs ತಂದೆ. ಇದರ ಮ್ಯಾಲೆ ನಿನಗೂ ಹಕ್ಕು ಅದ. ಜಯಾ. ಇಲ್ಲೇ ಇರಲಿ. ಹೆಣ್ಣು ಹೆರದಿದ್ದರೂ ತಾಯಿ ಆಗ್ತಾಳ. ನೀನs ಆಕೀ ತಾಯಿ. ಜ್ವಾಲಾಮುಖಿ ಸ್ಫೋಟಗೊಳ್ಳೂಹಾಂಗ ಆಕಿನ್ನ ಬೆಳಸೂಣು!"

ಮರಕ್ಕಾ ಒಂದೀಟ ಪಿರೀತಿ ಬೇಕ

ಹೆದ್ದಾರಿಯಿಂದ ಬಲಕ್ಕೆ ಹೊರಳಿ ಮಣ್ಣಿನ ತಗ್ಗು ದಿನ್ನೆಯ ದಾರಿಯಲ್ಲಿ ತುಸು ದೂರ ನಡೆದರೆ ಸಿಗುವುದೇ ಹೊನ್ನೂರು. ಜಮೀನು ಮುಳುಗಡೆ ಯಾದ ಮೇಲೆ ಕಟ್ಟಿದ ಹೊಸ ಹಳ್ಳಿಯದು. ಸಂಗನಗೌಡರ ಮಗ ಪ್ರಕಾಶ ಎಂ ಎ. ಕಲಿತವ. ಅವನಿಂದಾಗಿ ಹೊನ್ನೂರಿನಲ್ಲಿ ಒಂದು ಬಾಲವಾಡಿ ಪ್ರಾಥಮಿಕ ಶಾಲೆ, ಆರೋಗ್ಯ ಕೇಂದ್ರದ ಒಬ್ಬ ನರ್ಸ್, ಲಗುಮವ್ವನ ಗುಡಿ, ಈಶ್ವರ ದೇವಸ್ಥಾನ, ಕಲ್ಲಿನ ಗೋಡೆಯ ಕೆಂಪು-ಕರಿ ಹಂಚಿನ ಮನೆಗಳು, ಅಲ್ಲೊಂದು– ಇಲ್ಲೊಂದು ಅಂಟೆನಾಗಳು– ಇತ್ಯಾದಿ ಎಲ್ಲ ಇವೆ. ಜನರಿಗೆ ಅನುಕೂಲವಾಗುವಂತೆ ಕೊಳವೆ ಬಾವಿ, ವಿದ್ಯುತ್ ದೀಪಕ್ಕೂ ಓಡಾಡುತ್ತಿದ್ದ. ಚುನಾವಣೆ ಸಮೀಪಿಸುತ್ತಿದ್ದುದರಿಂದ ಕೆಲಸಗಳೂ ಬೇಗ ಆಗುತ್ತಿದ್ದವು. ಇಲ್ಲಿ, ಹೊನ್ನೂರಿನಲ್ಲಿ ಬಡವ–ಬಲ್ಲಿದರೆನ್ನದೆ ಎಲ್ಲರಿಗೂ ಮನೆ ಕಟ್ಟಲು ನಾಲ್ಕು ಗುಂಟೆ ಜಾಗ, ಉಳಲು ನಾಲ್ಕು ಎಕರೆ ಭೂಮಿ ಇದೆ. ಹಳ್ಳಿಯಲ್ಲಿ ಕಾಲಿಟ್ಟರೆ ಮೊದಲು ಸಿಗುವುದೇ ಸಮಗಾರ ಲಚ್ಚಣ್ಣನ ಮನೆ. ಪಕ್ಕದ್ದು ಸಿದ್ದಣ್ಣಂದು, ಎದುರಿನದು ವಿಠ್ಠಲರಾಯರದು. ಸಂಗನಗೌಡರು ಮತ್ತು ಸಾಬರು, ಈರಯ್ಯಸ್ವಾಮಿ, ಬ್ಯಾಡರ ಸತ್ಯಪ್ಪ, ಜಾಡರ ಶಿವಣ್ಣ, ಕುರುಬರ ಅಪ್ಪಯ್ಯ– ಹೀಗೇ ಪಟ್ಟಿ ಬೆಳೆಯುತ್ತದೆ. ಹೆಚ್ಚುಕಡಿಮೆ ಎಲ್ಲರ ಉದ್ಯೋಗ ಒಕ್ಕಲುತನ. ಪಡ ಭೂಮಿಯನ್ನು ಸಾಗುವಳಿ ಮಾಡುತ್ತ ಬದುಕುತ್ತಿದ್ದವರಿಗೆ ಮಾತು–ಕತೆ, ಕೊಡ–ಕೊಳ್ಳುವಿಕೆ, ಜಗಳ ಬಯ್ಗುಳ ಎಲ್ಲ ಸಹಜವಾದದ್ದೇ. ಅಂಥ ಒಂದು ದಿನ ಸಿದ್ದಣ್ಣನ ಹೆಂಡತಿ ಕಮಲವ್ವ ಲಚ್ಚಣ್ಣನ ಹೊಸ ಹೆಂಡತಿ ಚಂದ್ರವ್ವನನ್ನು ಕೇಳಿದಳು–

"ಮುದುಕಿ ಹ್ಯಾಂಗ ಅದಾಳಬೇ ?"

"ಕೌದೀ ವಳ್ಯಾಲೆ ಹೆಣಾ ಬಿದ್ದಾಂಗ ಬಿದ್ದಾಳ. ಉಸರ ಒಂದ ಆಡತೈತಿ."

"ಇನ್ನೇನ ಭಾಳ ದಿನಾ ಕಳಿಯಾಕಿಲ್ಲ. ನಾಕ ದಿನಾ ಆತು ನೆಳ್ಳೂ ದನೀನು ಕೇಳಿಲ್ಲ. ಅದಕ್ಕs ಕೇಳಿನ್ನಿ."

"ಟೊಂಕ ಮುರದರೂ ತಿಕ ಹೊಸೀತಿದ್ಲು. ಹಿತ್ತಲಕ ಹೋಗ್ತಿದ್ಲು. ನಾ ಬರೂಕಿಂತ ಮುಂಚೇಕ ಗಟ್ಟ್ಯಾಗಿ ಮಲಗಿಬಿಟ್ಟಾಳಲ್ಲ."

"ಚಂದ್ರವ್ವಾ, ನಿಮ್ಮಕ್ಕ ಚೆನ್ನವ್ವನ ಮ್ಯಾಲೆ ಲಚ್ಚಣ್ಣ ಜೀವಾ ಬಿಡತಿದ್ನಬೇ. ಆಕೀನೂ ಹಾಂಗಾs ಗಂಡನ್ನ, ಮಕ್ಕಳ್ನ, ಅತ್ತಿನ ಭಾಳ ಚೆಂದಾಗಿ ಜ್ವಾಪಾನಾ ಮಾಡವಳು. ಒಂದ ದಿನಾನು ಜಳಗ ಇಲ್ಲಾ, ಬಯ್ಗುಳ ಇಲ್ಲಾ, ಕುಲು ಕುಲು ನಕ್ಕೋಕೀತ ಇರುವಾಕಿ."

"ಹೌಂದ ಚಿಗವ್ವ, ಹಂತಾ ಅಕ್ಕ ಇಟ್ಟ ಲಗೂನ ಸಾಯ್ತಾಳ ಅಂತ ಯಾರ ತಿಳಿದಿದ್ರು. ನಮ್ಮಕ್ಕ ಕಳ್ಳಿನಾಕಿ. ಭಾಳ ಪ್ರೀತಿ ಇದ್ಲಬೇ ನನ್ನ ಮ್ಯಾಲೆ. ಮಾವ ಆಕಿಗೇನ ತಂದಕೊಟ್ಟರೂ ಊರಿಗೆ ಬಂದಾಗ ನನಗ ಒಂದೀಟ ಕೊಡೂವಾಕಿ."

"ನಮ್ಮ ಚಂದ್ರವ್ವ ಗಂಡ ಸತ್ತು, ಮಗಳ್ನ ಕರಕೊಂಡು ತವರುಮನೀ ಸೇರ್ಯಾಳ. ಅತ್ತಿಗೆದೇರು ಕಣ್ಣೀರು ಕೂಳು ಒಂದ ಮಾಡಸ್ತರ ಅಂತ ಚೆನ್ನವ್ವ ನನ್ನ ಮುಂದ ಮರಾ ಮರಾ ಮರಗತಿದ್ಲಬೇ. ನಿನಗ ಒಂದ ಜೋಡೀ ಹುಡುಕಿ ಉಡುಕಿ ಮಾಡಿ ಕೊಡಬೇಕ ಅಂತ ಚಿಂತೀ ಮಾಡತಿದ್ಲು. ಈಗ ನೋಡ ನಿನ್ನ ನಸೀಬು, ಆಕಿ ಸತ್ತು ಮಾವನ್ನ ನೀನು ಮಾಡಿಕೊಳ್ಳೂಹಾಂಗ ಆತು. ಯಾವಾಗ ಏನಾಗ್ತೈತೋಯಾಂಬಲ್ಲ."

"ಈ ಮದಿವೀ ಮಾಡದs ನನ್ನ ಟಕ ನನ್ನ ಬಿಟ್ಟಿದ್ದರ ಬೇಸಿತ್ತ ನೋಡ ಚಿಗವ್ವಾ" ಚಂದ್ರವ್ವ ಕಣ್ಣು ಒರೆಸಿಕೊಂಡಳು.

"ಯಾಕ ಚಂದ್ರವ್ವ, ಲಚ್ಚಣ್ಣನಂತಾ ಗಂಡ ಸಿಗಾಕ ಪುಣ್ಯಾ ಮಾಡಿರ ಬೇಕ. ಹೊಲದಾಗ ದುಡಿಯಾಂವಾ, ಉಣ್ಣಾಂವಾ. ಹ್ಯಾಂತ್ಗೆ ಮಕ್ಕಳಾ ಅಂತ ಹಚಿಕೊಳ್ಳಾಂವ, ಉಳದ ಗಣಸರಗತೇ ಏನ ಕುಡೀತಾನ, ಬಡೀತಾನ, ಬ್ಯಾರೆ ಹೆಣ್ಣಿಗೆ ಮಾಡ್ತಾನ. ಏನ ಕಡಿಮಿ ಆಗೇತಿ ನಿನಗ. ಗಂಡ ಸತ್ತ ಮುಂಡಿ ಅಂತ ಊರ ಗಣಸರ ಕಣ್ಣಿಗೆ ಬೀಳದ ಮದುವೀ ಮಾಡಿಕೊಂಡ ನೆಳ್ಳಾಗ ಅದೀ, ಯಾಕ ಅಳತೀ ?"

"ಹೊರಗಿನಿಂದ ನೋಡಾವರಿಗೆ ಎಲ್ಲಾ ಚಂದ, ನನ ಸುಕಾ ನಿಮಗೇನ ಗೊಂತ ಆಗತ್ತೈತಿ."

"ಹಾಂs ಆ ಮುದುಕಿ ಒಂದ ಐತಿ, ತೊಳದು ಬಳದು ಮಾಡಬೇಕಾಗ ತೈತಿ ಅಂತ ಬ್ಯಾಸರಾ ಮಾಡಿಕೊಂಡೀಯೇನ. ನೀ ಸಣ್ಣಾಕಿ. ತಿಳವಳಿಕಿ ಕಮ್ಮಿ. ನಮ ಜೀವಾ ಯಾವಾಗ ಹೋಗತ್ತೈತಿ ನಮಗ ಗೊಂತಿಲ್ಲ. ಮುಪ್ಪಾನ ಮುದಕರಾಗಿ ಸಗತೀ ಕಳಕೊಂಡ ಹಾಸಿಗೀ ಹಿಡದ ಬಿದ್ದರ ಏನ ಮಾಡ-ಬೇಕಬೇ. ಇದ ಯಾರಿಗೂ ತೆಪ್ಪಿದಲ್ಲ; ನಮಗೂ ಒಂದ ದಿನಾ ಹಿಂತಾದ ಬರೂದ ಅಂತ ತಿಳಿಕೊಂಡ ಇದ್ದವರ ಚಾಕರಿ ಮಾಡಬೇಕಬೇ. ಆ ಮಕ್ತುಂ ಸಾಬನ ಸೊಸಿ ಘಾತಿಮಾನ ನೋಡ, ಮದವಿ ಆಗಿ ಬಂದ ಸಂಗಾಟಲೆ ಗಂಡನ್ನ ಕರಕೊಂಡ ಬ್ಯಾರೆ ಆದ್ಲ. ಈರಯ್ಯಸ್ವಾಮೇರ ಅವ್ವ ಮೊನ್ನಿ ನನ ಮುಂದ ಅಳತಿತ್ತಬೇ. ತನ್ನ ಸೊಸಿ ನಾಯಿಗೆ ಕೂಳ ಹಾಕಿದ್ಹಾಂಗ ಮುಕ್ಕಾಟಿಲೆ ರೊಟ್ಟಿ ಎತ್ತಿ ಒಗೀತಾಳಂತ, ಹಿಂಗ ಮಾಡಿದರ ದೇವರು ಮೆಚ್ಚಾಕಿಲ್ಲ. ನೀ ಗುಣವಂತಿ ಅದೀ ಅಂತ ಹೇಳತೇನು."

"ಚಿಗವ್ವಾs ನಾ ದಗದಾ ಮಾಡಾಕ, ಮುದಕೀ ಚಾಕರಿ ಮಾಡಾಕ ಹಿಂದ ಮುಂದ ನೋಡಂಗಿಲ್ಲ. ನೀನs ನೋಡತೀಯಲ್ಲ, ಮುದುಕೀನ್ನ ಹ್ಯಾಂಗ ಜ್ವಾಪಾನಾ ಮಾಡತೀನಿ ಅಂತ. ಹೇಲು, ಉಚ್ಚೀ ಬಳೀತೀನಿ. ನೀರ ಹಾಕ್ತೀನಿ, ಸೀರೀ ಉಡಸ್ತೀನಿ, ಏಟ ಮಾಡಿದರೂ ದರಕಾರ ಇಲ್ಲಾ. ಮುದಕೀ ಬಯ್ಗುಳ ತೆಪ್ಪಾದಿಲ್ಲ. ಗಂಡಗ ದಯಾ ಮಾಯಾ ಇಲ್ಲಾ. ನಾ ಏನ ಮನಶ್ಯಾಳ ಅಲ್ಲೇನು ?" ಕಣ್ಣೀರು ಹರಿಯುಬಿಟ್ಟಳು ಚಂದ್ರವ್ವ.

"ಯಾಕೋ ಭಾಳ ತ್ರಾಸಾಸಿಕೊಂಡೀ. ಮೊನ್ನಿ ರಾತ್ರಿ ಹಿತ್ತಲಕ ಬಂದಿನ್ನಿ. ನೀ ಅಳೂ ದನಿ ಕೇಳಸ್ತಿತ್ತು. ಯಾಕ ಲಚ್ಚಣ್ಣ ಹೊಡದ್ನೇನ ?"

"ಹುಂ ಅವತ್ತs ಮುದುಕಿ ಸೀರ್ಯಾಗ ಎರಡಕ್ಕ ಮಾಡಿಕೊಂಡಿತ್ತs ಕೈ ಖಾಲಿ ಇದ್ದಿದ್ದಿಲ್ಲಾಂತ ಹಿತ್ಲದಾಗ ಕಲ್ಲ ಮ್ಯಾಲೆ ಚೆಲ್ಲಿದ್ದೆ. ದೀಪ ಹತ್ತಿದ ಮ್ಯಾಲೆ ತೊಳ್ಯಾಕ ಹತ್ತಿದೆ. ಎರಡೆರಡು ಕೊಡಾ ನೀರ ಹಾಕಿ ತೊಳೀಬೇಕ. ಗೊಮ್ಮಂತ ನಾರತಿತ್ತs ಆ ಹೊಲಸ ನಾತಿಗೆ ವಾಂತಿ ಬಂದ್ಹಾಂಗ ಆತು.

ಸಿಟ್ಟ್ಯಾ ಬಂತು. ಇನ್ನೂ ಏಸ ದಿನಾ ಈ ನಾತಾ ಕುಡಿಬೇಕೋ.' ಅಂದೆ. ಬಂದಾವನ ಬಗ್ಗಿಸಿ ದಬಾ ದಬಾ ಗುದ್ದಿದ ನೋಡ ನನ ಗಂಡ.

"ನಮ್ಮವ್ವ ಸಾಯಲಿ ಅಂತೀಯಾ? ಯಾವ ಬೋಸಡೀನೂ ನಮ್ಮವ್ವನ ಚಾಕರೀ ಮಾಡೂದ ಬ್ಯಾಡಾ, ನಾ ಎಲ್ಲಾ ಮಾಡಿಕೊಂತೀನಿ." ಅಂತ ಒದರಿ ಹೋಗಿ ಅವ್ವನ ಮಗ್ಗಲದಾಗ ಮಕ್ಕೊಂಡ ಉಣ್ಣದ. ಅಂದ ಯಾರೂ ಉಣಲಿಲ್ಲ. ಅವತ್ತಿಂದ ನನ್ನs ಸೂಸೀನ್ನ ಮುದುಕೀ ಹತ್ತರ ಹೋಗಾಕ ಕೊಟ್ಟಿಲ್ಲಬೇ. ಅಂತೂ ನನ ಗಂಡಾ ನನ ಮೈ ಮುಟ್ಟಿ ಹೊಡದ್ನಲ್ಲ ಅಂತ ಹಿಗ್ಗೂ ಆತು, ಅತ್ತೆ."

ಬಾಯಿ ತೆರೆದುಕೊಂಡೇ ಕುಳಿತಿದ್ದ ಕಮಲವ್ವ ಕೇಳಿದಳು. "ಏಸ ಏನs ಹುಡುಗೀ. ಏನ ಅಂತೀ. ಖಬರ ಐತೇನ ಮೈ ಮ್ಯಾಲೆ ? ಮದುವಿ ಆಗಿ ವರ್ಸ ಆದ್ರೂ ಲಚ್ಚಣ್ಣ ನಿನ್ನ ಮುಟ್ಟಿಲ್ಲs ?"

"ಸುಳ್ಳ ಹೇಳಿದರ ಬಾಯಾಗ ಹುಳಾ ಬಿದ್ದಾವ ಚಿಗವ್ವಾ. ನಾ ಈ ಮನೀಗಿ ಬಂದ ದಿನಾನ "ನನಗ ಈಗ ಮದುವಿ ಬ್ಯಾಡಾಗಿತ್ತು. ಅವ್ವನ ಜುಲುಮೀಗೆ ನಿನ್ನ ಮಾಡಿಕೊಂಡೀನಿ' ಅಂತ ಹೇಳಿ ಹೆಗಲಿಗೆ ಕಂಬಳಿ ಹಾಕ್ಕೊಂಡ ಹೊಲಕ್ಕ ಹೋಗಿಬಿಟ್ಟಾ. ನಾ ಏನ ಎಳಕೊಂಡ ಬರಲ್ಯಾ ಅಂವನ್ನ. ಬರಬರತ ಬದಲ ಆದಾನು ಅನ್ನೂ ಆಸೇಕ ಸುಮ್ಮನಾದೆ. ಎಂದರ ಒಂದ ದಿನ ಮನಗಿದರ ಅವ್ವನ ಮಗ್ಗಲದಾಗs ಮಲಗಾಂವ. ಮುದುಕೀಗೂ ಗೊಂತ ಆತು. ಅದೂ ವಟಾ ವಟಾ ಅಂತಿತ್ತು. ನಾನು ಅಡಿಗೀ ಮನ್ಯಾಗ ಪಿಳಿ ಪಿಳಿ ಕಣ್ಣ ಬಿಟಕೊಂತ, ಹೊಳ್ಯಾಡಕೊಂತ ಬರತಾನೇನೋ ಅಂತ ಜಪಾ ಮಾಡಿಕೋಂತ ಬಿದ್ದಿರತೀನಿ. ಚಿಗವ್ವಾs ನಂದೂ ಒಂದ ಬಾಳೇನ, ಹಿಂತಾ ಪರೀಂದ ಮದಿವಿ ಯಾಕ ಮಾಡಿಕೋಬೇಕಾಗಿತ್ತು ?"

"ನೀನರೆ ಅಂವನ ಹಂತ್ಯಾಕ ಹೋಗಬೇಕಾಗಿತ್ತು. ಬೆಂಕೀ ಹಂತ್ಯಾಕ ಬೆಣ್ಣಿ ಇಟ್ಟರ ಕರಗದ ಬಿಟ್ಟೀತs !"

"ಬೆಳ್ಳ ಬೆಳತನಾ ಹಿಂಗs ಜೇಂವಾ ಮುಟಿಗ್ಯಾಗ ಹಿಡಕೊಂಡ ಹೆಜ್ಜಿ ಸಪ್ಪಳದ ದಾರೀ ನೋಡತಿನ್ನಿ. ಒಮ್ಮೊಮ್ಮೆ ಏಳತಿದ್ದಾ. ಹಾಂ, ಬಂದಾ

ಇತ್ರ್ಯಾಗ, ಬರಾಕ ಹತ್ಯಾನ ಅನ್ನೂದರಾಗ ಚರಿಗಿ ಎತ್ತಿ ಗಳಾಗಳಾ ನೀರ ಕುಡದವ್ನ ಹೋಗಿ ಬಿಡಾಂವ. ನಿದ್ದಿ ಹತ್ತದs ಹೊಳ್ಯಾಡಾಂವ. ಬೆಣ್ಣಿ ಆದರ ಕರಗೀತವ್ವ ಕಲ್ಲೇನು ಕರಗೀತು ?"

"ಅಂವಾ ಇನ್ನೂ ಚೆನ್ನವ್ವನ್ನ ಮರತಿಲ್ಲಬೇ. ಅದಕ್ಕs ಹಾಂಗ ಮಾಡ್ಯಾನು. ನಿನ್ನ ನಸೀಬ ಖೊಟ್ಟಿ ಐತಿ ಮಗಳ. ಎಲ್ಲಾ ಮುಚ್ಚಿಟಕೊಂಡ ಬಾಳೀ ಮಾಡತೀ. ನಿನ ಗುಣಾ ನೋಡಿ ನನಗೂ ಹಿಂತಾ ಮಗಳ ಒಂದ ಇರಬೇಕಾಗಿತ್ತು ಅಂತ ಅನಸತೈತಿ."

ಚಂದ್ರವ್ವನ ದುಃಖಕ್ಕೆ ಪೂರ ಬಂದು ಕಮಲವ್ವನಿಗೆ ತೆಕ್ಕೆ ಬಿದ್ದು ಅಳಹತ್ತಿದಳು. ಅವಳ ಕಣ್ಣೀರಿಗೆ ಆಣೆಕಟ್ಟು ಕಟ್ಟುವಂತೆ ಸೂಸಿ ಓಡುತ್ತ 'ಅಪ್ಪ ಬಂದ್ನಬೇ' ಎಂದು ಕೂಗಿ ಓಡಿಹೋದಳು.

*　*　*　*

ಚಂದ್ರವ್ವನ ಕಣ್ಣೀರ ಹೊಳೆಗೆ ಕೊಚ್ಚಿ ಹೋಗಬೇಕಾಗಿದ್ದ ಲಚ್ಚಣ್ಣ ಅಚಲನಾಗಿದ್ದ. ದೊಡ್ಡ ಬಂಡೆಗಲ್ಲಿನಂತೆ ಸ್ಥಿರವಾಗಿದ್ದ. ಕಲ್ಲು ಹೃದಯ ದವನಾಗಿದ್ದ. ಮೊದಲು ಅವನು ಹೀಗಿರಲಿಲ್ಲ. ಲಚ್ಚಣ್ಣ ಇದ್ದಲ್ಲಿ ನಗು, ಹರಟೆ, ಉತ್ಸಾಹ, ನಾಟಕ, ಬಯಲಾಟದಲ್ಲಿ ಅವನ ಪಾತ್ರ, ಕುಣಿತ ಎಲ್ಲರಿಗೂ ಅಚ್ಚುಮೆಚ್ಚು. ದ್ಯಾಮವ್ವನ ಗುಡಿ ಕಟ್ಟುವಾಗ, ಮಕ್ಕಳಿಗೆ ಸಾಲೆ ಸುರು ಮಾಡುವಾಗ ಊರಿಗೇ ಮುಂದಾಗಿ ಕೆಲಸಕ್ಕೆ ಕೈ ಹಚ್ಚುವವನೇ ಅವನು. ತಾನಂತೂ ಕಲಿಯಲಿಲ್ಲ. ಮಗನಾದರೂ ಕಲಿಯಲಿ ಎಂದು ಸಾಲ ಸೋಲ ಮಾಡಿ ಮಗನನ್ನು ಕಾಲೇಜಿಗೆ ಕಳಿಸಿದ್ದ. ಸಂಗನಗೌಡರ ಮಗ ಪ್ರಕಾಶನ ನಂತರ ತನ್ನ ಮಗನೇ ಬಿ ಏ. ಆಗುವವ ಎಂದು ಚೆನ್ನಪ್ಪನೆದುರು ಮೀಸೆ ತಿರುವುತಿದ್ದ. ಮಗನಿಗೆ ಹಣ ಕಳಿಸಲು ಒಂದಕ್ಕೆರಡರಷ್ಟು ದುಡಿಯು ವರು ಇಬ್ಬರೂ. ಚೆನ್ನವ್ವ ಸತ್ತ ನಾಲ್ಕು ವರ್ಷಗಳಲ್ಲಿ ಲಚ್ಚಣ್ಣ ನಡೆದಾಡುವ ನೆರಳು ಆಗಿದ್ದಾನೆಂದು ಊರವರೆಲ್ಲರ ವ್ಯಥೆ–

ಆ ಗುರುವಾರ ರಾಮಾಪುರದ ಸಂತೆಗೆ ಒಯ್ಯಲು ಹಣ್ಣುಗಾಯಿ, ಬದನೆಕಾಯಿಗಳ ಚೀಲ ಹೊತ್ತು ಹೆದ್ದಾರಿಗೆ ಬಂದವನನ್ನು ಶಿವಣ್ಣ ಹಿಂಬಾ

ಲಿಸಿಕೊಂಡು ಬಂದಿದ್ದ. ಹೊರೆ ಇಳುವಿ ಬಸ್ಸಿನ ದಾರಿ ಕಾಯುತ್ತ ನಿಂತ ಲಚ್ಚಣ್ಣ, ಹತ್ತಿರ ನಿಂತ ಶಿವಣ್ಣನನ್ನು ನೋಡಿ ಹುಬ್ಬು ಗಂಟಿಕ್ಕಿದ. ಹಟ ಸಾಧಿಸುವವನಂತೆ ಶಿವಣ್ಣ.

"ಸಂತೀಗೆ ಹೊಂಟ್ಯಾ ಲಚ್ಚಣ್ಣಾ," ಎಂದ. ಗೊತ್ತಿದ್ದೂ ಕೇಳುತ್ತಾನಲ್ಲ ಎಂದು ಸಿಟ್ಟಿನಿಂದ ನೋಡಿದ ಲಚ್ಚಣ್ಣನತ್ತ ನೋಡಿ ಶಿವಣ್ಣ ನಕ್ಕ.

"ನಿನ್ನೆ ದ್ಯಾಮವ್ವನ ಗುಡೀಗೆ ಯಾಕ ಬರಲಿಲ್ಲೋ ಲಚ್ಚಣ್ಣಾ. ಊರ ಹಿರೇರೆಲ್ಲಾ ಕೂಡಿದ್ರು. ಈ ಸರ್ತಿ ಜಾತ್ರಿಗೆ ಸತ್ಯ ಹರಿಶ್ಚಂದ್ರ ನಾಟಕಾ ಆಡಬೇಕಂತ ಠರಾಸಿದ್ರಪಾ." ಲಚ್ಚಣ್ಣ ಬಾಯಿ ಬಿಡಲಿಲ್ಲ.

"ಊರೆಲ್ಲಾ ಒಂದಾಗಿ ಕೆಲಸಾ ಮಾಡೂ ಮುಂದ ನೀ ಒಬ್ಬಾಂವ ತೆಪ್ಪಿಸಿದರ ಹ್ಯಾಂಗೋ. ಹರಿಶ್ಚಂದ್ರನ ಪಾರ್ಟ ನಿನ್ನ ಬಿಟ್ಟರ ಯಾರ ಮಾಡವರು. ಹಿರೇರು ನೀನs ಆ ಪಾರ್ಟ ಮಾಡಬೇಕಂತ ಹೇಳ್ಯಾರ ನೋಡ."

ಊರಿನ ಮಾತು ಬಂದಾಗ ಲಚ್ಚಣ್ಣ ಮೆತ್ತಗಾದ. "ಐs ಶಿವಣ್ಣಾs ನಿನ್ನ ಕಾಲ ಬೀಳತೇನೋ. ನನ್ನಟಕ ನನ್ನ ಬಿಡ್ರೆಪಾ. ಪಾರ್ಟ ಮಾಡವರಿಗೆ ಏನ ಕಮ್ಮಿ. ಸಿದ್ದಪ್ಪ ಅದಾನ. ಮುತ್ತುಂಸಾಬನ ಮಗಾ ಗೌಸ ಅದಾನ, ನನಗs ಯಾಕ ಬೆನ್ನ ಹತ್ತೀರಿ ?"

"ಆಸರಂತ ರಾಜಾ ಪಾರ್ಟ ಮಾಡಿಕೊಂತ ಬಂದಾಂವ ನೀನs ಅಲ್ಲೇನೋ ಲಚ್ಚಣ್ಣಾ. ನಿನ್ನ ಪಾರ್ಟಿಗೆ ಕಳಾ ತುಂಬಿದಾಂಗ ಉಳದವರಿಗೆ ಆಗೂದಿಲ್ಲ ಏನಪಾ. ಜಾತ್ರಿಗಿ ಕೂಡಿದ ಮಂದೀ ಮುಂದ ನಮ್ಮ ಮಾನ ಉಳೀಬೇಕೋ ಬ್ಯಾಡೋ ? ಗೌಡರು ಹೇಳಿ ಕಳಿಸ್ಯಾರ ನಾಳೆ ಚಂಜೀ ಮುಂದ ಗುಡೀಗೆ ಬರಬೇಕಂತ."

"ಶಿವಣ್ಣಾs, ನನ ಜೀವಾ ಯಾಕ ತಿಂತೀರೋ. ನನಗಂತೂ ಈ ಬಾಳೇನುs ಬ್ಯಾಸರ ಆಗೇತಿ ನೋಡ. ಚೆನ್ನೀನ ನಾನs ಕೊಂದಾಂವ ಅಂತ, ಈಗಲೂ ರಾತ್ರಿ ಮನಸ್ಸಿನ್ಯಾಗ ಕಟೀತೈತಿ. ನಾ ಏನ ಮಾಡ್ಲಿ."

"ಅಲ್ಲೋ ಲಚ್ಚಣ್ಣಾ. ಬಂಡಿಗೆ ಹೂಡಿದ ಎತ್ತು ಬಸ್ಸಿಗೆ ಹೆದರಿ ಹಾದೀಬಿಟ್ಟು ಹಳ್ಳಕ ಜಿದ್ದುವಪಾ, ಬಂಡಿ ಒಗ್ಗಾಲಿ ಆಗಿ ತೆಗ್ಗಿನ್ಯಾಗ ಬಿದ್ದು

ಚೆನ್ನವ್ವನ ತಲಿ ಒಡಿತಪಾ. ಬಿದ್ದೇಟಿಗೆ ಸತ್ತಽ ಹ್ವಾದ್ಲು. ಇದರಾಗ ನಿಂದೇನ ತಪ್ಪೈತಪಾ. ಮುದುಕಿ ಟೊಂಕ ಮುರೀತು. ಚೆನ್ನವ್ವ ಸತ್ತು ನಾಕ ವರ್ಸಾದ್ರೂ ಇನ್ನೂ ಹೊಟ್ಟಿಬ್ಯಾನಿ ಹಚಿಗೊಂಡಿಯಾ. ಛೀ ತಗೀಯೋ, ಚೆನ್ನವ್ವನ ಭೂಮಿ ರಿಣಾ ಮುಗದಿತ್ತು. ನೀ ಹಿಂಗ ಚಿಂತೀ ಮಾಡಿದರ ಸತ್ತಾಕಿ ತಿರಗಿ ಬರತಾಳೇನ. ಹೊಸಾ ಹೇಣ್ತಿ ಬಂದಾಳ ಮಗ್ಗ್ಲದಾಗ. ಹಿಂದಿಂದೆಲ್ಲಾ ಮರತಬಿಡು ಇನ್ನ. ಎಷ್ಟ ಬಾರಿ ಹೇಳಬೇಕ ನಿನಗ. ಎಲ್ಲಾ ಮರತು ಮುಂದ್ಯಾಗ ಕೂಡಪಾ ಲಚ್ಚಣ್ಣಾ."

"ನನ ಸಂಕಟಾ ನಿನಗೆ ತಿಳಿಯೂದಿಲ್ಲೋ ಶಿವಣ್ಣಾ. ಆಕೀ ಪಡಕುಂದ್ರಿ ಜಾತ್ರೀಗೆ ಬರಾಕ ಒಲ್ಲ್ಯಾ ಅಂತಿದ್ಲೋ ತಮ್ಮಾ. ನಾನಽ ಜುಲುಮೀ ಮಾಡಿ ಮುದಕೀನ್ನ, ಆಕೀನ್ನ ಕರಕೊಂಡ ಹ್ವಾದೆ. ಚೆನ್ನಿ ಸತ್ಲು. ಇನ್ನೂ ಸಣ್ಣಾಕಿ, ಹೌಸಿನ್ಯಾಕಿ, ಮಗಾ ಸಾಯೇಬ ಆಗೂದ ನೋಡತಿದ್ಲು. ಏನೇನೋ ಆಸೆ ಇಟಕೊಂಡಿದ್ಲು. ನಾನಽ ಕೊಂದ್ನೆಪ್ಪೋ ನಾನಽ ಕೊಂದೆ. ವಂನ್ಯಾಗಿದ್ದರೆ ಬದಕತಿದ್ಲೋ ಇಲ್ಲೋ ? ಟೊಂಕಾ ಮುರಕೊಂಡ ಮುದಕಿ ಇದ್ದೂ ಸತ್ಹಾಂಗ ಬಿದ್ದೈತಿ. 'ನಾ ಇನಾ ಯಾಕ ಸಾಯುಲಿಲ್ಲೋ' ಅಂತ ದಿನಾಽ ಗೋಳ್ಯಾಡತೈತಿ. ಅದರ ಗೋಳ್ಯಾಟ ನೋಡಲಾಸಲ್ಲ. ಅದು ಕೌದ್ಯಾಗ ಬಿದ್ದು ಗೊಮ್ಮಂತ ಹೊಲಸ ನಾರೂ ಮುಂದ ಇದರ ಸಾವು ಬರಬಾರದಽ ಅನಸತೈತಿ. ಇದಕೆಲ್ಲಾ ನಾನಽ ಕಾರಣ ಹೌದಲೋ. ಮುದಕೀ ಕಿರಿಕಿರೀಗೆ ಚಂದ್ರೀನ್ನ ಮದುವೀ ಮಾಡಿಕೋಬಾರದಾಗಿತ್ತು. ಅನಸತೈತಿ. ನನ್ನ ತಲೀ ಕೆಟ್ಟು ಹುಚ್ಚ ಹಿಡಿಯೂದೊಂದಽ ಉಳದೈತಿ. ಹಿಂತಾದರಾಗ ಎಲ್ಲಾ ಮರತು ನಾ ರಾಜಾನ ಪಾರ್ಟ್ ಹ್ಯಾಂಗ ಮಾಡಲ್ಲೋ. ರಾಜಾ ಹರಿಚ್ಚಂದ್ರ ಹೇಣ್ತೀನ್ನ ಕೊಂದರೂ ಅಂವಾ ಸತ್ಯವಂತ, ಮಹಾತ್ಮ. ಆದಕಽ ದೇವರು ರಾಣೇನ್ನ ಬದಕಿಸಿದ. ಆಜೆರ ನನ್ನ ನೋಡು, ನಾನು ಪಾಪಿಷ್ಟ. ಚೆನ್ನೀನ ಕೊಂದೆ. ಅವ್ವನ್ನ ಅರೆಜೀವಾ ಮಾಡಿದೆ. ನಾ ಬದಕಿ ಇರಬಾರ್ದೋ ಶಿವಣ್ಣಾ, ನಾ ಬದಕಿರಬಾರ್ದು." ರುಮಾಲಿನಿಂದ ಮುಖ ಮುಚ್ಚಿಕೊಂಡು ಅಳಹತ್ತಿದ ಲಚ್ಚಣ್ಣನ ಮಾಯದ ಗಾಯವನ್ನು ಇನ್ನಷ್ಟು ಕೆದಕಲು ಬಯಸದ ಶಿವಣ್ಣ ಅವನನ್ನು ಸಂತೈಸಿದ.

"ಇರಲಿ ಸುಮ್ಮಕಾಗು, ಲಚ್ಚಣ್ಣಾ. ಸದಾಶಿವ, ನಾಗವ್ವ, ಚಂದ್ರವ್ವ, ಸೂಸಿ, ನಮಗ, ಎಲ್ಲಾರಿಗೂ ನೀ ಬೇಕಪ್ಪ. ನೀ ಹಿಂಗ ಅಂದರ ಮುದುಕಿ ಮತ್ತ್ಯಾಟು ಎದೀ ಒಡಕೊಂತೈತಿ, ಯಾವದೂ ನಮ್ ಕೈಯಾಗಿಲ್ಲ, ನೀ ಸಾಯೂ ಮಾತ ಆಡಬಾರ್ದು. ಬಂದದ್ದಕ್ಕ ಗಟ್ಯಾಗಿ ನಿಂತು ಬದುಕ ಮಾಡಬೇಕು ಅಂತ ಮೊನ್ನಿ ಪುರಾಣದಾಗ ಸ್ವಾಮೇರು ಹೇಳಿದ್ದು ಕೇಳಲಿಲ್ಲೇನು. ಆಗಿ ಹೋಗಿದ್ದು ಮರ್ಯಾಕ ಯತನ ಮಾಡ. ಬ್ಯಾರೇ ಕಡೇ ಲಕ್ಷ್ಯ ಹಾಕ, ಚಂಜೀ ಮುಂದ ಚಾವಡಿಗಿ ಬಾ. ಟಿ.ವಿ. ಹಾಕಿರ್ತಾರ ನೋಡೀಯಂತ. ನಾಳೆ ನಿನ್ನ ಸದಾಶಿವ ಸಾಯೇಬ ಆಗಿ ಬಂದರ ನಿನ ಮನ್ಯಾಗೂ ಟಿ.ವಿ. ಬರತೈತಿ. ನೋಡಿಕೊಂತ ಆರಾಮ ನೀ ಕುಂಡ್ರೂವಂತೆ. ಅತಿಲ್ಲೊ. ಹಂ. ಈಗೇನ ಸಂತ್ಯಾಗ ಭಾಳ ಕೆಲಸ ಐತೇನ. ಇಕಾ, ಒಂದ ಬೀಡಿ ಹಚ್ಚ."

"ಹಾಂಗೇನಿಲ್ಲಪಾ, ಇದೀಟ ಕಾಯಿಪಲ್ಲೆ ಮಾರಿ ಚಾಪುಡಿ, ಬೆಲ್ಲ ಎಣ್ಣಿ ತರತೀನಿ. ಇಲಿ, ಹೆಗ್ಗಣಾ ಹೆಚ್ಚಾಗ್ಯಾವ. ಅವಕ ಉಣ್ಣೇಪುಡಿ ತರ್ತೀನಿ."

"ಬಸ್ ಬಂತ ನೋಡ ಲಚ್ಚಣ್ಣ. ನಾ ಹಣ್ಣಗಾಯಿ ಚೀಲಾ ಹಿಡಿತೀನಿ ನೀ ಹತ್ತ ಮದಲ. ಗೌಡರಿಗಿ ಚಂಜೀ ಮುಂದ ನಾ ಎಲ್ಲಾ ಹೇಳ್ತೀನಿ."

* * * *

ಮೇಲೆ ಧಗಧಗ ಉರಿಯುವ ಬಿಸಿಲು, ಕೆಳಗೆ ಸುಡುವ ಕಲ್ಲು, ಮಣ್ಣು, ತರಿಯುವ ಕಂಟಿ, ಚುಚ್ಚುವ ಮುಳ್ಳು, ಕುರುವಿನಂತೆ ಕಾಣುವ ಬಂಡೆಗಳು ದೂರತಳದಲ್ಲಿ ಮಿಣಿ ಮಿಣಿ ಮಿನುಗುವ ಹಾಳು ಬಾವಿ, ಹಸಿರು ಇಲ್ಲದ ಗುಡ್ಡ, ಸೂಸಿ ಎಲ್ಲವನ್ನೂ ದಾಟುತ್ತ ದಾಟುತ್ತ ಗುಡ್ಡ ಹತ್ತಿದಳು. ಹಸಿರು ಹುಡುಕುತ್ತ ಗುಡ್ಡದ ನೆತ್ತಿಯನ್ನೂ ಸೇರಿದಳು. ಅಲ್ಲೊಂದು ಬೇವಿನ ಮರವಿತ್ತು...

"ಮರಕ್ಕಾS, ಏ ಮರಕ್ಕಾSS ನಾ ಬಂದೀನಿ. ಸೂಸಿ, ದಿನಾS ಬರೂ ಹಾಂಗ ಅಪ್ಪೂರಕಿಂತ ಮೊದಲS ಓಡಿ ಬಂದೀನಿ. ನಾನS ನೆಳ್ಯಾಗ ಕುಂದ್ರಾಕಿ. ಏS ಭೀಮಕ್ಕಾ, ಸೋಮಕ್ಕಾ, ಗಂಗೀ ನೀವು ಹೋಗ್ರಿ, ದೂರ ಕಾಲಾಡಿಸಿಕೊಂಡು ಹಸರು ಮೇದ ಬರ್ರಿ. ಹೊಟ್ಟಿ ತುಂಬ ತಿನಬೇಕ ಹಾಂ, ಚಂಜೀಕ ಹಾಲ ಹಿಂಡದಿದ್ದರ ಅಪ್ಪ ಬಯ್ತಾನ, ಅವ್ವ ನನ್ನ

ಹೊಡೀತಾಳ 'ಹಿಂಗs ಏನ ದನಾ ಮೇಸೂದು, ಕೂಳಿಗೆ ದಂಡ ಆದೀ' ಅಂತಾಳ, ಗಂಗೀ, ನಿನ್ನ ಕರಾ ಕಾಳಿ ಇಲ್ಲೇ ಇರಲಿ ನನ ಹಂತ್ಯಾಕ. ಈ ನೆಳ್ಳ್ಯಾಗ ಕಟ್ಟತೇನಿ ಕಾಳೀನ್ನ. ಈ ಮರಕ್ಕ್ಯಾ ದಿನಾs ನನಗ ರಾಜಾರಾಣಿ ಕಥೀ ಹೇಳತಾಳ. ಹಾಂ. ಏ ಮರಕ್ಕ್ಯಾs ನನಗ ಬ್ಯಾಸರ ಆಗ್ಯೆತಿ, ಒಂದ ಕಥಿ ಹೇಳವ್ವ. ನನ ಜೋಡೀ ಮಾತಾಡವರ ಯಾರೂ ಇಲ್ಲವಾ, ನೀನರೆ ಮಾತಾಡವ್ವ... ಯಾಕ ಸುಮ್ಮನ ಅದೀ, ಅಂ. ನೀ ಹೇಳೂದಿಲ್ಲs ಹೋಗಲಿ ಬಿಡು. ನಿನಗ ಕಥೀ ನೆನಪ ಆಗವೊಲ್ತ. ಇವತ್ತ ನಾನs ಕಥೀ ಹೇಳಲ್ಯಾ ? ಮರಕ್ಕ್ಯಾs ನಂದ ಕಥೀ ಹೇಳಲ್ಯಾ...

"ನನ್ನ ಹೆಸರು ಸುಶೀಲಾ, ಎಲ್ಲಾರೂ ಸೂಸಿ ಸೂಸಿ ಅಂತ ಕರೀತಾರ. ನನ್ನ ಸಣ್ಣ ಮಾವನ ಹೇಣ್ತೀ ಹಗಲೆಲ್ಲಾ ನನ್ನ ಗುದ್ದಿ 'ಹುಟ್ಟಿದ ವರ್ಸಕ್ಕs ಅಪ್ಪನ ನುಂಗಿ ನೀರ ಕುಡೀತ ಈ ಪೀಡಾ, ನಮಗ ಮುಳುವು ಆಗಿ ಕುಂತೈತಿ' ಅಂತ ಬಯ್ಯುತಿದ್ಲು. ಇನ್ನೊಬ್ಬ ಮಾವನ ಹೇಣ್ತಿ ಅಂತೂ ನಮ್ಮ ಕೂಟ ಮಾತs ಆಡತಿದ್ದಿಲ್ಲ. ಆಕಿ ಮಕ್ಕಳು ಯಾರರೇ ಮಾತಾಡಿದರೂ, ನನಕೂಟ ಆಡಿದ್ರೂ ಅವರ್ನ ಹಚ್ಚಿ ಹೊಡೀತಿದ್ಲು. ನನ ಹೊಟ್ಟಿ ಭಾಳ ಹಸದಿತ್ತಂತ ಒಂದ ದಿನಾ ನಾನs ರೊಟ್ಟಿ ತೊಗೊಂಡ ತಿಂದದ್ದಕ್ಕ ಕಡಚೀಕಾಸಿ ಕೈ ಮ್ಯಾಲೆ ಬರೀ ಎಳದಬಿಟ್ಲು. ಮರಕ್ಕ್ಯಾs ಇಕಾ ನೋಡಿಲ್ಲೆ ಇನ್ನೂ ಖಲೀ ಐತಿ. ಅಂದಿಂದ ಇನ್ನೂ ತನಾ ಹಸಿವಿ ಆಗೇತಿ ಅಂತ ನಾ ಅನ್ನೂದಿಲ್ಲ. ಮಾವಗೋಳ ಮಕ್ಕಳು ಸಾಲಿ ಕಲೀತಿದ್ರು, ಅವರ ಪಾಟಿ, ಪುಸ್ತಕಾ ನನಗ ಮುಟ್ಟಾಕೂ ಕೊಡತಿದ್ದಿಲ್ಲ. ಅವರ ಹಾಕ್ಕೊಂಡ ಅರಿಬೀ ನಾ ತೊಟಕೊಂಡು ದೊಡ್ಡಾಕಿ ಆದೆ. ನಮ್ಮವ್ವ ದನಾ ದುಡಿದಂಗ ದುಡೀತಿದ್ಲು. ರಾತ್ರಿ ಮಕ್ಕೊಂಡಾಗ ಆಕೀ ನೆಳ್ಳಿದರ ನನಗ ಸಂಕಟ ಆಗ್ತಿತ್ತು. 'ಯವ್ವಾ ತಲೀ ಹಿಚಕಲ್ಯಾ. ಕಾಲ ಹರೀತಾವೇನು ಒತ್ತಲ್ಯಾ' ಅಂತ ಕೇಳಿದರ ನನ್ನ ಅವಚಿಕೊಂಡ ಅತ್ತ ಬಿಡತಿದ್ಲು. ಅಳೂದನಿ ಏನರೆ ಅತ್ತಿಗೋಳ ಕಿವಿಗೆ ಬಿದ್ದರ 'ಬೋಸಡೇರು ನಾವು ಚೆಂದಾಗಿ ಇರೂದ ನೋಡಲಾಗದ ಅಳತಾವ' ಅಂತ ಬಯ್ಯುತಿದ್ದರು.

ದೊಡ್ಡವ್ವನ ಊರು ಹೊನ್ನೂರಿಗೆ ಬಂದಾಗ ಅಟ ನಮಗ ಹೊಟ್ಟಿ ತುಂಬ ಊಟ, ಕಣ್ತುಂಬ ನಿದ್ದಿ. ನಾಕ ದಿನಾ ಇರೂದರಾಗ ಹೊಲದಾಗ

ಕೆಲಸ ಭಾಳ ಆದಾವ ಅಂತೇಳಿ ಸಣ್ಣ ಮಾವ ಕರ್ಯಾಕ ಬರತಿದ್ದಾ. ಹಗ್ಗಾ ಹಚ್ಚಿ ಎಳಕೊಂಡ ಹೋಗೂ ದನದ್ಹಾಂಗ ಅಪನ ಹಿಂದ ಹೋಗತಿದ್ವಿ. ಆ ದೇವರು ನಮಗಽ ಯಾಕ ಇಷ್ಟ ತರಾಸ ಕೊಡತಾನ ಅಂತ ಬಸವಣ್ಣನ ಗುಡೀ ಕಟ್ಟೀ ಮ್ಯಾಲೆ ಕುಂತ ಅಳತಿದ್ದೆ. ಒಂದ ದಿನಾ ಸಿಟ್ಟ ಭಾಳ ಬಂತು. ಅತ್ತಾಗ ಇತ್ತಾಗ ನೋಡಿ ರಸ್ತೆದಾಗಿನ ಕಲ್ಲ ತೊಗೊಂಡ ಬಸವಣ್ಣನ ಮ್ಯಾಲೆ ಬೀಸಿ ಒಗದ ಓಡಿ ಬಂದ್ನಿ. ಇನ್ನೂ ತನಾ ಇದನ್ನ ಯಾರ ಮುಂದೂ ಹೇಳಿಲ್ಲ, ಮರಕ್ಕಾ, ನನ್ನ ಹೊಟ್ಟ್ಯಾಗಿನ ಮಾತು ನಿನಗ ಒಬ್ಬಾಕಿಗೆ ಹೇಳೀನಿ. ನೀ ಯಾರ ಮುಂದೂ ಹೇಳಬ್ಯಾಡ ಹಾಂ, ಮತ್ತ.

ನನ್ನ ಪಿರೀತಿ ದೊಡ್ಡವ್ವ ಬಂಡೀ ಗಾಲಿ ಹಾದು ತಲೀ ಒಡದು ಸತ್ಲು ಅಂತ ಸುದ್ದಿ ಬಂತು. ನಿನ್ನ ಬದ್ಲಿ ನಾನರೆ ಸಾಯಬಾರದಾಗಿತ್ತಽ ಅಂತ ಅವ್ವ ಎದೀ ಎದೀ ಬಡಕೊಂಡು ಹೊಳ್ಯಾಡಿ ಅತ್ಲು. ಆಕಿ ನನ್ನ ಚಿಂತೀನ ಮಾಡಲಿಲ್ಲ. ದೊಡ್ಡಪ್ಪ ಅಂತೂ ಹಾಸಿಗೀ ಹಿಡದುಬಿಟ್ಟಿದ್ದ. ಗಂಡನ ಮನೀಂದ, ಬಂದ ನಾಗಕ್ಕನ ಎಲ್ಲಾನೂ ಮಾಡತಿದ್ಲು. ಮುದುಕಿ ಸೊಂಟಾ ಮುರಕೊಂಡು ಬಿದ್ದಿದ್ಲು. ನಾಗಕ್ಕನ ಫಜೀತಿನ ಫಜೀತಿ.

ದೊಡ್ಡವ್ವನ ಮನೀ ರಿಣಾ ತೀರಿತು ಅಂತ ನಾವಿಬ್ರೂ ತಿಳಕೊಂಡ್ವಿ. ನಮ್ಮ ವಸ್ತೂನ ಹ್ವಾದ ಮ್ಯಾಲೆ ನಮ್ಮನ್ನ ಕರಸವರ್ಯಾರು. ಅಣ್ಣದೇರು ಹೊಟ್ಟಿ ತುಂಬ ಕೂಳ ಹಾಕೂದಿಲ್ಲ ಅಂದ ಮ್ಯಾಲೆ ನನ ಮಗಳ ಮದುವಿ ಯಾರ ಮಾಡವರು ಅಂತ ನಮ್ಮವ್ವಗ ಚಿಂತಿ ಹತ್ತಿತ್ತು. ನನಗೂ ಹತ್ತ ವರ್ಸ ಆಗಿದ್ವು 'ಯವ್ವಾ ನನ ಮದವೀ ಚಿಂತೀ ಮಾಡಬ್ಯಾಡಾ. ರಟ್ಟ್ಯಾಗ ಸಗತಿ ಐತಿ. ಇಬ್ರೂ ಕೂಡಿ ದುಡಿಯಾಣ ಉಣ್ಣೂಣ. ಈ ಮಾವಗೋಳ ಹಂಗಽ ಬ್ಯಾಡಾ. ಬ್ಯಾರೇ ಗುಡಸಲಾ ಹಾಕ್ಕೊಂಡ ಇರೂಣ ನಡಿ' ಅಂದರ ನಮ್ಮವ್ವ 'ಹುಚ್ಚ ನನ ಮಗಳಽ' ಅಂತ ಅಳತಿದ್ಲು. ನಾ ಹೇಳಿದ್ಹಾಂಗ ನಡಕೊಳ್ಳೂದು ಇಷ್ಟ ಹಗರ ಅಲ್ಲಾ ಅಂತ ನನಗೂ ತಿಳಿಯಾಕ ಹತ್ತಿತ್ತು...

ಒಂದಿನಾ ಹೊನ್ನೂರಿಂದ ಅಮ್ಮ ಹಿರೇರ ಕೂಟ ಹೇಳಿ ಕಳಿಸಿದ್ಲು. ಚಂದ್ರವ್ವನ್ನ ನಮ್ಮ ಲಚ್ಚಣ್ಣಗ ಉಡಕೀ ಮಾಡಿಕೊಡ್ರೀ ಅಂತ. ಅವ್ವ ಸಾಫಾಗಿ ಹೇಳಿಬಿಟ್ಲು 'ನನ್ನ ಜೋಡಿ ಸೂಸವ್ವನ್ನೂ ಹೊನ್ನೂರಿಗೆ ಕರಕೊಂಡ

ಬರಾಕಿ' ಅಂತ. ಮದುವಿ ಗೊತ್ತಾದ ಮ್ಯಾಲೆ ಅತ್ತಿಗೊಳಿಗೆ ಬಾಳಾ ಹಿಗ್ಗ ಆಗಿತ್ತು ಈ ಎರಡೂ ಪೀಡಾ ಹೋಗ್ತಾವಲ್ಲ ಅಂತ.

ನನಗ ಹೊಸಾ ಪರಕಾರಾ ಪೋಲಕಾ ಹೊಲಿಸಿದ್ರು, ನಮ್ಮವ್ವ ಗಂಡನ ಮನೀಗೆ ಹೊಂಟಾಗ. ಹೊಸಾ ಮನೀಗೆ ಬಲೇ ಹುರುಪಿಲೆ ಬಂದ್ನಿ. ಆದರ ದೊಡ್ಡವ್ವ ಸತ್ತಾಗಿಂದ ಮನೀ ಬಣ್ಣಾನ ಬದಲ ಆಗಿತ್ತು. ನಾಗಕ್ಕ ಗಂಡನ ಮನ್ಯಾಗ ಆದಾಳ. ಸದಾಶಿವಣ್ಣ ಓದಾಕ ಪರವೂರಿಗೆ ಹೋಗ್ಯಾನ. ಅಮ್ಮ ಕುಂಡೀ ಸವರಿಕೋತ ಮನೀ ಕಾರಭಾರಾ ಮಾಡತಿದ್ಲು. ಸಗತಿ ಕಡಿಮಿ ಆಗಿದ್ರೂ ಬಾಯಿ ಜೋರ ಆಗಿತ್ತು. ತನ್ನ ಚಾಕರಿ ಮಾಡಿಸಿಕೊಳ್ಳಾಕ ಆಕೀನs ದುಂಬಾಲ ಬಿದ್ದು ಮಗನ ಮದಿವೀ ಮಾಡಿದ್ಲಂತ. ಈಗಂತೂ ಹಾಸಿಗೀನ ಹಿಡದಾಳ. ದೊಡ್ಡಪ್ಪ ಮೂಕ ಆಗ್ಯಾನ. ಯಾವಾಗ್ಲೂ ಸಿಟ್ಟಿನ್ಯಾಗ ಇರತಾನ, ಅವ್ವ ಆವನ ಮುಂದ ನಿಂದ್ರಾಕ ಹೆದರತಾಳ. ದುಡಿಯೂದು, ತಿನ್ನೂದು, ಉಣ್ಣಾಕ ಕುಂತ್ರೂ ಸಾಕು ಬೇಕು ಅನ್ನೂದಿಲ್ಲ ದೊಡ್ಡಪ್ಪ.

ಹಾಂ, ಮರಕ್ಕ್ಯಾs ನಮ್ಮವ್ವನ ಗಂಡ ಅಂದವ್ಯಾಲೆ ನನಗ ಅಪ್ಪನ ಆಗ ಬೇಕಲ್ಲ. ಒಂದಿನಾ ಅಣ್ಣನಾಂಗ ನಾನೂ ಯಪ್ಪಾ ಅಂತ ಕರದೆ. ಹೊಳ್ಳಿ ನನ್ನ ಕಪಾಳಿಗೆ ಬೀಸಿ ಹೊಡದವನ ದಡ ದಡ ಹೊರಗಹೋಗಿಬಿಟ್ಟ. ಈಗ ಮೊ ದ ಲಿ ನಾ ಂ ಗ ನನಗ ದುಃಖ ಆದರ ಅವ್ವನ ಉಡ್ಯಾಗ ಬಿದ್ದ ಅಳೂ ಹಾಂಗಿಲ್ಲಾ, ಅವ್ವ ಒಳಗ ಅಡಿಗೀ ಮನ್ಯಾಗ ಒಬ್ಬಾಕೀ ಮನಗತಾಳ. ನಾ ಬರಲ್ಯಾ ನಿನ ಹಂತ್ಯಾಕ ಅಂದರ ಬ್ಯಾಡಾ ಅಲ್ಲೇ ಮುದುಕೀ ಹ ಂ ತ್ಯಾ ಕ ಮಲಕೋ ಅಂತಾಳ. ಅಮ್ಮ ಹಾಸಿಗಿ ಹಿಡದವ್ಯಾಲೆ ಎಲ್ಲಾ ಅಲ್ಲೇ ಮಾಡ ತಾಳ ಗೊಮ್ಮಂತ ನಾರತಾಳ. ನನಗಂತೂ ವಯಕ್ ಅಂತಿತ್ತು. ಈ ಮುದಕಿ ಲಗೂನ ಸತ್ತರ ಗಾಳಿ ಹಸನ ಆಕ್ಕೈತಿ ಅಂತಿದ್ದೆ ಮನಸ್ಸಿನ್ಯಾಗ. ಮಂದೀ ಮನ್ಯಾಗಿನ ಹಾಂಗ ನಮ್ಮಪ್ಪ ಅವ್ವ ಯಾಕ ಮಾತಾಡೂದಿಲ್ಲಾ, ನಗೂದಿಲ್ಲಾ ಅಂತಿದ್ದೆ. ಹಿಂದಕ ಬಂದಾಗ ದೊಡ್ಡಪ್ಪ ಬಳೀ, ರಿಬ್ಬನ್ನು, ಪಿನ್ನು ಎಲ್ಲಾ ಕೊಡಿಸಿ ತಲಿ ಸವರಿ ಎಷ್ಟ ಪಿರೀತಿಲೆ ಮಾತಾಡಿದ್ದಾ ಈಗ್ಯಾಕ ಹಿಂಗ ಆಗ್ಯಾನು ಅಂತಿದ್ದೆ...

ಆದರ ಮರಕ್ಕಾs ದೊಡ್ಡಪ್ಪ ಭಾಳ ಚಿಂತೀ ಮಾಡ್ತಾನ, ಚೆನ್ನಿ ನಿನ್ನ ನಾನs ಕೊಂದೆ ಅಂತಾನ. ಯವ್ವಾ ನಿನಗ ಹೆಂತಾ ಗತೀ ಬಂತs ಅಂತ ಅಳ್ತಾನ. ಅಂವಾ ಅಳೂ ಮುಂದ ಹಾಸಿಗ್ಯಾಗ ಮಕ್ಕೊಂಡ ನನ ಕಣ್ಣಾಗೂ ನೀರ ಹರೀತಾವ. ಹಿಂಗ ಮಾಡಿದ ಆ ದೇವರ ಮ್ಯಾಲೆ ಸಿಟ್ಟು ಬಂದು ಈ ಸಾರೆ ಸಗಣೀನ ಒಗೀತೇನಿ ನಿನಗ ನೋಡ್ತಿರು ಅಂದೇನಿ...

ಮರಕ್ಕಾ ನಿನಗ ಒಂದ ಗುಟ್ಟಿನ ಮಾತ ಹೇಳ್ತೇನಿ. ಯಾರಿಗೂ ಹೇಳ ಬ್ಯಾಡಾ. ಒಂದ ರಾತ್ರಿ, ಮುದುಕಿ ಉಂಯ್ ಉಂಯ್ ಅಂತ ನೆಳ್ಳಾತಿತ್ತು. ನನಗ ಎಚ್ಚರಾತು, ದೊಡ್ಡಪ್ಪ ಹೊಲಕ್ಕ ಹೋಗೂದ ಬಿಟ್ಟ ನಾಕೈದು ದಿನಾ ಆಗಿತ್ತು. ಅವ್ವಗ ಅಪ್ಪಗ ಜಗಳ ಆಗಿತ್ತು. ಮುದುಕಿ ಹಗಲೂ ರಾತ್ರಿ ಒದರತಿತ್ತು 'ತಟಕು ಇಸಾ ಕೊಡ್ರೇ ನಾ ಸಾಯ್ತೇನಿ' ಅಂತ. ಅವತ್ತೂ ಅಳತಿತ್ತು. ದೊಡ್ಡಪ್ಪ ಎದ್ದ. ತಾನs ಪುರಲೀ ಹಾಕಿ, ಒಲಿ ಹೊತ್ತಿಸಿ ಚಾ ಕಾಸಿದಾ. ಮಾಡಿನ್ಯಾಗಿಂದ ಉಣ್ಣೀ ಪುಡಿ ಚೀಟು ತೊಗೊಂಡು ಮುದುಕೀ ವಾಟೇದಾಗ ಹಾಕಿ ಚಾ ಸುರುವಿದಾ. ಅವನ ಕೈ ನಡಗಾಕ ಹತ್ತಿದ್ವು. ಚೂರs ಮುಸುಕು ಸರಿಸಿ ನಾ ನೋಡತಿದ್ದೆ. ಆದರ ಮಿಸಕ್ಯಾಡಲಿಲ್ಲ. ಮುದುಕಿ ಚಾ ಕುಡುದು ಮಕ್ಕೊಂಡಿತು. ದೊಡ್ಡಪ್ಪ ದೀಪಾ ಆರಿಸಿದಾ, ನನಗ ಎಚ್ಚರ ಆದಾಗ ಬೆಳಕ ಹರಿದಿತ್ತು. ಅವ್ವ ಬಾಯಿ ಬಡಕೊಂಡು ಅಳ ತಿದ್ಲು. ಮಂದೆಲ್ಲಾ ಕೂಡಿದ್ರು. ದೊಡ್ಡಪ್ಪ ಮಾತ್ರ ಕಂಬಕ್ಕ ಆತು ಕಲ್ಲಿ ನಾಂಗ ಕುಂತಿದ್ದಾ. ಮುದುಕೀನ ಮಣ್ಣುಮಾಡಿ ಬಂದ್ರು. ದೊಡ್ಡಪ್ಪನ ಕಣ್ಣಾಗ ಒಂದ ಹನಿ ನೀರ ಇದ್ದಿದ್ದಿಲ್ಲಾ. 'ಪಾಪ ಲಚ್ಚಣ್ಣ ಅವ್ವನ ಮ್ಯಾಲೆ ಜೀವ, ಮನಸಿಗೆ ಹಚಿಕೊಂಡಾನ ಹಿಂಗs ಇದ್ದರೆ ಹುಚ್ಚ ಆಗ್ತಾನ' ಅಂತ ಆಡಿಕೊಂಡರು ಊರಾಗಿನ ಮಂದಿ. ಮರಕ್ಕಾ ನಾ ಕೇಳ್ತೇನಿ, ದೊಡ್ಡಪ್ಪಗ ಹುಚ್ಚ ಹಿಡದರ ಏನ ಗತಿ ? ನಮಗ ಏನೂ ಬ್ಯಾಡಾ ಮರಕ್ಕಾ. ಒಂದೀಟ ಪಿರೀತಿ ಬೇಕು. ಮರಕ್ಕಾs ಈ ಪಿರೀತಿಗೆ ನಾವ ಎಲ್ಲಾ ಕೊಡ್ತೇವಿ. ಬೆವರ ಕೊಡ್ತೇವಿ, ರಕ್ತಾ ಕೊಡ್ತೇವಿ, ನಮ್ಮದೆಲ್ಲಾ ಕೊಡ್ತೇವಿ, ನೀನs ಹೇಳು ಮರಕ್ಕಾs ನಮ್ಮ ಅಪ್ಪಗ ನೀನs ಹೇಳು. ಹೇಳತೀಯಾ ? ಮರಕ್ಕಾs ಏನದು ಸಪ್ಪಳಾ? ಗುಡುಗs ಹೌದು, ಗುಡುಗಾಕ ಹತ್ತೈತಿ. ಮಿಂಚು ಹೊಡೀತೈತಿ. ಸಂಜಿ ಆತು. ಮರಕ್ಕಾ ನಾ ಹೋಗ್ತೇನಿ, ನಾ ಮನೀಗೆ ಹೋಗ್ತೇನಿ.

ಸೂಸಿ ಊರ ಕಡೆಗೆ ಓಡುತ್ತಿದ್ದಳು. ಹಾಳು ಭಾವಿಯ ದಂಡೆಯಲ್ಲೊಂದು ಆಕಾರವಿತ್ತು, ಆಕಾರಕ್ಕೆ ಕೈಕಾಲು ಮೂಡಿ ಯವ್ವಾ ಚೆನ್ನೀ ಎಂದು ಕೂಗಿದಾಗ ಸೂಸವ್ವ ಗಟ್ಟಿಯಾಗಿ ಕಾಲಿಗೆ ಜೋತುಬಿದ್ದಳು. ಹತ್ತು ವರ್ಷದ ಹುಡುಗಿಗೆ ಹತ್ತು ಜನರ ಬಲ ಬಂದಿತ್ತು. "ಯಪ್ಪಾ ನೀ ಸಾಯ ಬ್ಯಾಡಾ, ನೀ ಬೇಕ ನಮಗ" ಸೂಸವ್ವ ಚೀರಿದಳು. ಹಿಂದೆ ಬಿದ್ದ ಲಚ್ಚಣ್ಣ ಸೂಸಿಯನ್ನು ಗಟ್ಟಿಯಾಗಿ ಅಪ್ಪಿಕೊಂಡು ಅಳತೊಡಗಿದ. ದೊಡ್ಡ ದೊಡ್ಡ ಹನಿಗಳು ರಪ್ ರಪ್ ಹೊಡೆದು ಅವರನ್ನು ತೊಯ್ಯಿಸತೊಡಗಿದವು.

ಮೇಣಬತ್ತಿ

ಸುತ್ತಲಿನ ದಟ್ಟ ಕತ್ತಲೆಯಲ್ಲಿ ಕಾರಿನ ದೀಪಗಳ ಬೆಳಕು ರಸ್ತೆಯ ಅಗಲಕ್ಕೆ ಬಿಳಿಯ ಹಾಸಿಗೆಯಂತೆ ಹರಡಿ ಮುಂದೆ ಮಾಯವಾಗುತ್ತಿತ್ತು. ಮಳೆಯ ಮೋಡಗಳು ನಕ್ಷತ್ರಗಳನ್ನು ಮುಚ್ಚಿಹಾಕಿದ್ದವು. ಬೀಳುತ್ತಿದ್ದ ಒಂದೊಂದೇ ಹನಿಗಳು ಕಾಜಿನ ಮೇಲೆ ಅಗಲವಾಗಿ ಚಿತ್ರ ಬಿಡಿಸುತ್ತಿದ್ದವು. ತುಂಬ ಖುಷಿಯಿಂದ ಸಿಳ್ಳು ಹಾಕುತ್ತಿದ್ದ ಶಶಿಧರ. ಮೂಗು ಅರಳಿಸಿ ಉಸಿರೆಳೆದುಕೊಂಡ. ಮೈಯ ನರನರಗಳಲ್ಲಿ ಉತ್ಸಾಹ ತುಂಬಿಕೊಂಡಿತು. ಆಹಾ ! ಮಣ್ಣಿನ ವಾಸನೆ. ಇನ್ನೊಮ್ಮೆ ಮತ್ತೊಮ್ಮೆ ಕಾದ ಮಣ್ಣಿನ ಮೇಲೆ ಬಿದ್ದ ಮೊದಲ ಹನಿಯಿಂದ ಸೂಸುವ ಕಂಪು ! ಸುಳಿಗಾಳಿ ಬೀಸಿ ಬಂದು ಅವನ ತಿದ್ದಿ ತೀಡಿದ ಬೆಳ್ಳಿ ಕೂದಲುಗಳನ್ನು ಚದುರಿ ಚೆಲ್ಲಾಡಿತು. ಕಚಗುಳಿಯಿಟ್ಟಂತಾಗಿ ಶಶಿಧರ ಸ್ಟೈಲಾಗಿ ಹಿಂದಕ್ಕೆ ಸರಿಸಿಕೊಂಡ.

ಹಿಂದಿನಿಂದ ಒಂದೇ ಸವನೆ ಕೇಳುತ್ತಿದ್ದ ಹಾರ್ನ ಶಬ್ದ ಅವನನ್ನು ಎಚ್ಚರಿಸಿತು. ರಾತ್ರಿ ಹತ್ತು ಗಂಟೆಯಲ್ಲಿ ಇಡೀ ಜಗತ್ತನ್ನೇ ಗೆದ್ದ ಗತ್ತಿನಲ್ಲಿ ರಸ್ತೆಯ ಮಧ್ಯದಲ್ಲಿ ಕಾರು ಓಡಿಸುತ್ತಿದ್ದೇನೆ ರಾಜಾಧಿರಾಜನಂತೆ. ನಗು ಬಂದಿತು, ತಾನು ರಾಜನಾದರೆ ರಾಣಿ ಎಲ್ಲಿ ? 'ಹೋಟೆಲ್ ಮೇನಕಾ'ದ ಶಯ್ಯಾಗೃಹದ ಹಂಸತೂಲಿಕಾ ತಲ್ಪದಲ್ಲಿಯೇ ? ಆಹ್ ! ಗುಲಾಬಿ ಪಕಳೆಗಳ ರಾಶಿಯಲ್ಲಿ ಹೊರಳಿದ ಅನುಭವ. ಆ ತಂಪು, ಆ ಮಿದುವು, ಎಂಥ ಸುಖ ! ಎಷ್ಟು ಸುಖ ! ಈ ತರದ ಅನುಭವ ಅವಳಿಗಾಗಲಿಲ್ಲವೇ ? ಅದರ ಕಿಂಚಿತ್ ಗುರುತನ್ನು ಅವಳು ತೋರಿಸಲಿಲ್ಲ. ತನ್ನಿಂದ ಹಣ ಪಡೆದ ಕೂಡಲೆ ಎಷ್ಟು ಬೇಗ ಹೊರಟು ಹೋದಳಲ್ಲ ಪರದೆಯ ಮೇಲಿನ ಚಿತ್ರದಂತೆ. ಅವಳ ವರ್ತನೆಯಿಂದ ನಿರಾಶೆಯಾಗಿದ್ದರೂ ಅವಳನ್ನು ಬೇಗ ಮರೆಯುವುದು ಸಾಧ್ಯ

ವಿಲ್ಲ ಎನ್ನಿಸುತ್ತದೆ. ಮನದ ಮೂಲೆಯಲ್ಲೊಂದು ಸಂಶಯ ಬೇಡವಾದರೂ ಸುಳಿಯಿತು. ತನಗೆ – ತನಗೆ ವಯಸ್ಸಾಯಿತೇ ? ಐವತ್ತೆರಡು ಏನಂಥಾ ವಯಸ್ಸು. ಮನಸ್ಸು ಮಾಡಿದ್ದರೆ ಇನ್ನೊಂದು ಮದುವೆಯಾಗಬಹುದಿತ್ತು. ಇದಿರಿನ ಚಿಕ್ಕ ಕನ್ನಡಿಯಲ್ಲಿ ಹಣಿಕಿದ. ಮುಪ್ಪಿನ ಯಾವ ಲಕ್ಷಣಗಳೂ ಕಾಣಲಿಲ್ಲ. ಕಿರುನಗೆ ತುಟಿಗಳಲ್ಲಿ ಮೂಡುತ್ತಿರುವಾಗಲೇ ಬದಿಯಲ್ಲಿ ಇನ್ನೊಂದು ಮುಖ. ಅರೇ ಏನಿದು... ಮಂಜು... ಮಂಜಾಗಿದೆ. ಆಂ ನೀನು ? ಎಲ್ಲಿಂದ ಬಂದಿ ? ಅಸ್ಪಷ್ಟ ಮುಖ ತಿಳಿಯಾಯಿತು...

'ಬಾರವ್ವ, ಸಾವಕಾಶ ಬಂದು ಆ ಕುರ್ಚಿ ಮ್ಯಾಲೆ ಕೂಡ್ರು' ಅಯ್ಯನವರು ಹೇಳಿದರು. ಮುತ್ತಿನ ಬಣ್ಣದ ಕೆಂಪಂಚಿನ ಜರಿ ಸೀರೆಯುಟ್ಟ ಸುಗಂಧವತಿಯೊಡನೆ ಕಿರುಗೆಜ್ಜೆಗಳ ಕಿಣಿಕಿಣಿ ನಾದ ಹತ್ತಿರ ಬಂದಿತು.

'ನಿನ್ನ ಹೆಸರ ಏನವಾ' ಅಪ್ಪ ಕೇಳಿದರು.

'ಮೀನಾಕ್ಷಿ,' ಕಂಪಿಸುವ ಮಧುರವಾದ ದನಿ.

'ಏನೇನ ಕಲಿತೀಯವಾ' ಅಡಿಗೆ, ಹಾಡು, ಕಸೂತಿ ಎನ್ನುವ ಉತ್ತರ ಕೇಳುವ ಆಸೆಯಿಂದ ಅವ್ವ ಕೇಳಿದಳು.

'ಬಿ. ಕಾಂ. ಸೆಕೆಂಡ್ ಕ್ಲಾಸ ಪಾಸಾಗೇನ್ರಿ.'

'ಎಂ. ಕಾಂ. ಯಾಕ ಓದಲಿಲ್ರಿ' ಅಣ್ಣ ಕೇಳಿದ.

'ಆಕಿ ಏನ ನೌಕರಿ ಮಾಡಬೇಕಾಗೇದ ಬಿಡ್ರಿ. ಸಾಕಂತ ನಾನs ಬಿಡಿಸಿದೆ' ಅವಳ ಅಪ್ಪ ಹೇಳಿದರು. 'ಒಂದಿಷ್ಟು ಕನಡಾ, ಇಂಗ್ಲೀಷ್ ಓದಿ ತೋರಿಸವಾ ತಂಗೀ.'

ಹತ್ತಿರದವರಿಗೂ ಕೇಳಿಸದ ಗುನುಗುನು ದನಿ. 'ಸಾಕು ಬಿಡವಾ. ಅಕ್ಕಾ ಅವರ ಕುಂಕುಮಾ ಹಚ್ಚಿ ಉಡಿ ತುಂಬರಿ. ಹಿರೇರಿಗೆ ನಮಸ್ಕಾರ ಮಾಡಿ ಒಳಗ ಹೋಗವಾ' ಅಯ್ಯನವರ ಅಪ್ಪಣೆ.

ಆದರೆ ಅವಳು ಒಳಗೆ ಹೋಗಲಿಲ್ಲ. ನನ್ನ ಮಗ್ಗುಲಲ್ಲೇ ಕುಳಿತು ಬಿಟ್ಟಿದ್ದಳು, ಮದುವೆಯ ಮಂಟಪದಲ್ಲಿ.

'ಸೊಂಯ್, ಸೊಂಯ್' ಸಿಗರೇಟು ಹಚ್ಚುತ್ತಿದ್ದ ಶಶಿಧರ ಕಾರು ಬದಿಗೆ ಸರಿಸಿ ನಿಲ್ಲಿಸಿ ಕಣ್ಣು ಮುಚ್ಚಿ ಸೀಟಿಗೆ ಒರಗಿದ...

ಪಟ್ಟನೆ ಸಿಗರೇಟು ಹಾರಿ ಹೊರಗೆ ಬಿತ್ತು. ಮೀನಾಕ್ಷಿ ಕಿತ್ತು ಎಸೆದಿದ್ದಳು. 'ಎಷ್ಟ ಸಾರೆ ಹೇಳಬೇಕ ನಿಮಗ. ಸೇದೂದು ಆರೋಗ್ಯಕ್ಕ ಛೊಲೋ ಅಲ್ಲಾ ಅಂತ.'

'ಹಾಂಗ ನಾ ಭಾಳ ಸೇದೂದಿಲ್ಲ ಮೀನೂ. ಯಾವಾಗರೆ ಬ್ಯಾಸರ ಆದಾಗ ಒಂದs ಸೇದ್ತೇನಿ.'

'ಅದನ್ನೆಲ್ಲಾ ನಾ ನಂಬೂದಿಲ್ಲ, ಸಿಗರೇಟ ಬದ್ಲಿ ಒಂದ ಲೋಟಾ ಹಾಲು ಕುಡೀರಿ, ಜೂಸ ಕುಡೀರಿ. ನಿಮ್ಮ ಒಳ್ಳೇದಕ್ಕ ಹೇಳ್ತೇನಿ.'

'ಅಲ್ಲಾ ಮೀನೂ ಇಷ್ಟ ಗಳಿಸಿ ತರ್ತೇನಿ. ನನ್ನ ಸಂತೋಷಕ್ಕ ಒಂದ ಸಿಗರೇಟು, ಒಂದ ಪೆಗ್ ವ್ಹಿಸ್ಕಿ, ಅಷ್ಟೂ ಸ್ವಾತಂತ್ರ್ಯ ಇಲ್ಲs ನನಗ, ಹಿಂಗ ಯಾಕ ಕಾಡತೀ ನನ್ನ.'

'ಯಾಕ ಅಂದರ ಈಗ ನೀವು ಒಬ್ಬರs ಇಲ್ಲಾ. ಮನೀ, ಹೇಣ್ತಿ, ಮಕ್ಕಳು ಎಲ್ಲಾ ಜವಾಬ್ದಾರಿ ನಿಮ್ಮ ಮ್ಯಾಲೆ ಅದ. ನೀವು ಅಡ್ಡದಾರಿ ಹಿಡೀದಾಂಗ ನೋಡಿಕೊಳ್ಳೂದು ನನ್ನ ಕರ್ತವ್ಯ. ನನಗೂ ಎಷ್ಟೋ ಸಾರೆ ಬ್ಯಾಸರ ಆಗತದ ನಾ ಏನ ನಿಮ್ಹಾಂಗ ಸೇದತೀನs ಕುಡೀತೀನs.'

ಅವಳ ಕಪಾಳಕ್ಕೊಂದು ಬಿಗಿಯಲು ಎತ್ತಿದ ಕೈಯಿಂದ ತಾನೇ ಹೊಡೆದುಕೊಳ್ಳಬೇಕೆನ್ನಿಸಿತ್ತು...

ತುಟಿ ಚುರುಗುಟ್ಟಿತು. ಆ ದಿನದ ಎಂಟನೆಯ ಸಿಗರೇಟು ಬೀಸಾಕಿ ಕಾರು ಬಿಟ್ಟ.

* * * *

ಚಂದ್ರಪ್ಪ ಊಟಕ್ಕೆ ಕರೆದರೂ ಏಳದೆ ಶಶಿಧರ ಡ್ರಿಂಕ್ಸ್ ತಯಾರಿಸಿಕೊಂಡು ಬಂದು ಟಿ. ವಿ. ಮುಂದಿನ ಸೋಫಾದಲ್ಲಿ ಆಸೀನನಾದ. 'ಅವ್ವಾರು ತೀರಿಕೊಂಡ ಮ್ಯಾಲೆ ಎಷ್ಟು ಬದಲ ಆಗ್ಯಾರ ಸಾಹೇಬ್ರು. ಮನಸ್ಸಿಗೆ ಭಾಳ ಹಚಿಕೊಂಡಾರ, ಈ ಸಾರೆ ಸೂಟಿಗೆ ವಿನೋದಣ್ಣಾರು ಬಂದಾಗ ಹೇಳ್ಬೇಕು' ಚಂದ್ರಪ್ಪ ಊಟದ ತಾಟು ಮೇಜಿನ ಮೇಲೆ ಇರಿಸಿ ಮಲಗಲು ಹೊರಟು ಹೋದ. ಟಿ. ವಿ. ತನ್ನಷ್ಟಕ್ಕೆ ಹಾಡುತ್ತಿತ್ತು, ಕುಣಿಯುತ್ತಿತ್ತು, ಅತ್ತ ಲಕ್ಷ್ಯವಿಲ್ಲದ ಶಶಿಧರನ ದೃಷ್ಟಿ ತಿಳಿಬಣ್ಣದ ದ್ರವದಲ್ಲಿ ನಟ್ಟಿತ್ತು...

ಆ ರಾತ್ರಿ ಅಪರೂಪಕ್ಕೆ ಮೀನಾಕ್ಷಿಯ ಪ್ರೀತಿ ಉಕ್ಕಿ ಬಂದಿತ್ತು. ತಾನೂ ಅವಳೊಡನೆ ಖುಷಿ ಹಂಚಿಕೊಳ್ಳಬಯಸಿದ್ದ. ಮುದ್ದಿಸಲೆಂದು ಮುಂದೆ ಬಂದವಳು ಹಿಂದೆ ಜಿಗಿದು ಚೀರಿದಳು.

'ಸೆರೆ ಕುಡದು ಬಂದೀರಿ ಹೌದಲ್ಲೋ. ನನಮ್ಯಾಲೆ ಆಣೀ ಮಾಡಿಸಿಕೊಂಡೀನಿ ಕುಡೀಬ್ಯಾಡ್ರಿ ಅಂತ. ನಾ ಸತ್ತರೂ ನಿಮಗೇನ ಚಿಂತೆ ಇಲ್ಲ. ಮತ್ತೊಬ್ಬ ಹೇಣ್ತಿ ಸಿಗತಾಳ. ನೀವು ಮನಸ್ಯಾರಲ್ಲ ಕಟುಕರು.'

ಇವತ್ತ ನನಗ ಪ್ರಮೋಶನ್ ಸಿಕ್ಕಿದ ಮೀನೂ. ಆಫೀಸಿನವರಿಗೆ ಪಾರ್ಟಿ ಕೊಡಬೇಕಾತು. ಕಂಪನೀಗೆ ಅಂತ ನಾನೂ ಸ್ವಲ್ಪ ತೊಗೊಂಡೆ. ನೀ ಬ್ಯಾಡ ಅಂದಾಗ ಬಿಟ್ಟೇನಿ, ನಾ ಏನ ದಿನಾ ಕುಡೀತೀನೇನು ?'

'ಹಾಂ ಹಾಂ, ನೀವೇನ ನೆವಾ ಹೇಳೂದು ಬ್ಯಾಡಾ. ಒಂದು ದಿವಸ ಅಂತ ಹೇಳೀ ಸುರು ಆಗ್ತದ. ಆ ಮ್ಯಾಲೆ ಚಟಕ್ಕ ಬೀಳತದ. ನನಗೆಲ್ಲಾ ಗೊತ್ತದ ಗಂಡಸರ ಗುಣಾನs ಹಿಂಗ. ಇವತ್ತ ಸಿಗರೇಟು, ನಾಳೆ ಸೆರೆ, ನಾಡದು ಹೆಂಗಸು ಅಂತ. ದುಶ್ಚಟಾ ಬಂದರ ಎಲ್ಲಾ ಕೂಡೇ ಬರ್ತಾವ. ನನ್ನ ಸ್ವಾದ-ರತ್ತಿ ಸಂಸಾರ ಹಿಂಗs ಹಾಳಾತು. ನೀವು ಕುಡೀತೀರಿ ಅಂತ ಗೊತ್ತಿದ್ದರ ನಾ ಈ ಮದುವೀಗೆ ಒಪ್ಪತಿದ್ದಿಲ್ಲ. ನಿಮಗೇನ ಗೊತ್ತದ ನಾವು ಹೆಂಗಸರು ನಮ್ಮದೆಲ್ಲಾ– ಜೀವಾ ಸುದ್ದಾ ಒತ್ತೀ ಇಟ್ಟು ನಿಮ್ಮ ಸಲುವಾಗಿ ಬದಕತೇವಿ. ನಿಮಗ ಅದರ ಕಿಮ್ಮತ್ತಿಲ್ಲಾ. ನನ್ನ ಮಾತು ಅಂದರ ಕಸಕ್ಕಿಂತ ಕಡೀ ನಿಮಗ.'

'ಮೀನೂ ಪ್ಲೀಜ, ಜೋರಾಗಿ ಒದರಬ್ಯಾಡಾ, ಮೀನೂ.'

'ಯಾಕ ನನಗೇನ ಯಾರ ಹೆದರಿಕಿ. ನಿಮ್ಮ ಕಲ್ಯಾಣಗುಣಾ ಗೊತ್ತಾಗ್ಲಿ ಎಲ್ಲಾರಿಗೂ.'

ಅವಳ ಚೀರಾಟಕ್ಕೆ ಅವ್ವ, ಮಕ್ಕಳು ಎದ್ದು ಬಂದರು. ಅವ್ವ, ನಾನು ಎಷ್ಟು ಸಮಾಧಾನ ಮಾಡಿದರೂ ಕೇಳದೆ ಮಾವನಿಗೆ ಫೋನ ಮಾಡಿದಳು. ಅವರು ಮರುದಿನವೇ ಊರಿಂದ ಓಡೋಡಿ ಬಂದರು. ಏನೋ ದೊಡ್ಡ ಅನಾಹುತವಾದಂತೆ, ಅವರ ಮಗಳನ್ನು ಹರಿದು ತಿನ್ನುವ ರಾಕ್ಷಸನು ನಾನು ಎನ್ನುವಂತೆ ನನಗೇ ಉಪದೇಶ ಮಾಡಿದರು. ಹೀಗಾದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ ಎನ್ನುವ ಬೆದರಿಕೆಯನ್ನೂ ಹಾಕಿದರು. ತಂದೆಯ ಮುಂದೆ ಸಂಸಾರದ ಮಾನವನ್ನೆಲ್ಲ ಜಾಲಾಡಿದಳು.

ನನ್ನ ಸಣ್ಣ ಸಣ್ಣ ಆಸೆಗಳನ್ನು ಕತ್ತರಿಸಿ ಹಾಕಿ ಸಾಧ್ವಿ ಶಿರೋಮಣಿಯಂತೆ ನಾಟಕವಾಡುವ ಮೀನಾಕ್ಷಿಯನ್ನು ಒಂದೊಂದು ರಾತ್ರಿ ಕುತ್ತಿಗೆ ಹಿಚುಕಿ ಕೊಂದುಬಿಡಲೇ ಎನ್ನುವಷ್ಟು ಸಿಟ್ಟು ಬರುತ್ತಿತ್ತು. ಹಾಸಿಗೆಯಲ್ಲಿ ಅವಳು ಆಡುವ ಆಟ ತನ್ನನ್ನು ಹುಚ್ಚನನ್ನಾಗಿಸುತ್ತಿತ್ತು. ತಾನು ಆಸೆಪಟ್ಟು ಕೇಳಿದಾಗ ಅವಳು ಎಂದೂ ಒಪ್ಪಿಕೊಂಡವಳಲ್ಲ. ಅವಳ ಇಷ್ಟಕ್ಕೆ ಮಾತ್ರ ತಾನು ಬಾಗಲೇಬೇಕು. ಇಲ್ಲವೆಂದರೆ ತನ್ನ ಮಾನ ಮೂರು ಕಾಸಿಗೆ ಹರಾಜಾಗೋದು. ಇದನ್ನೆಲ್ಲಾ ಅವ್ವನ ಮುಂದೆ ತೋಡಿಕೊಳ್ಳಲಾ, ಮಾವನ ಹತ್ತಿರ ಹೇಳಲಾ ? ಸಂಕೋಚದ ಮುದ್ದೆ ನಾನು. ಮಕ್ಕಳಿಗಾಗಿ, ಮರ್ಯಾದೆಗಾಗಿ ತಗ್ಗಿದೆ. ಪ್ರೀತಿಸುವ ಹೆಂಡತಿ, ಮಗ-ಮಗಳು, ಅಧಿಕಾರ, ಬಂಗ್ಲೆ, ಕಾರು- ನನ್ನದು ಆದರ್ಶ ಸಂಸಾರ ನೋಡುವವರ ಕಣ್ಣಿಗೆ. ನನಗೆ ?

ಛೇ ಛೇ ಇಷ್ಟೊಂದು ತೃಪ್ತಿ, ಸಂತೋಷ ಸಿಕ್ಕಾಗ ಮೀನಾಕ್ಷಿ ಯಾಕಾದರೂ ನೆನಪಾದಳೋ- ಈ ನೆನಪುಗಳಿಂದ ಮನಸ್ಸು ಕಹಿ ಮಾಡಿಕೊಳ್ಳೋದೇ ಬೇಡ. ಗೋಡೆಯ ಮೇಲೆ ನಗುತ್ತಿದ್ದ ಮೀನಾಕ್ಷಿಯ ಮುಖಕ್ಕೆ ಕೈಯಲ್ಲಿದ್ದ ಗ್ಲಾಸ್ ಬೀಸಿ ಒಗೆಯುವುದನ್ನು ಕಷ್ಟಪಟ್ಟು ತಡೆದುಕೊಂಡ.

ಮೀನಾಕ್ಷಿ ಕಾಣದಂತೆ ಬೆಡ್‌ರೂಮಿಗೆ ಹೋಗಿ ಬಿದ್ದುಕೊಂಡರೂ ನಿದ್ದೆ ಹತ್ತಿರ ಸುಳಿಯಲಿಲ್ಲ. ಮತ್ತೆ ಮತ್ತೆ ಆ ಹೆಂಗಸಿನ ನೆನಪು. ಬೇರೆ ಯಾವ ಹೆಣ್ಣೂ ಇಷ್ಟು ಕಾಡಿರಲಿಲ್ಲ. ತಾನು ಪಟ್ಟ ಸುಖಕ್ಕೆ ಪರ್ಸನ್ನೇ ಅವಳತ್ತ ಚಾಚಿದ್ದ. ವಿಚಿತ್ರ ಹೆಂಗಸು! ಅದನ್ನು ಮುಟ್ಟದೆ 'ಐನೂರು ರೂಪಾಯಿ ಕೊಡ್ರಿ ಸಾಕು' ಎಂದಿದ್ದಳು. ಅವಳು ಏನು ಕೇಳಿದ್ದರೂ ಇಲ್ಲವೆನ್ನದ ಸ್ಥಿತಿಯಲ್ಲಿದ್ದೆ ತಾನು. ತನ್ನ ಇಚ್ಛೆ ಅವಳಿಗೆ ತಿಳಿಯಲೆಂದೇ 'ಪ್ಲೀಜ, ಒಂದು ನಿಮಿಷ ನಿಲ್ಲಿ' ಎಂದೆ. ಸುಮ್ಮನೆ ತಿರುಗಿದಳು. ದುಂಡು ಮುಖ, ತುಂಬಿದ ಕೆನ್ನೆ, ಮೊಂಡ ಮೂಗು, ಕಣ್ಣುಗಳು ಕೆಳಗೆ ಬಾಗಿದ್ದವು. ಸಾಧಾರಣ ರೂಪ. ಮೀನಾಕ್ಷಿಯಂತೆ ಸುಂದರಿಯಲ್ಲ. ಹೆಜ್ಜೆ ಮುಂದಿಟ್ಟಳು.

"ಇಲ್ನೋಡ್ರಿ ನಾವಿಬ್ಬರೂ ಅಪರಿಚಿತರು. ನನ್ನ ಹೆಂಡತಿ ತೀರಿಕೊಂಡು ನಾಲ್ಕು ವರ್ಷಾದ್ವು. ಆಗಾಗ ಇಲ್ಲಿಗೆ ಬರ್ತೀನಿ. ನನ್ನ ತಪ್ಪು ತಿಳೀಬ್ಯಾಡ್ರಿ. ನಾನು ಕಾಮುಕ ಅಲ್ಲ. ನೀವು ಮತ್ತ ಎಂದ ಬರ್ತೀರಿ ಇಲ್ಲಿಗೆ ?"

'ನೀವು ಕಾಮುಕ ಅಲ್ಲ ಅನ್ನೂದು ನನಗೂ ಗೊತ್ತಾತು. ಆದರೆ ಹಣದ ಅವಶ್ಯಕತೆ ಇದ್ದಾಗ ಅಷ್ಟೇs ನಾ ಇಲ್ಲಿಗೆ ಬರೂವಾಕಿ. ಬೇರೆಯವರಿಗೆ ಬೇಕಾದಾಗ ಅಲ್ಲ ಕ್ಷಮಿಸ್ರಿ ಬರ್ತೀನಿ.' ಹೇಗೆ ಬಂದಿದ್ದಳೋ ಎಲ್ಲಿಂದ ಬಂದಿದ್ದಳೋ ಹಾಗೇ ಹೊರಟು ಹೋಗಿದ್ದಳು ಒಬ್ಬಳೇ. ಇಂಥ ಹೊತ್ತಿನಲ್ಲಿ ತಾನು ಅವಳಿಗೆ ಲಿಫ್ಟ್ ಕೊಡಬಹುದಿತ್ತು. ಆದರೆ ಅವಳು ಮಾತಿಗೆ ಅವಕಾಶವನ್ನೇ ಕೊಟ್ಟಿರಲಿಲ್ಲ. ಅವಳಿಗೆ ಅಷ್ಟೊಂದು ಹಣದ ಅವಶ್ಯಕತೆ ಇದೆಯೇ ? ಆ ಹಣದಿಂದ ಅವಳೇನು ಮಾಡಬಹುದು ? ಎಲ್ಲ ಹೆಂಗಸರ ಹಾಗೆ ಭಾರಿ ಜರಿ ಸೀರಿ, ಒಂದಿಷ್ಟು ಬಂಗಾರ ಕೊಳ್ಳಬಹುದು. ಮಧ್ಯವಯಸ್ಸು ಮೀರಿದ್ದರೂ ಮೀನಾಕ್ಷಿ ಸೀರೆ, ಒಡವೆಗಳಿಗೆ ಎಷ್ಟು ಆಸೆಪಡುತ್ತಿದ್ದಳಲ್ಲ. ಕೊಡಿಸದಿದ್ದರೆ ಮನೆ ನರಕ... ನಿಮ್ಮಂಥವರನ್ನು ಕಟ್ಟಿಕೊಳ್ಳುವುದಕ್ಕಿಂತ ಬಾವಿಗೆ ಬಿದ್ದರೆ ಒಳ್ಳೆಯದು ಎನ್ನುತ್ತಿದ್ದಳು. ಇವಳು ಬಾವಿಗೆ ಬಿದ್ದರೆ ಒಳ್ಳೆಯದು ಎಂದು ನನಗೆ ಅನ್ನಿಸಿದ್ದಂತೂ ನಿಜ...

* * * *

ನಾಲ್ಕಾರು ತಿಂಗಳಲ್ಲಿ ಐದಾರು ಸಲ ಅವಳು 'ಹೋಟೆಲ್ ಮೇನಕಾ'ಕ್ಕೆ ಬಂದಿದ್ದರೂ ಶಶಿಧರನಿಗೆ ಇನ್ನೂ ಅಪರಿಚಿತಳೇ. ಒಂದು ಸಲ ಸಾವಿರ ಕೇಳಿದ್ದಳು. ಒಂದೂ ಮಾತನಾಡದೆ ಹಣ ಎಣಿಸಿದ್ದೆ.

ಒಂದು ಸಂಜೆ ಆಫೀಸಿನಿಂದ ಮನೆಗೆ ಬರುವಷ್ಟರಲ್ಲಿ ಶಶಿಧರನ ಅಣ್ಣ ಹಳ್ಳಿಯಿಂದ ಬಂದಿದ್ದ. ಒಂಟಿಯಾಗಿದ್ದ ಶಶಿಧರನಿಗೆ ತುಂಬ ಸಂತೋಷ.

'ಶಶೀ, ನನ್ನ ಗೆಳೆಯಾ ರಾಮನಾಥನ ಮಗಾ ಶಿವನಾಥಗ ಮೈಯಾಗ ಆರಾಮ ಇಲ್ಲಂತ. ಸೀರಿಯಸ್ ಅಂತ. ಹೋಗಿ ನೋಡಿಕೊಂಡ ಬರೂಣು ಬಾ' ಸಂಜೆ ಅಣ್ಣನೊಡನೆ ಹೋದ.

ಮನೆ ಬಾಗಿಲು ತೆಗೆದು 'ಬರ್ರಿ' ಎಂದವಳನ್ನ ನೋಡಿ ಬೆಚ್ಚಿದ. ಕಾಲು ನೆಲದಲ್ಲಿ ಹೂತು, ಮೈ ಬೆವರಿ, ನಾಲಿಗೆ ಒಣಗಿ, ಕಣ್ಣಿಗೆ ಕತ್ತಲು ಬಂದು ತಲೆಸುತ್ತುವಂತೆ ಅನಿಸಿ ಗೋಡೆಗೆ ಒರಗಿ ನಿಂತ.

'ಬಾರೋ ಒಳಗ. ಅಲ್ಲ್ಯಾಕ ನಿಂತಿ ಕಂಬದಾಂಗ. ಇಕೀ ಶಿವನಾಥನ ಹೆಂಡತಿ ಉಮಾ. ಇಂವಾ ನನ್ನ ತಮ್ಮ ಶಶಿಧರ. ಇಲ್ಲೇ ಪ್ರೈವೇಟ್ ಕಂಪನೀಗೆ ದೊಡ್ಡ ಆಫೀಸರ ಆಗಿ ಬಂದಾನ. ಹ್ಯಾಂಗದಾನ ಶಿವನಾಥಾ ?'

ಚಲಿಸಿದ ಕಾಲುಗಳು ಒಳಗೆ ಹೋದಾಗ ಇನ್ನೊಂದು ಶಾಕ್ ! ಇದೇನು ಮನಶ್ಯಾನೋ ಅರಿವೀಗಂಟೋ. ಕುರುಚಲು ಗಡ್ಡ, ಒಣಗಿ ಮುರುಟಿದ ದೇಹ, ಜೀವವಿಲ್ಲದ ಕಣ್ಣುಗಳು, ದೊಡ್ಡ ಹಣೆ, ಮುಖವನ್ನೇ ಸೀಳಿ ಎದ್ದು ಬರುವ ಮೂಗು-- ಮಂಚದ ಮೇಲಿನ ದೇಹ ಚಲಿಸಿತು. ಅಣ್ಣ ಹಾಸಿಗೆಯ ಮೇಲೆ ಕೂತು ಕೈ ಹಿಡಿದುಕೊಂಡ.

'ಏನೋ ಶಿವು, ಹೆಂಗಾಗೀಯಲ್ಲೋ'. ಗಂಟಲು ಕಟ್ಟಿ ಮಾತು ನಿಂತು ಹೋಯಿತು. ಸಣ್ಣ ಹುಡುಗನೊಬ್ಬ ಶಶಿಧರ ಕೂಡ್ರಲು ಸ್ಟೂಲ ತಂದಿಟ್ಟ. ಉಮಾ ಚಹಾ ತಂದಳು. ಮುಖದಲ್ಲಿ ಮಾತಿಗೆ ನಿಲುಕದ ತೀವ್ರವಾದ ದುಃಖ, ನೋವು ಚಿಮ್ಮುವ ಕೆಂಪು ಕಣ್ಣುಗಳು, ಬಣ್ಣ ಕಳೆದುಕೊಂಡ

ಹಳೆಯ ಸೀರೆ, ಮಾಸಿದ ಬಳೆಗಳ ಕೈ ಕಪ್ಪು ಮುಂದೆ ಚಾಚಿದಾಗ ಶಶಿಧರ ಚಲನೆ ಕಳೆದುಕೊಂಡಿದ್ದ.

'ಅಮರ, ಅಂಕಲ್‌ಗೆ ಚಹಾ ಕೊಡಪ್ಪ'

'ಇಷ್ಟ ಸೀರಿಯಸ್ ಆದ್ರೂ ತಿಳಿಸಬಾರದೇನವ್ವ ಉಮಾ. ರಾಮನಾಥ ಸತ್ತಮ್ಯಾಲೆ ನಾವೂ ದೂರ ಆದಿವ್ಯಾ ?'

'ಹಾಂಗ್ಯಾಕ ಅಂತೀರಿ ಕಾಕಾ. ಆಪರೇಶನ್ ಆಗಿ ಎರಡು ವರ್ಷ ಆದ್ವು, ಈಗ ಮತ್ತ ಸುರು ಆಗೇದ. ಏನೋ ಕೈಲಾದಷ್ಟು ಉಪಚಾರ ನಡದದ. ನಮ್ಮ ಮನೀ ಪರಿಸ್ಥಿತಿ ಅಂತೂ ನಿಮಗೆಲ್ಲಾ ಗೊತ್ತs ಅದ.'

'ಶಿವೂಗ ಕ್ಯಾನ್ಸರ್ ಆಗೇದ ಅಂತ ಕೇಳೇ ರಾಮು ಹೊಟ್ಟಿಬ್ಯಾನಿ ಹಚಿಕೊಂಡ. ಹಳ್ಳ್ಯಾಗಿನ ಹೊಲಾ ಮಾರಿ ನಿಮಗ ಆಪರೇಶನ್‌ಕ ರೊಕ್ಕಾ ಕೊಟ್ಟಾ. ಆದರ ಮುಂದಿಂದೆಲ್ಲಾ ನೋಡದ ತಾನs ಕಣ್ಣ ಮುಚಿಕೊಂಡ ಹೋದ.' ಅಳಲೂ ಸಾಧ್ಯವಾಗದೇ ಶಿವನಾಥ ಮಲಗಿದಲ್ಲೇ ಮುಲು ಗುಟ್ಟಿದ.

'ಮತ್ತ ಈಗ ಮನೀ ನೀನs ನಡಸತೀಯಲ್ಲವಾ. ನೌಕರಿ ಮಾಡತೀ ಯಂತ ಕೇಳಿದ್ದೆ.' ಶಶಿಧರ ಮೈಯೆಲ್ಲಾ ಕಿವಿಯಾದ.

'ಇವರ ನೌಕರಿ ಅಂತೂ ಯಾವಾಗೋ ಹೋಗೇದ ಕಾಕಾರ, ನಾನs ಒಂದ ಸಣ್ಣ ನೌಕರಿ ಹಿಡದೇನ್ರಿ. ಬಂಧು-ಬಳಗ, ಸ್ನೇಹಿತ್ರು ಯಾರಾದ್ರು ಎಷ್ಟು ದಿವಸಾ ಅಂತ ಕೊಟ್ಟ ನಡಸತಾರ್ರಿ. ಈಗಿನ ದಿನದಾಗ ತಮ್ಮ ಜೀವನಾನ ಭಾರ ಆಗಿರತದ, ಮಂದಿಗೆ ಯಾಕ ತ್ರಾಸ ಕೊಡಬೇಕ್ರಿ.'

'ತಿಳಿವಳಿಕಿ ಇದ್ದಾಕಿ ಆದೀಯವಾ. ಎದೀ ಒಡಕೊಂಡಿಲ್ಲ. ದೇವರು ನಿಮಗ ಹಿಂತಾ ಹೊತ್ತು ತರಬಾರದಾಗಿತ್ತು.'

'ನನ್ನ ಪಾಲಿಗೆ ದೇವರು ಯಾವಾಗೋ ಸತ್ತ ಹೋಗ್ಯಾನೇಳ್ರಿ. ಕಾಕಾ, ನೀವು ಬಯ್ಕರಿ. ಆದರ ಅವನ್ನ ನಂಬಿ ಜೀವನಾ ಮಾಡಾಕ ನಾ

ಏನ ಹುಟ್ಟಿ ಬಂದಿಲ್ಲ. ಬಂದದ್ದೆಲ್ಲಾ ಎದುರಿಸಬೇಕಲ್ರಿ. ಅಮರನನ್ನೂ ನೋಡಿಕೋಬೇಕ ನಾನು. ಎದೀ ಒಡಕೊಂಡರ ಹ್ಯಾಂಗ್ರಿ. ಆದರ ದಿನ ದಿನಕ ಇಷ್ಟಿಷ್ಟ ಒದ್ದಾಡಿಕೋತ ಸಾಯೂದನ್ನ ನೋಡಾಕ ಮಾತ್ರ...' ಅಲ್ಲಿಯವರೆಗೆ ತಡೆದಿದ್ದ ಪ್ರವಾಹ ಉಕ್ಕಿ ಹರಿಯಿತು.

ತನ್ನನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗದೆ ಶಶಿಧರ ತಟ್ಟನೆ ಎದ್ದು ಬಂದು ಕಾರಿನಲ್ಲಿ ಕೂತ. ಹೊಟ್ಟೆಯಲ್ಲಿ ಉರಿ, ಸಂಕಟ, ನೋವು ತಾಳದೆ ತಲೆ ಛಿದ್ರ ಛಿದ್ರವಾಗುತ್ತಿತ್ತು. ಮೈಯ ಚರ್ಮವನ್ನೆಲ್ಲ ಸುಲಿದು ಬಿಡುವಂತೆ ಬಾರುಕೋಲಿನಿಂದ ಯಾರೋ ಚಟ್‌ಚಟ್ ಬಾರಿಸುತ್ತಿದ್ದರು.

ದಾರಿಯಲ್ಲಿ ಅಣ್ಣ ಹೇಳುತ್ತಿದ್ದ. 'ನನಗಂತೂ ಭಾಳ ಕೆಟ್ಟ ಅನ್ನಿಸಿತಪಾ. ಉಮಾ ಗಟ್ಟಿ ಹೆಂಗಸು. ನನ್ನ ಹೇಣ್ತಿ ಹಂತಾಕಿ ಆಗಿದ್ದರ ಅತ್ತತ್ತು ಸಾಯ ತಿದ್ಲು. ಖರ್ಚಿಗೆ ಸಾಲದ, ಮನೀ ಸಾಮಾನು ಸುದ್ದಾ ಮಾರ್‍ಯಾಳಂತ. ಹಿಂತಾ ರೋಗ ಯಾವ ವೈರಿಗೂ ಬರಬಾರದು. ಬರೂ ಮುಂದ ನಾನು ಅಮರನ ಕೈಯ್ಯಾಗ ನೂರ ರೂಪಾಯಿ ಕೊಟ್ಟ ಬಂದೆ.'

ಕಷ್ಟಪಟ್ಟು ಕಾರು ನಡೆಸುತ್ತಿದ್ದ ಶಶಿಧರ ಬಾಯಿ ಹೊಲಿದುಕೊಂಡಿದ್ದ. ಹೇಳಲು ಬೇಕಾದಷ್ಟಿದ್ದರೂ ಶಬ್ದಗಳ ರೂಪದಲ್ಲಿ ಹೊರಬರದೆ ಒಳಗೇ ಮೈಯನ್ನು ಸುಡುತ್ತಿದ್ದವು. ತೃಪ್ತಿ, ಸುಖ ಎಂದು ಬೀಗುತ್ತಿದ್ದವ ತನ್ನ ನೀಚತನಕ್ಕೆ ಜುಗುಪ್ಸೆ ಪಟ್ಟುಕೊಳ್ಳುತ್ತಿದ್ದ. ಬರುವಾಗ ಉಮಾಳಿಗೆ ಸಮಾಧಾನದ ಒಂದು ಮಾತನ್ನೂ ಹೇಳದೆ ಓಡಿ ಬಂದ ಹೇಡಿತನಕ್ಕೆ ನಾಚಿಕೆ ಪಟ್ಟುಕೊಳ್ಳುತ್ತಿದ್ದ.

'ಶಶಿ, ಯಾವಾಗರೆ ಹೋಗಿ ಆ ಸಂಸಾರಕ್ಕ ಒಂದಿಷ್ಟು ಸಮಾಧಾನ ಹೇಳಿ ಬಾ. ರಾಮು ನನ್ನ ಪ್ರೀತಿ ಗೆಳೆಯಾ ಆಗಿದ್ದ'.

ಒಗ್ಗಾಲಿಯಾದ ಬಂಡಿಯ ಭಾರವನ್ನು ಒಬ್ಬಳೇ ಹೊತ್ತು ಎಳೆಯು ತ್ತಿರುವ ಉಮಾಳಿಗೆ ಸಮಾಧಾನದ ನಾಲ್ಕು ಮಾತು ಸಾಕೇ? ಇಂಥ ಪರಿಸ್ಥಿತಿ ಯಲ್ಲಿ ಬರೀ ಮಾತು ಸಾಕೆ? ಪ್ರಶ್ನೆಗೆ ಉತ್ತರ ಹೊಳೆಯದೆ ಶಶಿಧರ ವಿಲಿವಿಲಿ ಒದ್ದಾಡುತ್ತಿದ್ದ.

ಬಿಸಿಲಿನ ಬೇಗೆಯಿಂದ ಕಾದು ಪುಡಿಪುಡಿಯಾಗುತ್ತಿದ್ದ ಮಣ್ಣಿನ ಮೇಲೆ ಹದವಾಗಿ ಹನಿ ಹನಿ ಮಳೆ ಬಿದ್ದು ಕಂಪು ಸೂಸುತ್ತ ಹೂವಿನಂತೆ ಅರಳಿದ ಮನಸ್ಸು– ಈಗ ಬಿರುಸಾದ ಮಳೆಗಾಳಿ ಬೀಸಿ ಚಳಿಗೆ ಗಡಗಡ ನಡುಗಿ ರಕ್ತ ಹೆಪ್ಪುಗಟ್ಟಿ ಮುದ್ದೆಯಾಗಿ ಮೂಲೆಗೆ ಬಿದ್ದಿತ್ತು.

ಬುಟ್ಟಿ ತುಂಬ ಹಣ್ಣು ಹೂವು ಬಿಸ್ಕೀಟು ಹಿಡಿದು ಶಶಿಧರ ಮತ್ತೊಂದು ದಿನ ಆ ಮನೆಗೆ ಹೋದ ಗಟ್ಟಿ ಮನಸ್ಸು ಮಾಡಿ. ಹಾಸಿಗೆ ಹತ್ತಿರ ಕುಳಿತು ನಿರ್ಜೀವಗೊಳ್ಳುತ್ತಿದ್ದ ಕೈಗಳನ್ನು ಹಿಡಿದುಕೊಂಡ.

'ಶಶಿಧರ, ನನಗ ಈಗ ಸಾವಿನ ಬಗ್ಗೆ ಎಷ್ಟೂ ಹೆದರಿಕೆ ಇಲ್ಲಾ. ಆದಷ್ಟು ಲಗೂನ ಸಾವು ಬರಲಿ ಅಂತೇನಿ. ಅದರಿಂದ ಸ್ವಲ್ಪ ಆದರೂ ಉಮಾನ ತ್ರಾಸ ಕಡಿಮಿ ಆದೀತು ಅಂತ' ತುಂಬಾ ಕಷ್ಟಪಟ್ಟು ಹೇಳಿದ ಶಿವನಾಥ. ತಲೆ ಕೂದಲೆಲ್ಲ ಉದುರಿ ಇನ್ನೂ ವಿಕಾರವಾಗಿ ಕಾಣುತ್ತಿದ್ದ.

'ಹಿಂಗ ಮಾತಾಡಿ ಉಮಾ ಅವರ ಮನಸ್ಸಿಗೆ ನೋವು ಮಾಡಬ್ಯಾಡ್ರಿ ಶಿವು'

'ಜೀವನದಾಗ ನಾ ಆಕೀಗೆ ಏನೂ ಸುಖಾ ಕೊಡಲಿಲ್ಲ. ಬರೇ ಗೋಳು. ಈಗ ಆಕೀಯಿಂದ ನಾ ಇನ್ನೂ ಬದಿಕೇನಿ ಅನ್ನೂದು ಗೊತ್ತಿದ್ದರೂ ಈ ಹುಚ್ಚು ಮನಸ್ಸು ನಾ ಸತ್ತ ಮ್ಯಾಲೆ ಇವರ ಗತಿ ಏನು ಅಂತ ಚಿಂತೀ ಮಾಡ್ತದ ನೋಡ್ರಿ' ಬತ್ತಿದ ಕಣ್ಣುಗಳಿಂದ ಸೆಲೆ ಚಿಮ್ಮಿತು. ಶಿವನಾಥನ ಮುಖ, ತಲೆ, ಕೈ ಸವರುತ್ತಿದ್ದ ಶಶಿಧರನಿಗೆ ಅಡಿಗೆ ಮನೆಯಿಂದ ಕ್ಷೀಣವಾಗಿ ಬಿಕ್ಕುವ ದನಿ ಕೇಳುತ್ತಿತ್ತು. ಈ ಅಸಹಾಯಕತೆಯೇ ಅವಳನ್ನು ಹೋಟೆಲ್‌ಗೆ ಎಳೆದು ತಂದಿತ್ತು. ಅವಳು ಕೆಲಸ ಮಾಡುವ ಫ್ಯಾಕ್ಟರಿ ಮ್ಯಾನೇಜರನೇ ಅವಳನ್ನು ಮೊದಲ ಸಲ ಅಲ್ಲಿಗೆ ಕರೆ ತಂದಿದ್ದ. ಮುಳುಗಿ ಹೋಗುತ್ತಿರುವ ಸಂಸಾರ ಕ್ಕಾಗಿ ಹಿಂತಿರುಗಿ ಬಾರದ ಹಾಗೆ ಉಮಾ ಮುಂದಿನ ಹೆಜ್ಜೆ ಇಟ್ಟಿದ್ದಳು.

'ಈ ಶನಿವಾರ ರಾತ್ರಿ ಅಲ್ಲಿಗೆ ಬರ್ರಿ. ಅವರ ಕಿಮೊಥೆರಪಿಗೆ ನನಗ ರೊಕ್ಕ ಬೇಕು'. ಕಳಿಸಲು ಬಂದ ಉಮಾ ಹೇಳಿದಳು. ಶಶಿಧರ ಆರ್ತನಾಗಿ

ಅವಳತ್ತ ನೋಡಿದ. ಆದರೆ ದಾನಕ್ಕೆ ಕೈ ಒಡ್ಡಲು ತಾನು ಸಿದ್ಧಳಿಲ್ಲ ಎಂದು ಖಂಡಿತವಾಗಿ ಹೇಳಿದಳು ಉಮಾ–

–ಕೊನೆಗೊಂದು ದಿನ ಬಂದಿತು ಉಮಾಳಿಂದ ಚೀಟಿ. 'ಶಿವನಾಥ ತೀರಿಕೊಂಡ್ರು. ದಯಮಾಡಿ ಆಸ್ಪತ್ರೆಗೆ ಬರ್ರಿ'. ಶಶಿಧರ ಹುಡುಗನ ಜೊತೆ ಹೋಗಿ ಅಂತ್ಯಕ್ರಿಯೆಯು ಎಲ್ಲ ವ್ಯವಸ್ಥೆ ಮಾಡಿ ಬಂದ. ಉಮಾಳಿಗೆ ಸಮಾಧಾನದ ಎರಡು ಮಾತು ಹೇಳಬೇಕೆಂದರೆ ಅವಳು ಅಳುತ್ತಿರಲಿಲ್ಲ.

ಮುಂದೊಂದು ದಿನ–

'ಯಾಕ ? ಲೈಟ ಹೋಗ್ಯಾವೇನು ? ದೀಪಾ ಹಚ್ಚಿಲ್ಲಲ್ಲಾ ? ಅಮರ ಎಲ್ಲ್ಯದಾನ ?' ಕತ್ತಲಲ್ಲಿ ಗೋಡೆಗೊರಗಿ ಕುಳಿತ ಉಮಾಳನ್ನು ಕೇಳಿದ ಶಶಿಧರ.

'ಅಮರ ಆಡಲಿಕ್ಕೆ ಹೋಗ್ಯಾನ' ಮೇಣಬತ್ತಿ ಹಚ್ಚುತ್ತ ಮುಂದುವರಿಸಿದಳು. 'ಕರೆಂಟ್ ಬಿಲ್ ತುಂಬಿಲ್ಲ. ಕೆ. ಇ. ಬಿ ಯವರು ಕತ್ತರಿಸಿ ಹೋಗ್ಯಾರ. ಅವರು ತೀರಿಕೊಂಡಾಗಿಂದ ನಾ ಕೆಲಸಕ್ಕೂ ಹೋಗಿಲ್ಲ. ಒಂದ ತಿಂಗಳು ರಜಾ ಬೇಕು ಅಂದೆ. ಕೆಲಸದಿಂದ ತಗದ ಹಾಕಿ ಬಿಟ್ಟಾರ' ಮಂಜಿನಂತೆ ಕೊರೆಯುವ ದನಿಯಲ್ಲಿ ಮತ್ತೆ ಹೇಳಿದಳು.

'ನನಗೊಂದು ಉಪಕಾರಾ ಮಾಡ್ತೀರೇನು'.

'ಏನ ಹೇಳ ಉಮಾ, ಏನು ಮಾಡ್ಬೇಕು'.

'ನಿಮ್ಮ ಆಫೀಸಿನ್ಯಾಗ ನನಗ ಒಂದ ಸಣ್ಣ ನೌಕರಿ ಕೊಡಸರಿ. ನಾ ಗ್ರ್ಯಾಜುಯೇಟ್ ಅಲ್ಲಾ. ನಮ್ಮಿಬ್ಬರ ಹೊಟ್ಟಿ ತುಂಬೂವಷ್ಟು ಪಗಾರ ಆದ್ರೂ ಸಾಕು.' ಅವಳ ದನಿಯಲ್ಲಿ ಕಂಪನವಿತ್ತು.

ಶಶಿಧರ ಎದ್ದು ಹತ್ತಿರ ಬಂದು ಅವಳ ಹೆಗಲ ಮೇಲೆ ಕೈಯಿಟ್ಟ.

'ನಾ ಹೇಳಿದ ವಿಷಯ ವಿಚಾರ ಮಾಡಿದೇನು ಉಮಾ. ನಾ ನಿನ್ನ ಮದುವಿ ಆಗ್ತೀನಿ ಅಂತ ಹೇಳಿದ್ದೆ. ಈಗ ಮತ್ತೊಮ್ಮೆ ಕೇಳ್ತೀನಿ. ನಿನಗ

ಹೊಸಾ ಬಾಳು ಕೊಡ್ತೀನಿ. ಮಕ್ಕಳು ದೊಡ್ಡವರಾಗ್ಯಾರ. ಅವರ ಜವಾಬ್ದಾರಿ ಮುಗದದ. ನಾನೂ ಒಂಟಿ. ನಿನ್ನಂತಾ ಒಬ್ಬ ಸಂಗಾತಿ ಬೇಕು. ಅವುರನ್ನ ಇಬ್ಬರೂ ಕೂಡಿ ಬೆಳಸೂಣು. ನಿನ್ನ ಸುಖ ದುಃಖದೊಳಗ ಭಾಗಿ ಆಗಲಿಕ್ಕೆ ಅವಕಾಶಾ ಕೊಡು. ಪ್ಲೀಜ ಉಮಾ, ಶಾಂತ ಆಗಿ ವಿಚಾರ ಮಾಡಿ ನನ್ನ ಮಾತು ಒಪ್ಪಿಕೋ'.

'ಶಶಿಧರ, ದಯಮಾಡಿ ತಪ್ಪು ತಿಳಕೋಬ್ಯಾಡ್ರಿ. ಮದುವೀ ಮಾತು ತಗದ ಹಾಕ್ರಿ. ನನ್ನ ಮನಸ್ಸು ಒಪ್ಪೂದಿಲ್ಲ'.

'ಯಾಕ ಉಮಾ ? ಸಮಾಜಕ್ಕ ಹೆದರತೀಯೇನು ?'

'ಹೆದರಿಕಿ ? ನನಗ ? ಈ ಸಮಾಜದ ಹೆದರಿಕಿ ಇದ್ದರ ಹೋಟೆಲ್‌ಕ ಹೋಗುವಂಥಾ ಕೆಲಸಾ ನಾ ಮಾಡತಿದ್ನೇನು ? ಯಾರ ಏನಂದರೂ ಅನ್ನಲಿ ಗಂಡನ ಸಲುವಾಗಿ ಇದು ನನ್ನ ಕರ್ತವ್ಯ ಅಂತ ಗಟ್ಟಿ ಮನಸ್ಸು ಮಾಡಿದ್ದೆ. ಆದರ ಓ.ಟಿ. ಮಾಡಲಿಕ್ಕೆ ಹೋಗ್ತಿನಿ ಅಂತ ಮನ್ಯಾಗ ಸುಳ್ಳು ಹೇಳೂ ಮುಂದ ಮಾತ್ರ ಜೀವಾ ಹಿಂಡಿ ಹೋಗತಿತ್ತು.'

'ನಿನ್ನ ಈ ಗುಣಾನ ನನಗ ಭಾಳ ಸೇರ್ತದ ಉಮಾ. ನಿನ್ನಂಥಾ ಸಂಗಾತಿ ಸಿಕ್ಕರ ನನ್ನ ಸುದೈವ ಅಂತೀನಿ. ವಿಧವಾ ವಿವಾಹಕ್ಕ ಈಗೇನ ಅಷ್ಟ ವಿರೋಧ ಇಲ್ಲಲ್ಲ. ನೀ ಯಾಕ ಒಲ್ಲೆ ಅಂತೀಯೋ ತಿಳಿವೊಲ್ಲದು ನನಗ.'

'ನನಗ ಅನಿಸಿದ್ದು ಹೇಳ್ತೀನಿ ಕೇಳ್ರಿ. ನಮ್ಮಿಬ್ಬರ ಮಕ್ಕಳ ದೃಷ್ಟಿಯಿಂದ ವಿಚಾರ ಮಾಡಿದರ ನಾವಿಬ್ಬರೂ ಈ ವಯಸ್ಸಿನೊಳಗ ಮದುವಿ ಆಗೂದು ಒಳ್ಳೇದಲ್ಲ. ಸ್ವತಂತ್ರ ಆಗಿ ನಾನು ಅಮುರನ್ನ ಬೆಳೆಸಿ ದೊಡ್ಡವನ ಮಾಡಿದೆ ಅಂದರ ನಮ್ಮಿಬ್ಬರ ನಡುವ ಆತ್ಮೀಯತೆ, ಪ್ರೀತಿ, ಗೌರವ ಉಳಿಸಿ ಕೊಂಡಿರಲಿಕ್ಕೆ ಸಾಧ್ಯ ಅದ. ಅದೇ ನಾನು ನಿಮ್ಮ ಹೆಂಡತಿ ಆದೆ ಅಂದರ ನಿಮ್ಮವಳೇ ಆಗಿಬಿಡ್ತೀನಿ. ಅಮುರಗ ಈಗ ಎಲ್ಲಾ ತಿಳೀತದ. ನಿಮ್ಮನ್ನ ಅಪ್ಪ ಅಂತ ಅಂವಾ ಒಪ್ಪದಿದ್ದರ ನಾ ಹರದು ಹಂಚಿ ಹೋಗ್ತೀನಿ. ಹಾಂಗs ನಿಮ್ಮ ಬೆಳೆದ ಮಕ್ಕಳು, ಸೊಸಿ, ಅಳಿಯರಾಗ ನಾನು ಹೊರಗಿನವಳಾಗ್ತೀನಿ.

ಇದರಿಂದ ಇಬ್ಬರಿಗೂ ಶಾಂತಿ, ಸಮಾಧಾನ ಸಿಕ್ಕೀತು ಅಂತ ನನಗ ಅನಸೂದಿಲ್ಲ. ನಾ ಹೇಳೂದರ ಬಗ್ಗೆ ನೀವೂ ವಿಚಾರ ಮಾಡ್ರಿ.'

'ನೀ ಎಷ್ಟು ಆಳವಾಗಿ ವಿಚಾರ ಮಾಡ್ತೀಯಲ್ಲ ಉಮಾ. ನಾ ಬರೇ ನನ್ನ ಒಂಟಿತನ, ನಿನ್ನ ಕಷ್ಟ ಅಷ್ಟs ನೋಡಿದ್ದೆ.'

'ನಿಮಕಿಂತ ಸಣ್ಣಾಕಿ ಆದರೂ ಈ ಜೀವನದಿಂದ ನಾ ಭಾಳಷ್ಟು ಪಾಠಾ ಕಲತೀನಿ ಶಶಿಧರ. ನಾನು ತಾಯಿ ಇಲ್ಲದ ತಬ್ಬಲಿ. ಮಲತಾಯಿ ಕೈಯಾಗ ಸಣ್ಣಾದೆ, ಹಣ್ಣಾದೆ. ರೂಪ, ವಿದ್ಯಾ, ಸಂಪತ್ತು ಏನೂ ಇಲ್ಲದ ನನ್ನ ಶಿವನಾಥ ಮದುವಿ ಆದ್ರು. ಅವರು ನನ್ನ ಪಾಲಿನ ದೇವರಾಗಿದ್ರು. ಈಗ ಅವರೂ ಇಲ್ಲ. ಹಿಂಗ ಬರೂ ಸಮಸ್ಯೆಗಳನ್ನ ಎದುರಿಸೋದು ನನಗ ರೂಢಿ ಆಗಿ ಬಿಟ್ಟದ. ಈಗ ಒಂದ ಸಮಾಧಾನ ಅಂದರ ನನಗ ಆತ್ಮೀಯರಾಗಿ ನೀವೊಬ್ಬರು ಇದ್ದೀರಿ, ನಾ ಒಂಟಿ ಅಲ್ಲಾ ಅನ್ನೋದು. ನಮ್ಮ ನಮ್ಮ ಕಷ್ಟ ಸುಖದೊಳಗ ಭಾಗಿಯಾಗೂಣು. ನಾವಿಬ್ಬರೂ ಮೊದಲಿನ ಹಾಂಗs ಇರೂಣು. ಮದುವೀ ಬಂಧನ ಬ್ಯಾಡಾ, ದಯಮಾಡಿ ನನ್ನ ಅರ್ಥಾ ಮಾಡಿಕೊಳ್ರಿ ಶಶಿ.'

ಅಳುತ್ತಿದ್ದ ಉಮಾಳ ಕಣ್ಣೀರು ಒರೆಸಿ 'ಮೊದಲಿನ ಹಾಂಗs ಇರೂಣು ಹಾಂ ಮತ್ತ' ಎಂದು ಕಣ್ಣು ಮಿಟುಕಿಸಿ ನಕ್ಕ. ಮನೆಯಲ್ಲಿದ್ದ ಕೊನೆಯ ಮೇಣಬತ್ತಿಯೂ ಆರಿ ಹೋಗಿ ಅಲ್ಲಿ ಕತ್ತಲು ತುಂಬಿಕೊಂಡರೂ ಇಬ್ಬರ ಮನಸ್ಸಿನಲ್ಲೂ ಹೊಸಬೆಳಕು ಹರಡಿಕೊಂಡಿತು.

●

ಅಪರಿಚಿತರೇ ?

ಟ್ಯಾಕ್ಸಿ ಆಸ್ಪತ್ರೆಯ ಆವರಣದಲ್ಲಿ ಬಂದು ನಿಂತೊಡನೆ ಅವಳ ಪಾದಗಳು ಒಂದೊಂದೇ ಪಾವಟಿಗೆಗಳನ್ನೇರತೊಡಗಿದವು. ಪ್ರಭು ಟ್ಯಾಕ್ಸಿ ಹಣ ಕೊಟ್ಟ-ದ್ದನ್ನು ಹೊರಳಿ ನೋಡದೆ ಮುಂದೆ ನಡೆದಳು. ಮೈ ಭಾರಕ್ಕೆ ತಕ್ಕಂತೆ ನಿಧಾನವಾಗಿ ಹೆಜ್ಜೆ ಇಡುವುದನ್ನು ಕಲಿತುಕೊಂಡಿದ್ದ ಕಾಲುಗಳು ಇಂದು ಅವಳಿಗೇ ತಿಳಿಯದಂತೆ ಅವಸರ ಮಾಡಿ ಮುಂದೆ ಓಡುತ್ತಿದ್ದವು. ಒಂದೆರಡುಸಲ ಸೀರೆ ನಿರಿಗೆ ತೊಡರಿ ಬೀಳುವಂತಾದಾಗ ಅಟ್ಟದ ಕಟಾಂಜನದ ಆಧಾರ ಸಿಕ್ಕಿತು.

ಪ್ರಭು ಫೋನಿನಲ್ಲಿ ಅವಸರದಿಂದ ಸುದ್ದಿ ಹೇಳಿದ್ದಲ್ಲದೆ ತನ್ನ ಉತ್ತರಕ್ಕೂ ಕಾಯದೆ ಟ್ಯಾಕ್ಸಿ ತಂದು ನಿಲ್ಲಿಸಿ ಬಿಟ್ಟಿದ್ದ. ತನ್ನ ಮಾರುತಿ ಈಗಲೇ ರಿಪೇರಿಗೆ ಹೋಗಬೇಕೆ ? 'ಜುಂ' ಅಂತ ಡ್ರೈವ್ ಮಾಡಿಕೊಂಡು ಬಂದು 'ನಿನಗಿಂತ ನಾ ಏನೂ ಕಡಿಮೆಯಿಲ್ಲ' ಅಂತ ತೋರಿಸಬಹುದಾಗಿತ್ತು. ನಗು ಬಂದಿತು. ಅವನು ಕಣ್ಣು ತೆರೆದು ನೋಡುವ ಸ್ಥಿತಿಯಲ್ಲಿಯೇ ಇಲ್ಲದ ಹೊತ್ತಿನಲ್ಲಿ ತಾನು ಏನು ಅನ್ನೋದನ್ನು ಅವನಿಗೆ ತೋರಿಸಿ ಹೊಟ್ಟೆ ಉರಿಸಲು ಹೊರಟಿದ್ದೇನಲ್ಲ!

ಅವನನ್ನು ಭೇಟಿಯಾಗಿ, ಮಾತನಾಡಿ ಸುಮಾರು ಹತ್ತು ವರುಷ ಕಳೆದು ಹೋದವು. ಅಲ್ಲಲ್ಲಿ ಅವನ ಫೋಟೋ ನೋಡಿ ಪ್ರಶಂಸೆ ಓದುತ್ತಿದ್ದನೇ ಹೊರತು ಇಂಥವನ ಹೆಂಡತಿ ನಾನು ಎಂದು ಹೆಮ್ಮೆ ಪಟ್ಟುಕೊಳ್ಳುವ ಕಾಲ ಕಳೆದುಹೋಗಿತ್ತು. ಗೊತ್ತಿದ್ದವರಿಗೆ ಮಾತ್ರ ಗೊತ್ತು. ಅಂಥವರ ಸಹಾನುಭೂತಿಯ ಮಾತು, ಕನಿಕರದ ನೋಟ ಸಹಿಸಲಾರದೆ ಟ್ರಾನ್ಸ್‌ಫರ್ ತೆಗೆದುಕೊಂಡು ದೂರ ಬಂದಿದ್ದೆ. ಇವತ್ತು ಇಲ್ಲಿಗೆ ಬರುವುದೋ ಬೇಡವೋ ಅನ್ನುವ ಅನುಮಾನ ತನ್ನನ್ನು ಕಾಡುತ್ತಲೇ ಇತ್ತು. ಇಲ್ಲಿಯವರೆಗೆ ಬಂದು ಮುಟ್ಟಿದ್ದೇ ಆಶ್ಚರ್ಯದ ಸಂಗತಿ.

ಒಂದು ಮಾತನ್ನೂ ಆಡದೆ ನಿರ್ಭಾವದಿಂದ ಕುಳಿತ ತನ್ನನ್ನು ನೋಡಿ ಪ್ರಭು "ಅವ್ವ ಭಾಳ ಮನಸ್ಸಿಗೆ ಹಚಿಕೊಂಡಾಳ" ಎಂದುಕೊಂಡಿರಬಹುದು. ಬರುವಾಗ ಕಾರಿನಲ್ಲಿ ತನ್ನ ಕೈ ಹಿಡಿದೇ ಕುಳಿತುಕೊಂಡಿದ್ದ. ತನ್ನ ದುಃಖವನ್ನು ಅವ್ವ ಹೊರಚಲ್ಲಿದರೆ ಮನಸ್ಸಿನ ಭಾರ ತುಸು ಕಡಿಮೆಯಾದೀತು ಎಂದು ಒಂದೆರಡು ಸಲ ಅಪ್ಪನನ್ನು ಕುರಿತು ಮಾತನಾಡಲು ಪ್ರಯತ್ನಿಸಿ ಸೋತಿದ್ದ. ತನ್ನ ಬಿಟ್ಟು ಹೊರಗಿನವರು– ಮಗ, ಮಗಳು, ಗಂಡ, ಜೀವ ಕೊಟ್ಟ ಅಪ್ಪ, ಅವ್ವನನ್ನೂ ಹಿಡಿದು– ತನ್ನ ಬಗ್ಗೆ ಎಷ್ಟು ಕಡಿಮೆ ತಿಳಿದುಕೊಂಡಿದ್ದಾರಲ್ಲ. ಅವರೆಲ್ಲರ ಬಗ್ಗೆ ನನಗೂ ಎಲ್ಲವೂ ತಿಳಿದಿಲ್ಲ, ಅದೂ ನಿಜ. ಒಬ್ಬರನ್ನೊಬ್ಬರು ತಿಳಿದುಕೊಳ್ಳಲು ಒಂದು ಜೀವಮಾನ ಸಾಲದು. ಅಪರಿಚಿತರಾಗಿಯೇ ಸೂರಿನಡಿ ಇರಲೂ ಸಾಧ್ಯ. ಸಂಸಾರ ನಡೆಸುವುದೂ ಅಸಾಧ್ಯವಲ್ಲ. ಆದಷ್ಟು ನಮಗೆ ಬೇಡವಾದುದನ್ನೇ ನಾವೆಲ್ಲ ಮಾಡುತ್ತಿರುತ್ತೇವೆ. ಈ ದೇಹದಲ್ಲಿ ಮನಸ್ಸು ಅನ್ನುವುದೇ ಒಂದು ವಿಚಿತ್ರ ವಸ್ತು. ಉಹುಂ– ಅದು ವಸ್ತುವೂ ಅಲ್ಲ. ಏನೋ ಒಂದು. ಅದಕ್ಕೆ ಬಣ್ಣವಿಲ್ಲ, ಆಕಾರವಿಲ್ಲ, ರುಚಿಯಿಲ್ಲ. ಭಾವನೆಗಳು ಮಾತ್ರ ಇವೆ. ಬುದ್ಧಿ ಭಾವನೆಗಳು ಎರಡೂ ಸಮ ಪ್ರಮಾಣ ದಲ್ಲಿ ಗಂಡು ಹೆಣ್ಣುಗಳಿಗೆ ಇದ್ದರೆ ಪ್ರಪಂಚ ಸರಳವಾಗಿ ಸುಸೂತ್ರವಾಗಿ ನಡೆಯುತ್ತಿತ್ತೇನೋ. ಆದರೆ ಅದೂ ಯಾಂತ್ರಿಕವಾಗಿದ್ದು ಬೇಸರ ಹುಟ್ಟಿಸು ತ್ತಿತ್ತು. ಹಾಗಾಗಬಾರದೆಂದೇ ಒಬ್ಬೊಬ್ಬರಲ್ಲಿ ಒಂದೊಂದು ತರ. ಬುದ್ಧಿ ಭಾವಗಳ ಗುದ್ದಾಟದ ಫಲ ಈ ಸಂಕೀರ್ಣ ಬದುಕು.

ಯೋಚನೆಯಲ್ಲಿ ಮುಳುಗಿದ್ದ ತನಗೆ ದಾರಿ ಸವೆದದ್ದೇ ತಿಳಿಯಲಿಲ್ಲ. ಪ್ರಭು ತೂಕಡಿಸುತ್ತಿದ್ದ. ತನ್ನ ಹೊಟ್ಟೆ ಹಸಿದಿತ್ತು. ಗಂಡ ಕೋಮಾದಲ್ಲಿದ್ದ ಮಾತ್ರಕ್ಕೆ ಹೆಂಡತಿ ಹೊಟ್ಟೆ ಸುಮ್ಮನಿರಬೇಕಲ್ಲ. ಸಕ್ಕರೆ ಕಾಯಿಲೆಯವಳು. ಮಧ್ಯಾಹ್ನದ ಪಥ್ಯದ ಊಟ ಕರಗಿ ಹೋಗಿತ್ತು. ಕೂಳಿಗೆ ಗತಿ ಇಲ್ಲದ ಬಡವರ ಹೊಟ್ಟೆಯ ಸಂಕಟ ತಿಳಿಯಬೇಕಾದರೆ ಇದ್ದುಳ್ಳವರಿಗೆ ಸಕ್ಕರೆ ಕಾಯಿಲೆ ಬರಬೇಕು ಎಂದು ಕಾಮ್ರೇಡ್ ಚೆನ್ನಯ್ಯ ಚೇಷ್ಟೆ ಮಾಡುತ್ತಿದ್ದ.

"ಪ್ರಭು ನನಗ ಹಸಿವಿ ಆಗೇದ "

ಅವನಿಗೆ ಆಶ್ಚರ್ಯವಾಗಿರಬಹುದು. ಒಂದು ಕ್ಷಣ ತನ್ನ ಮುಖವನ್ನು ದಿಟ್ಟಿಸಿ ನೋಡಿ ಸುಮ್ಮನಾಗಿದ್ದ. ಮುಂದೆ ದಾರಿಯಲ್ಲಿ ಸಿಕ್ಕ ಧಾಭಾದಿಂದ ತನಗೆ ಪರೋಟಾ, ಪಲ್ಯ ಕಟ್ಟಿಸಿ ತಂದು ಕೊಟ್ಟ. ತಾನು ತಿನ್ನಲಿಲ್ಲ. ಆಮೇಲೆ ಅವನು ತನ್ನ ಕೈ ಹಿಡಿದುಕೊಳ್ಳಲಿಲ್ಲ ಎನ್ನುವುದು ತಡವಾಗಿ ಗಮನಕ್ಕೆ ಬಂದಿತ್ತು. ತನ್ನದೇ ರಕ್ತ, ಮಾಂಸಗಳಿಂದ ಮೂಡಿ ಬಂದ ಮಗ ಕೊನೆ ಉಸಿರು ಎಳೆಯುತ್ತಿದ್ದ ಅಪ್ಪನಿಗೆ ಅಂಟಿಕೊಂಡಿದ್ದ. ಮನಸ್ಸಿನೊಳಗೆ ನಕ್ಕಿದ್ದೆ. ತನ್ನಲ್ಲಿಯ ಭಾವನೆಗಳು ಸತ್ತು ಹೋಗಿವೆಯೆ ?

ಝಗ್ಗನೆ ಬೆಳಕು ಹೊತ್ತಿಕೊಂಡು ಕಣ್ಣಿನಲ್ಲಿ ಕತ್ತಲು ತುಂಬಿತು. ಕಾರಿಡಾರಿನಲ್ಲಿ ನಡೆಯುತ್ತಿದ್ದಂತೆ ಆಯಾಸವೆನಿಸಿತು. ಏದುಸಿರು ಬರುತ್ತಿತ್ತು.

"ಇನ್ನೂ ಎಷ್ಟು ದೂರ ಆದ ಪ್ರಭು."

"ಆಯ್ತು ಅವ್ವಾ ಬಂದs ಬಿಟ್ಟಿತು. ಅದು ಮೂರನೆಯ ಅಂತಸ್ತು. ಇದs ಹತ್ತು ನಂಬರಿನ ಖೋಲಿ."

ಪರವಾಯಿಲ್ಲ. ಮೈ ಅರಿವು ಕಳೆದುಕೊಂಡಿದ್ದರೂ ಗಂಡ ಎಂದಿನಂತೆ ಮೇಲಿನ ಅಂತಸ್ತಿನಲ್ಲೇ ಇದ್ದಾನೆ. ಅಲ್ಲಿ ಇದ್ದ ನರ್ಸ್ ಕುರ್ಚಿ ಇಟ್ಟು ಹೊರಗೆ ಹೋದಳು.

"ಇಲ್ಲೇ ಬಾ ಅವ್ವಾ. ಅಪ್ಪನ ಸ್ಥಿತಿ ಸುಧಾರಿಸಲಿಕ್ಕೆ ಹತ್ತೇದ ಅಂತ ಸ್ಪೆಶಲ್ ವಾರ್ಡಿಗೆ ಶಿಫ್ಟ್ ಮಾಡೀವಿ ಅಂತ ಡಾಕ್ಟರರು ಹೇಳಿದ್ರು. ಕೆಳಗೆ ಕೇಳಿಕೊಂಡs ಬಂದೇನಿ. ಇಲ್ಲೇ ಕುರ್ಚಿ ಮ್ಯಾಲೆ ಕೂಡ್ರು. ಆದರ ಅಪ್ಪಗ ಇನ್ನೂ ಎಚ್ಚರ ಬಂದಿಲ್ಲ. ದಿನಾs ಸಂಜೀಮುಂದ ತಂಗಿ ಬಂದಿರ್ತಾಳ. ಇವತ್ತ ನಾಟಕದ ರಿಹರ್ಸಲ್ ಮುಗಿಸಿಕೊಂಡು ಬರಲಿಕ್ಕೆ ಸ್ವಲ್ಪ ತಡಾ ಆಗ್ತದ ಅಂತ ಶುಭಾ ಹೇಳಿದ್ಲು. ನೀ ಕೂತಿರು. ನಾ ಔಷಧ ತೊಗೊಂಡ ಬರಲಿಕ್ಕೆ ಹೋಗ್ತೀನಿ, ಹಾಂ,"

ಇಡೀ ಕೋಣೆಯನ್ನೇ ಗಂಜಿಗೆ ಹಾಕಿ ಇಸ್ತ್ರೀ ಮಾಡಿದ ಹಾಗಿತ್ತು. ಅಷ್ಟೊಂದು ಸ್ವಚ್ಛ, ಬಿಳಿ. ಮಂದ ಬೆಳಕು. ನಿಶ್ಶಬ್ದ ಕೋಣೆ. ಹತ್ತಿರ

ಕುಳಿತ ಮೇಲೆ ನೋಡಲೇಬೇಕಲ್ಲ. ಹಾಸಿಗೆಗೆ ಅಂಟಿಕೊಂಡ ಹಾಗೆ ಒಂದು ಗುಪ್ಪೆ ಅಲ್ಲಿತ್ತು. ಬಿಳಿಗೋರಿಯಿಂದ ಮುಖವಷ್ಟೇ ಹೊರಗೆ ಚಾಚಿದ ಹಾಗಿತ್ತು. ಉದುರಿದ ಕಣ್ಣರೆಪ್ಪೆ, ಸೊರಗಿದ ಮುಖದಲ್ಲಿ ಎದ್ದು ಕಾಣುವ ಮೂಗು. ತಗ್ಗಿನಲ್ಲೊಂದೊಂದು ಗೋಲಿ ಇಟ್ಟ ಹಾಗೆ ಮುಚ್ಚಿದ ಗುಡ್ಡೆಗಳು, ಬೋಳುತಲೆ. ಇವನೂ ಅವನೇನು? ಅಥವಾ ಇದು ಬೇರೆ ಯಾರ ರೂಪವೋ. ಪ್ರಭು ದಾರಿ ತಪ್ಪಿಲ್ಲ ಹೌದಲ್ಲ? ಬೇರೆ ಯಾವುದೋ ಗಂಡಸಿನ ಹತ್ತರ ಕೂಡ್ರಿಸಿ ಹೋಗಲಿಕ್ಕೆ ಪ್ರಭು ಏನ ಹುಚ್ಚ ಏನು? ಅಲ್ಲ, ಅವನೂ ಇವನು, ಮಹೇಶನ ಹೌದು. ಒಂದೂ ಒಂದು ಬೊಗಸಿ ಅಷ್ಟು ಮಿದುಳು. ಅದಕ್ಕ ಒಂದ ಸಣ್ಣ ತೂತು ಬಿದ್ದರ ಮನುಷ್ಯಾ ಇಷ್ಟ ಬದಲ ಆಗ್ತಾನ? ಇಷ್ಟು? ಇಷ್ಟ ಸಣ್ಣಾಗತಾನ? ಸೋಲತಾನ? ಆಂ ಇಷ್ಟು...

ಅಕ್ಕ, ಅತ್ತಿಗೆ, ಮದುವೆಗೆ ಬಂದ ಹೆಂಗಸರೆಲ್ಲ ನಿಂತು ನಗುತ್ತಿದ್ದಾಗ ಎರಡೆರು ಪಾವಟಿಗೆಗಳನ್ನು ಒಮ್ಮೆಗೇ ಜಿಗಿಯುತ್ತ, ಹಾರುತ್ತ-ಬೆಳ್ಳಿ ಗೆಜ್ಜೆಗಳ ಕಿಣಿಕಿಣಿನಾದ ಕಿವಿ ತುಂಬುತ್ತಿರುವಾಗ ಪರಿಮಳ ತುಂಬಿದ ಕೋಣೆಯಲ್ಲಿ ಕಾಲಿಟ್ಟ ಅನು ಉದ್ವೇಗ, ಗಾಬರಿ, ನಾಚಿಕೆ, ಏದುಸಿರು ಕಾಣದಂತೆ ಕಣ್ಣು ಮುಚ್ಚಿ ಬಾಗಿಲಿಗೊರಗಿ ನಿಂತುಬಿಟ್ಟಳು. ಸಿಗರೇಟು, ಬೆವರು, ಸುಗಂಧ ಮಿಶ್ರಣದ ಒರಟು ಕೈಗಳೆರಡು ಅವಳನ್ನು ತಬ್ಬಿಕೊಂಡವು. ತಲೆ ತಿರುಗಿತೆ? ಮೈಮೇಲಿನ ಹಿಡಿತ ಇನ್ನೂ ಬಿಗಿಯಾಯಿತು. ಅಬ್ಬ! ಏನು ಭೀಮಬಲ ಆ ತೋಳುಗಳಲ್ಲಿ! ಮೈ ಎಲುಬೆಲ್ಲ ಲಟಕ್... ಲಟಕ್.

ತೋಳು ಸವರಿಕೊಂಡಳು. ಹಾಗೇ ಕೈ ಸರಿಯುತ್ತ ಭುಜಕ್ಕೆ ಬಂದು ನಿಂತಿತು. ಅಲ್ಲೊಂದು ಸಣ್ಣ ಕಲೆ. ಮೊದಲ ರಾತ್ರಿಯ ಗುರುತು. ಮರುದಿನ ನೀರು ಎರೆಯಲು ಬಂದ ಅಕ್ಕನಿಂದ ಮುಚ್ಚಿಡಲು ಸಾಧ್ಯವಾಗಿರಲಿಲ್ಲ. ಕ್ರೀಮ್ ತಂದು ಸವರಿ ನಗುತ್ತ ಕಿವಿಯಲ್ಲಿ ಪಿಸುಗುಟ್ಟಿದ್ದಳು. "ನಿನ ಗಂಡ ಭಾಳ ಜೋರ ಆದಾರ ಅನು." ತನ್ನ ಕೆಂಪು ಕೆನ್ನೆ, ಕಿವಿ ಉತ್ತರ ಕೊಟ್ಟಿದ್ದವು. ಅದೇ ಜೋರು ತನ್ನ ಜೀವನದ ದಿಕ್ಕನ್ನು ಬದಲಿಸಿತ್ತು.

ಅವಳ ಕೈ ಹೊದಿಕೆಯೊಳಗೆ ಸೇರಿ ಹುಡುಕಿತು. ತೆಳುವಾದ ಕಟ್ಟಿಗೆಯಂಥ ನಿರ್ಜೀವ ತೋಳು. ಕೈತುಂಬ ನರಗಳು, ಎಲುಬು-ಅವನು ಹೋದಲ್ಲಿ

ಬಂದಲ್ಲಿ ಒಂದು ಮುಗುಳ್ನಗೆ, ಮಿಂಚು ನೋಟ, ಕೈಕುಲುಕು, ಹಲೋಗಳಿಗೆ ಕಾದಿದ್ದವರಲ್ಲಿ ಕಷ್ಟಪಟ್ಟು ಒಳನುಗ್ಗಿ ಅವನ ತೋಳುಗಳಲ್ಲಿ ಬಂಧಿತಳಾಗಲು ಕಾತರದಿಂದ ಕ್ಷಣಗಳನ್ನು ಎಣಿಸುತ್ತಿದ್ದವಳು ತಾನು. ಒಂದು ದಿನ–

"ಏs ಹುಡುಗೀ ನಿನ್ನ ಬಲೀಗೆ ಬಿದ್ದೆ ನಾನು" ಎಂದು ತನ್ನ ಉದ್ದ ಹೆರಳು ಕುತ್ತಿಗೆಗೆ ಸುತ್ತಿಕೊಂಡು ಕಟ್ಟಿಹಾಕಿದ್ದ. ಆ ಬಂಧನದಲ್ಲಿ ಸಂತೋಷ ಪಡುತ್ತಿದ್ದ ತನ್ನನ್ನು ಎಷ್ಟು ಹಗುರವಾಗಿ ಒಂದಿಷ್ಟು ಗುರುತೂ ಉಳಿಯ-ದಂತೆ ಬಿಚ್ಚಿಹಾಕಿ ಬಿಟ್ಟಿದ್ದ.

ಒಂದು ಸಂಜೆ ಮಹೇಶನ ದಾರಿ ಕಾಯುತ್ತಿರುವಾಗ ಅಕ್ಕನ ಮಗಳು ಅನಿತಾ ಬಂದಿದ್ದಳು. ಅವಳ ಗೆಳತಿ ಸುನೀಲಾ ಮಹೇಶನ ಸಿತಾರಾ ಕಾರ್ಯಕ್ರಮ ಕೇಳಿದಳಂತೆ. ಅವಳಿಗೂ ಕಲಿಯಬೇಕೆಂದು ಆಸೆಯಾಯಿತಂತೆ. ಕರೆದುಕೊಂಡು ಬಂದಿದ್ದಳು.

"ಅವರಿಗೆ ಕಾಲೇಜು, ಸಂಘ, ಸಂಗೀತ, ಭಾಷಣ ಅಂತ ವೇಳೇನ ಸಿಗೋದಿಲ್ಲ. ಸಿತಾರ ಯಾರಿಗೂ ಕಲಿಸೂದಿಲ್ಲ. ಇರಲಿ ಕೂತುಕೋ. ಭೆಟ್ಟಿ ಆಗೂವಂತೆ." ತನ್ನ ಮಾತು ಸುಳ್ಳಾಗಿತ್ತು. ಸುನೀಲಾಳಿಗೆ ಸಿತಾರ ಕಲಿಸಲು ಮಹೇಶ ಒಪ್ಪಿಬಿಟ್ಟಿದ್ದ. ಅಟ್ಟದ ಮೇಲಿನ ಕೋಣೆ ಏಕಾಂತಕ್ಕೆ ಸರಿಯಾದ ಜಾಗವಾಗಿತ್ತು. ಮಹೇಶ ಒಪ್ಪಿದ್ದು ಅವಳು ಕೊಡುವ ಹಣಕ್ಕಾಗಿ ಅಲ್ಲ. ಇದರ ಹಿಂದೆ ಏನೋ ಒಂದು ಇದೆ ಎನ್ನುವ ಸಂಶಯ ತನ್ನ ಮನಸ್ಸಿನಲ್ಲಿ ಬೆಳೀತಾನೇ ಇತ್ತು. ಮೊದಲು ಸುನೀಲಾ, ಆಮೇಲೆ ಗಾಯತ್ರಿ, ಅನಂತರ ಮಾಲಾ– ಛೇ ಮಾಲಾ ಮೊದಲೋ ವಿಮಲಾ ಮೊದಲೋ ತನಗೆ ನೆನಪಿಲ್ಲ. ಅಂತೂ ಒಬ್ಬೊಬ್ಬರನ್ನೂ ಅಪ್ಪಿ ಮುದ್ದಾಡಿದ ತೋಳುಗಳು ಇವೇ. ಆ ಅಪ್ಪುಗೆಯ ಮಧ್ಯೆ ತಾನು ನುಸುಳಲು ಸಾಧ್ಯವಾಗದೆ ತಾನು ಕೂಗಾಡಿದಾಗ.

"ದೊಡ್ಡ ಕನ್ನಡಿಯೊಳಗ ನಿನ್ನ ಮೈ ನೋಡಿಕೊಂಡೀಯೇನು ? ಅನು ಮೊದಲ ಹ್ಯಾಂಗಿದ್ದಿ. ಎರಡು ಮಕ್ಕಳು ಆಗೂದರೊಳಗs ಡ್ರಮ್ಮು ಆಗೀದಿ. ನೋಡು ಆ ಗಾಯತ್ರೀನ ಕಾಲೇಜಿಗೆ ಹೋಗೂ ಮಗಾ ಅದಾನಂತ ಅನಸೂದಿಲ್ಲ. ಮೈಕಟ್ಟು ಹ್ಯಾಂಗ ಇಟಕೊಂಡಾಳ."

"ಒಬ್ಬ ಹೆಂಡತಿ ಸಾಕಾಗೂದಿಲ್ಲೇನ ನಿಮಗ ? ಅಥವಾ ನನ್ನ ಸಹವಾಸನ ಸಾಕಾಗೇದೋ. ಅಂತೂ ಒಬ್ಬ ವಿಚಿತ್ರ ಮನುಷ್ಯರು ನೀವು."

ಒಂದಿಷ್ಟೂ ಹಿಂದೆ ಮುಂದೆ ನೋಡದೆ ಉತ್ತರ ಕೊಟ್ಟಿದ್ದ ಮಹೇಶ. "ಅನೂ ಈ ಟೇಬಲ್ ಮೇಲೆ ತಿನಸು ಇಟ್ಟೇಯಲ್ಲಾ. ಇದು ದೋಸೆ, ಇದು ಚಕ್ಕಲಿ, ಇದು ಜಾಮೂನು. ಒಂದೊಂದಕ್ಕೂ ಒಂದೊಂದು ಜೇರೆ ರುಚಿ. ದಿನಾ್ಕ ದೋಸೆ ತಿಂದು ತಿಂದು ವಾಕರಿಕಿ ಬಂದsದ ನನಗ. ನನಗ ಹಸಿವಿ ಹೆಚ್ಚು, ಚಪಲ ಹೆಚ್ಚು. ಎಲ್ಲಾ ಥರಾ ತಿಂದರs ನನಗ ಸುಖಾ."

"ಏನ ಸುಖಾನೋ ಮಣ್ಣೋ. ಹಿಂಗಾದರ ಮದವಿ ಅರ ಯಾಕ ಬೇಕು. ಅಂತೂ ನಿಮ್ಮ ಗುಣಾ ತಿಳದಾಂಗ ಆತು. ಸಂಸಾರ ಮಾಡಾಕ ಸುರುಮಾಡಿ ಹನ್ನೆರಡ ವರ್ಷ ಆದ್ವು. ಅಲ್ರೀ, ನಾನೂ ನಿಮ್ಮಂಗ ಬ್ಯಾರೆ ರುಚಿ ನೋಡಿದರ ?" ಮಹೇಶನ ಬಾಯಿ ಮುಚ್ಚಿದೆ ಅಂತ ಬೀಗಿದ್ದೆ. ಉಹುಂ– ನಿರ್ಲಜ್ಜ "ನಾನು ಉದಾರ ಬುದ್ಧಿಯಾಂವಾ ಅದೀನಿ ಅನೂ. ನೀನೂ ಬೇಕಾದ್ದ ಮಾಡಲಿಕ್ಕೆ ಸ್ವತಂತ್ರ ಅದೀ" ಅಂದಿದ್ದ.

ಅವನ ಜಂಭದ ಮಾತು ಕೇಳಿ ಮೈ ಉರಿದು ಹೋಗಿತ್ತು. ಹೆಣ್ಣಿಗೆ ಸ್ವಾತಂತ್ರ್ಯ ಕೊಟ್ಟರೂ ಅವಳು ಬೇಕಾದ್ದು ಮಾಡೋದಿಲ್ಲ ಅನ್ನೊ ಖಾತ್ರಿಯಿಂದಲೇ ಆ ಮಾತು ಹೇಳಿದ್ದು. ಮಾನವ ಪ್ರಾಣಿಗಳಲ್ಲಿ ಬುದ್ಧಿ ಹೇಗೆ ಎಲ್ಲರಲ್ಲಿಯೂ ಒಂದೇ ಸ್ತರದಲ್ಲಿ ಇರೋದಿಲ್ಲವೋ ಹಾಗೆ ಕಾಮವೂ ಇರೋದಿಲ್ಲ ಅನ್ನೋದು ಅವನಿಗೆ ಚೆನ್ನಾಗಿ ಗೊತ್ತು. ಅದರಲ್ಲೂ ಹನ್ನೆರಡು ವರುಷಗಳ ದಾಂಪತ್ಯ ಜೀವನದಲ್ಲಿ ತನ್ನಲ್ಲಿಯ ಕಾಮ ಆರುತ್ತ ಬಂದದ್ದನ್ನೂ ತಿಳಿದಿದ್ದ. ತನ್ನಿಂದ ಏನೂ ಸಾಧ್ಯವಿಲ್ಲವೆಂದು ನಂಬಿಬಿಟ್ಟಿದ್ದ. ಅವನ ನಂಬಿಕೆಯನ್ನು ಸುಳ್ಳು ಮಾಡಲು ತಾನೊಮ್ಮೆ ಪ್ರಯತ್ನಿಸಿದ್ದಳು. ದುರ್ಗಕ್ಕೆ ಹೋದ ಮೇಲೆ ಕ್ಲಬ್‌ನಲ್ಲಿ ಪರಿಚಯವಾದ ಮೂರ್ತಿಯೊಡನೆ ಒಂದು ರಾತ್ರಿ ಕಳೆದಿದ್ದಳು. ಅದೊಂದು ಕೆಟ್ಟ ಅನುಭವ. ಈ ತೋಳುಗಳನ್ನು ನೆನೆಯುತ್ತ ನೆನೆಯುತ್ತ–

ಗುಲಾಬಿ ಉಗುರಿನ ನೀಳ ಬೆರಳುಗಳು ಈಗ ಕಟ್ಟಿಗೆಯ ಚೂರುಗಳು. ಜಡೆ ಜಗ್ಗಿ, ಕುರುಳು ಸವರಿ, ಕೆನ್ನೆ ನೇವರಿಸಿ, ಗದ್ದ ಹಿಡಿದೆತ್ತುವ ನೀಳ ಬೆರಳುಗಳು ಸಿತಾರಿನ ಮೇಲೆ ಓಡಿದಷ್ಟೇ ಸರಾಗವಾಗಿ ತನ್ನ ದೇಹವನ್ನು ಮೀಟುತ್ತಿದ್ದವು.

ಆ ಬೆರಳುಗಳನ್ನೆತ್ತಿ ಕೆನ್ನೆಗೆ ಒತ್ತಿಕೊಂಡು ಹಾಗೇ ಹೊದಿಕೆಯ ಒಳಗೆ ಇರಿಸಿದಳು. ಮತ್ತೆ ಚಲಿಸುವವೇ ಇವು. ಉಸಿರು ಬಿಟ್ಟಳು–

ಕೈ ಗಂಟುಗಂಟಾದ ಪಾದಗಳನ್ನೀಗ ಸವರುತ್ತಿತ್ತು.

ಸಂಜೆಗತ್ತಲು ಮನೆಯಲ್ಲಿ ಇಣುಕುತ್ತಿರುವ ಹೊತ್ತಿನಲ್ಲಿ ಅವ್ವ ದೇವರ ಮುಂದೆ ದೀಪ ಹಚ್ಚಿ ಅಜ್ಜಿಗೆ ಕಾಲುಮುಟ್ಟಿ ನಮಸ್ಕಾರ ಮಾಡಿ ಅಲ್ಲಿಯೇ ಇರುವ ಅಪ್ಪನ ಪಾದಕ್ಕೂ ಹಣೆ ಹಚ್ಚುತ್ತಿದ್ದಳು. ಅಪ್ಪ ಅವಳನ್ನು ಭುಜ ತಟ್ಟಿ ಎಬ್ಬಿಸುವುದನ್ನು ನೋಡುವುದರಲ್ಲಿ ನಮಗೆ ಖುಷಿ. ಮಕ್ಕಳ ಕಣ್ಣಿಗೆ ಬೀಳುತ್ತಿದ್ದ ಅವರ ಸರಸ ಅದೊಂದೇ–

ತನ್ನ ಹುಟ್ಟುಹಬ್ಬದ ದಿನ ಅಂದು ರಜ ಹಾಕಿ ಸಂಭ್ರಮದಿಂದ ಎಲ್ಲ ಕೆಲಸ ಮುಗಿಸಿ ತಲೆಗೆ ನೀರು ಹಾಕಿಕೊಂಡು, ಹೊಸ ಸೀರೆ ಉಟ್ಟು ಕನ್ನಡಿಯ ಮುಂದೆ ನಿಂತಾಗ ಥಟ್ಟನೆ ಅವ್ವನ ನೆನಪಾಗಿತ್ತು. ಗಂಡನ ಕೋಣೆಗೆ ಹೋಗಿ ಮಂಡಿ ಊರಿ ಬಗ್ಗಿ ಪಾದ ಹಿಡಿದಿದ್ದಳು. ಮಹೇಶ ತಟ್ಟನೆ ಎದ್ದು ನಿಂತು.

“ಅನು, ನನ್ನ ಅಷ್ಟು ದೊಡ್ಡಾವನ ಮಾಡಬೇಡಾ. ನಾನು ದುರ್ಬಲ. ಕಾಮ, ಕ್ರೋಧ, ರಾಗ, ದ್ವೇಷ ಎಲ್ಲಾ ಇರೂ ಮನುಷ್ಯಾ. ನೀ ಇಷ್ಟು ಭಾವುಕ ಆಗಬೇಡಾ.” ಅಪ್ಪಿಕೊಂಡು ಪಟ ಪಟ ಮುತ್ತು ಕೊಟ್ಟಿದ್ದ.

ಕೈ ಮೈಮರೆತು ಎದೆ ಸವರುತ್ತಿತ್ತು.

ನೋವು, ನಿರಾಶೆ, ಕಷ್ಟ, ಸುಖ ಎಲ್ಲ ಹೊತ್ತಿನಲ್ಲಿ ಈ ಎದೆಯ ಹರಹಿನಲ್ಲಿ ಹೂತುಹೋದವಳು ತಾನು. ಈಗ ಇಲ್ಲೇನಿದೆ ? ಬರಿ ಎಲುಬಿನ ಗೂಡು. ಜೀವ ಇದೆಯೆ ? ಎಲ್ಲಿ ಸಪ್ಪಳ ಕೇಳವುದೇ ಇಲ್ಲ. ಇನ್ನಷ್ಟು

ಹತ್ತಿರ ಬಗ್ಗಿ ಎದೆಗೆ ಕಿವಿ ಇಟ್ಟಳು. ಗೂಡಿನಲ್ಲೊಂದು ಹಿಡಿಯಷ್ಟು ಪುಟ್ಟ ಹಕ್ಕಿ ಟುಕು ಟುಕು ಜೀವ ಹಿಡಿದು ರೆಪ್ಪೆ ಬಡಿಯುತ್ತಿದೆ. ತುಂಬಾ ಕ್ಷೀಣ ವಾಗಿದೆ ಟುಕು ಟುಕು. ನಿಂತು ನಿಂತು ಬಡಿಯುತ್ತಿದೆ. ಯಾವಾಗ ನಿಂತೇ ಹೋಗು ವುದೋ ಗೊತ್ತಿಲ್ಲ. ತಾನು ಕೇಳುತ್ತಿರುವಾಗಲೇ ನಿಂತುಬಿಟ್ಟರೆ? ಭಯವಾಯಿತು. ದುಃಖ ಉಕ್ಕಿ ಬಂದಿತು. ಕಣ್ಣು ತುಂಬಿ ಹರಿಯಿತು. ಎದೆಯ ಮೇಲಿನ ಬಟ್ಟೆ ನೆನೆಯಿತು. ಇಲ್ಲ, ಈ ಹಕ್ಕಿ ಹಾರಿ ಹೋಗಲು ಬಿಡಬಾರದು ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಇನ್ನಷ್ಟು ಗಟ್ಟಿಯಾಗಿ–ಇನ್ನಷ್ಟು. ಎರಡೂ ಕೈಚಾಚಿ ಕೊರಡನ್ನು ತಬ್ಬಿಕೊಂಡಳು. ತಲೆ, ಮುಖ, ಎದೆ, ಕೈ, ಕಾಲು ಪ್ರೀತಿಯಿಂದ ಸವರಿದಳು. ಸವರುತ್ತ– ಸವರುತ್ತ ಕಾಲ ಸರಿದದ್ದೂ ತಿಳಿಯಲಿಲ್ಲ. ಕೊರಡು ಸರಿಯಿತೆ? ಬಡಿತ ಸ್ಪಷ್ಟವಾಯಿತೆ? ಬೆರಳು ಚಲಿಸಿದವೆ? ಗುಡ್ಡೆ ಅಲುಗಾಡಿದವೆ? ಕೆನ್ನೆಯ ನರಗಳು ಕುಣಿದವೆ? ಹಕ್ಕಿಯ ಟುಕು ಟುಕು ಜೋರಾಯಿತೆ? ಉಸಿರು ಹೊರ ಚೆಲ್ಲಿತೆ?...

ಮಗ, ಮಗಳು ಡಾಕ್ಟರರೊಡನೆ ಒಳಗೆ ಬರುತ್ತಿದ್ದಂತೆ ಅನೂ ಕುರ್ಚಿ ಬಿಟ್ಟೆದ್ದು ದಡ ದಡ ಹೊರಗೆ ಹೋದಳು.

●

'ಜನರೇನು ಬಲ್ಲರು ಒಳಗಾಗೊ ಕೃತ್ಯವ'

ಟ್ರಿನ್... ಟ್ರಿನ್... ಟ್ರಿನ್.

ಪೋಸ್ಟ್ ಬಂತಾ ? ಹಾಲು ಬಂದು ಬಹಳ ಹೊತ್ತಾಯಿತಲ್ಲ. ಜಾನಕಿ ಮನೆಗೆ ಹೋಗುವಾಗ ಕಾಯಿಸಿ ಫ್ರಿಜ್‌ನಲ್ಲಿ ಇಡುತ್ತೇನೆಂದು ಹೇಳಿದ ನೆನಪು..

'ಟ್ರಿನ್'... ಮಗ್ಗಲು ಮನೆಯ ವೆಂಕಟೇಶನ ಪೂಜೆ ನಡೆದಿರಬಹುದು. ಅಲ್ಲಲ್ಲ, ದೇವರ ಗಂಟೆಯ ಸಪ್ಪಳವಲ್ಲ. ಈ ದಿವ್ಮೆನ್ನುವ ತಲೆಗೆ ಏನೂ ಹೊಳೆಯದು. ಪಕ್ಕಕ್ಕೆ ತಿರುಗಿದಳು ಮಾಲಿನಿ. ತಲೆ ತುಂಬಾ ಜಡವಾಗಿ ನೋಯುತ್ತಿತ್ತು. ಅತ್ತತ್ತ ಮಲಗುತ್ತಿದ್ದಳು. ಹಸಿವು ತಡೆಯದೆ ಏಳುತ್ತಿದ್ದಳು. ದುಃಖ ಒತ್ತರಿಸಿ ಬಂದು ಗಂಟಲು ತುಂಬಿ ಬಾವು ಬಂದಿತ್ತು. ಜನ ಬರುತ್ತಿದ್ದರು ಹೋಗುತ್ತಿದ್ದರು. ಎಲ್ಲರೂ ಮತ್ತೆ ಮತ್ತೆ ಕೆದರುತ್ತಿದ್ದದ್ದು ಅದೇ ಗಾಯವನ್ನು ನೋವು ಮಾಯದಂತೆ.

ಮತ್ತೆ ಟ್ರಿನ್... ಮುಖ ಕಿವುಚಿ ಮೈಮೇಲಿನ ಕಾಶ್ಮೀರಿ ಶಾಲು ಎಳೆದು ಹಾಕಿ ಎದ್ದು ಕುಳಿತಳು ಮಾಲಿನಿ. ಶಾಲು ಅಪ್ಪನ ತೊಡೆಯಂತೆ ಮೆತ್ತಗಿತ್ತು. ಅವಳೇ ತಂದಿದ್ದು ಯಾತ್ರೆಗೆ ಹೋದಾಗ...

"ಇದ್ಯಾಕ್ಯಾಕ ಖರ್ಚು ಮಾಡಿದಿಯವಾ, ಇಲ್ಲಿ ಬಿಸಿಲಿಗೆ ಶಾಲು ಬೇಕಾಗೂದಿಲ್ಲ. ನಿನಗ ರೊಕ್ಕಾ ಉಳಿಸಿಕೋಬೇಕಿತ್ತು."

"ಇರಲಿ ಬಿಡs" ದಿಲ್ಲಿಯೊಳಗ ಎಲ್ಲಾರೂ ಏನೇನೋ ಕೊಂಡುಕೊಂಡರು. ನಾನು ಶಾಲು ತೊಗೊಂಡೆ. ಅಂಗಡೀಯಂವಾ ಇನ್ನೂರು ರೂ. ಹೇಳಿದ್ದಾ. ನಾನು ನೂರು ರೂಪಾಯಿಗೆ ಇಳಿಸಿದೆ ಗೊತ್ತದ ಏನು ?" ಎಷ್ಟು ಛಂದ ನಕ್ಕಿದ್ದಳು. ವ್ಯವಹಾರಜ್ಞಾನ ಭಾಳ ಇತ್ತು ಆಕೀಗೆ,

ಮತ್ತೊಮ್ಮೆ ಟ್ರಿನ್... ಛೀ ಈ ಶನಿ ಬಿಡೂಹಾಂಗ ಕಾಣುದಿಲ್ಲ. ಇಷ್ಟೊತ್ತಿನ್ಯಾಗ ಯಾರ ಬಂದಿರಬೇಕು ಈ ಬಿಸಲಾಗ. ಪೀಪ ಹೋಲ್‌ಗೆ ಕಣ್ಣು ಇರಿಸಿದಳು... ಕೋಡು, ಕೋರೆಹಲ್ಲು, ಕರೀಮುಖ... ಹೆದರಿ ಹೆಜ್ಜೆ ಹಿಂದಕ್ಕಿರಿಸಿದಳು. ಇದ್ಯಾವ ಪ್ರಾಣಿ, ಮನುಷ್ಯರ ವಾಸನಿ ಹಿಡಕೊಂಡು ಬಂದದ್ದು ! ಎದೆಯ ಮೇಲೆ ಕೈ ಇಟ್ಟುಕೊಂಡಳು. ತೀವ್ರಗತಿಯಲ್ಲಿ ಹೊಡೆದುಕೊಳ್ಳುತ್ತಿತ್ತು. ಅರಿವಿಲ್ಲದೆ ಎರಡೂ ಕೈಯಿಂದ ಕುತ್ತಿಗೆ ಒತ್ತಿಕೊಂಡು ಬಿಟ್ಟು ಉಸಿರಾಡಿದಳು. ಹೆದರಿದ ಮೈ ನಡಗುತ್ತಿತ್ತು. ಇನ್ನೂ ಒಂದೆರಡು ಸಲ ಗಂಟೆ ಬಡಿದು ಎಚ್ಚರಿಸಿತು. ಸುಮ್ಮನೇ ನಿಂತಳು. ಸಪ್ಪಳ ಒಂದೊಂದೇ ಪಾವಟಿಗೆ ಇಳಿದು ದೂರವಾಗುತ್ತಿತ್ತು. ಕುತ್ತಿಗೆಗೆ ಬಂದ ಗಂಡಾಂತರ ಕರಗಿತೆಂದು ತಿಳಿದು ಬಾಗಿಲು ತೆರೆದು ಹಣಕಿದಳು. ಇಲ್ಲ, ಪ್ರಾಣಿ ಇನ್ನೂ ಗೇಟಿನ ಹತ್ತಿರ ನಿಂತಿತ್ತು. ಗುಲಾಬಿ ಮುಳ್ಳು ಗೀಚಿದ ಮುಂಗೈ ರಕ್ತ ದಿಟ್ಟಿಸುತ್ತಿತ್ತು. ಮುಖ ಹೊರಳಿಸಿ ಅವಳತ್ತ ನೋಡಿತು. ಆ ಕಣ್ಣುಗಳಲ್ಲಿನ ದುಃಖ, ನೋವು, ದೈನ್ಯ ಮಾಲಿನಿಯ ಮುಖಕ್ಕೆ ರಾಚಿತು. ಗುರುತು ಸಿಕ್ಕಂತೆ ಕಣ್ಣುಗಳನ್ನು ಅರಳಿಸಿ ನೋಡಿದಳು. ಅವುಗಳ ಮೋಡಿಯಿಂದ ಅವನ ಪಾದಗಳು ಮತ್ತೆ ಮನೆಯತ್ತ ಚಲಿಸಿದವು; ಬಂದು ಹಿಂಜರಿಯುತ್ತ ಕುರ್ಚಿಯ ತುದಿಗೆ ಕೂತ.

ಮಾಸಿದ ಬಿಳಿ ಜುಬ್ಬ, ಪಾಯಿಜಾಮ, ಅಂಚು ಹರಿದ ಜಾಕೀಟು ಬಗಲ ಚೀಲ. ಇಷ್ಟು ವರ್ಷಗಳಲ್ಲಿ ಕೆಂಪನೆಯ ಬಣ್ಣ ಸುಟ್ಟು, ಅರೆನರೆತ ಕೂದಲು ಮುಳ್ಳಿನ ಗಿಡದಂತೆ ಮುಖದ ತುಂಬ ಹಬ್ಬಿ, ಸೋತ ಕಣ್ಣುಗಳ ಮನುಷ್ಯ ಸಂಪೂರ್ಣ ಬದಲಾಗಿದ್ದ. ಅವಳ ಕಲ್ಪನೆಯ ವ್ಯಕ್ತಿ ಇವನಾಗಿರಲಿಲ್ಲ. ಹತೋಟಿಗೆ ಬರುತ್ತಿದ್ದ ದುಃಖ ಮರುಕಳಿಸಿ ಮಾಲಿನಿ ಜೋರಾಗಿ ಅಳತೊಡಗಿದಳು. ಇಷ್ಟು ದಿನಗಳಲ್ಲಿ ಚಿಕ್ಕ ಮಗುವಿನಂತೆ ಮನಸ್ಸು ಬಿಚ್ಚಿ ಎಂದೂ ಅತ್ತಿರಲಿಲ್ಲ. ಅವನು ತಲೆ ತಗ್ಗಿಸಿ ಸುಮ್ಮನೆ ಕೂತಿದ್ದ. ಅತ್ತತ್ತು ದಣಿದ ಮಾಲಿನಿ ಸಿಟ್ಟಿನಿಂದ ಅವನತ್ತ ನೋಡಿದಳು. ಅವನು ಅಳುತ್ತಿರಲಿಲ್ಲ. ಆದರೆ ಅವನ ಶರೀರ ನಡುಗಿ ಯಾವಾಗ ನೆಲಕ್ಕೆ ಉರುಳುತ್ತಾನೋ ಎನ್ನುವಷ್ಟು ದಣಿದಿದ್ದ. ಗಾಬರಿಯಾದ ಮಾಲಿನಿ ಗ್ಲಾಸಿನಲ್ಲಿ ತಣ್ಣನೆಯ ನೀರು ತಂದಳು. ಗಟ ಗಟ ಕುಡಿದು ಕುರ್ಚಿಗೆ ತಲೆ ಒರಗಿಸಿದ. ಮುಖ ಬಿಳಿಚಿ

ಕೊಂಡಿತ್ತು. 'ಇವನೂ ಸಾಯ್ತಾನೋ ಏನೋ, ಇಲ್ಲೇ ಜೀವಾ ಬಿಟ್ಟರ ಏನ ಗತಿ ?' ಕೈ ಹಿಡಿದು ಸೋಫಾದಲ್ಲಿ ಮಲಗಿಸಿದಳು. ಮೈ ಕೆಂಡವಾಗಿತ್ತು.

"ಯಾಕ ಆರಾಮ ಇಲ್ಲೇನು ?"

"ಜ್ವರಾ ಬರತಿದ್ವು, ಸುದ್ದಿ ಗೊತ್ತಾದ ಕೂಡಲೆ ಹೊರಟೆ."

"ಎಲ್ಲಿಂದ ಬಂದಿ ?"

"ದಾವಣಗೆರೆಯಿಂದ, ಮಾಲಿಕರ ಮಗಾ ಬಸ್ಸಿನ್ಯಾಗ ಕೂಡ್ರಿಸಿದಾ... ಕಣ್ಣಿಗೆ ಕತ್ತಲು ಬಂದು ಬಸ್‌ಸ್ಟ್ಯಾಂಡಿನ್ಯಾಗ ಮಲಗಿದ್ದೆ. ನಿನ್ನ ಮನೀ ಹುಡುಕಾಟ ಇಷ್ಟೊತ್ತಾತು.

ಬಾಗಿಲು ತೆಗೆಯದೆ ಬಯ್ದು ಓಡಿಸಬೇಕಾಗಿದ್ದ ಅವನಿಗೆ ಹಾಲು ಕುಡಿಸಿ ಆಯಿತು. ಮುಖ ತೊಳೆದು ಬಟ್ಟೆ ಬದಲಾಯಿಸಿದ ಮೇಲೆ ಪ್ರಾಣಿ ಮನುಷ್ಯನಾದ.

"ಏನಾಗಿತ್ತು ಉಮಾಗ ?"

"ಬಾಯಿ ಮುಚ್ಚು. ಆಕೀ ಹೆಸರ ತೊಗೊಳ್ಳೊ ಯೋಗ್ಯತಾ ಇಲ್ಲ ನಿನಗ" ಅವಳ ಸಿಟ್ಟಿಗೆ ಹೆದರಿ ಕಣ್ಣು ಮುಚ್ಚಿ ಮಲಗಿದ. ಕಣ್ಣೀರು ಗಲ್ಲದಿಂದ ಇಳಿದಾಗ ಮತ್ತೆ ಕರಗಿದಳು ಮಾಲಿನಿ.

"ಆಕೀಗೆ ಕ್ಯಾನ್ಸರ್ ಆಗಿ ಆರು ತಿಂಗಳ ಆಗಿತ್ತು. ಹಾಸಿಗಿ ಹಿಡದ್ಲು. ಉಳಿಸಿಕೋಬೇಕಂತ ಭಾಳ ಪ್ರಯತ್ನ ಮಾಡಿದ್ವಿ."

"ನನಗ ಬಾಳಣ್ಣ ಎಲ್ಲಾ ಸುದ್ದಿ ಹೇಳಿದ್ದ."

"ಹೌದs ? ಹಾಂಗಾರ ನಿನಗ ಗೊತ್ತ ಇತ್ತs ಆದರೂ..." ತಲೆ ಎತ್ತಿ ನೋಡುವಷ್ಟರಲ್ಲಿ ಎದ್ದು ಹೋಗಿದ್ದಳು ಮಾಲಿನಿ.

ಹಾಸಿಗೆಯಲ್ಲಿ ಒಬ್ಬನೇ ಹೊರಳಾಡಿದ. ಅವಳು ಇದೇ ಹಾಸಿಗೆಯಲ್ಲಿ ಮಲಗಿರಬಹುದೇ. ಇಲ್ಲಿಯೇ ಜೀವ ಬಿಟ್ಟಿರಬಹುದೇ. ಈ ಕೋಣೆಯ

ಸುತ್ತ ಸುಳಿದಾಡುತ್ತಿರಬಹುದೇ. ಹುಡುಕುವಂತೆ ಅತ್ತಿತ್ತ ನೋಡಿದ. ಎದುರಿನ ಗೋಡೆಯ ಮೇಲೆ ಗಂಧದ ಹಾರ ಹಾಕಿಕೊಂಡ ಉಮಾ ವಿಜಯದ ನಗೆ ನಗುತ್ತಿದ್ದಳು. ತನ್ನ ಈಗಿನ ಅವಸ್ಥೆಯನ್ನು ನೋಡಿ...

ಮಿಂಚುವ ಕಣ್ಣುಗಳು, ತುಸು ಮೊಂಡ ಮೂಗು, ಕೇದಿಗೆಯ ಮೈ ಬಣ್ಣ. ಅವಳು ತಾನು ನೋಡಿದ ಹದಿನಾರನೆಯ ಹುಡುಗಿ.

ಉಮಾ ಪಿ.ಯು.ಸಿ. ಸೆಕೆಂಡ್ ಇಯರ್. ಪೇಂಟಿಂಗ್ ಹವ್ಯಾಸ. ವಯಸ್ಸು ಹದಿನೆಂಟು, ಮೂರು ಜನ ಅಣ್ಣಂದಿರು, ಇಬ್ಬರು ತಂಗಿಯರು. ಹೊತ್ತು, ಮುಹೂರ್ತ, ಜಾತಕಗಳಲ್ಲಿ ನಂಬಿಕೆಯಿಲ್ಲದ ತಾನು ಉಮಾಳನ್ನು ನೋಡಿದ ತಕ್ಷಣ ಒಪ್ಪಿಬಿಟ್ಟಿದ್ದೆ. ಅಪ್ಪನಿಗೆ ಸಿಟ್ಟು ಬಂದಿತ್ತು.

ಒಳ್ಳೊಳ್ಳೆ ಮನಿತನದ ಛಂದನ್ನ ಕನ್ಯಾ ನಪಾಸ ಮಾಡಿದಂವಾ ಇಕಿನ್ನ ಒಪ್ಪ್ಯಾನ. ನನಗೇನ ಪಸಂತಿಲ್ಲ ಬಿಡು. ಜಾತಕಾನೂ ಕೂಡೂದಿಲ್ಲ."

ಈ ಹುಡುಗಿ ಬೇಡವೆನ್ನಲು ಅಪ್ಪನ ನಿಜವಾದ ಕಾರಣ ತನ್ನ ಜಮೀನು ದಾರಿಕೆಗೆ ತಕ್ಕಷ್ಟು ವರದಕ್ಷಿಣೆ ಸಿಗುವುದಿಲ್ಲವೆನ್ನುವದು. ಬಿ. ಎ. ಓದುವಾಗ ವರದಕ್ಷಿಣೆ ಇಲ್ಲದೆ ಮದುವೆ ಆಗುತ್ತೇನೆಂದು ಭಾಷಣ ಮಾಡಿದ ತನಗೆ ಇದು ಅವಮಾನ. ಅಪ್ಪ ಹೇಳಿದಂತೆ ಕೇಳುತ್ತ ಹೋದರೆ ಗೆಳೆಯರು ಚಪ್ಪಾಳೆ ತಟ್ಟಿ ನಗುತ್ತಾರೆ, ಹಂಗಿಸುತ್ತಾರೆ. ಅವರ ಮುಂದೆ ಆದರ್ಶವಾದಿ, ಹೀರೋ ಆಗಬೇಕಲ್ಲ ತಾನು ? ಇಲ್ಲದಿದ್ದರೆ ತನ್ನ ಮಾತಿಗೆ ಬೆಲೆ ಏನು ? ತಾನೇ ಕಿರಿಯ ಮಗ, ಅವ್ವನ ಬೆಂಬಲ ತನಗೇ, ಹಟ ಹಿಡಿದ ತಾನು ಮದುವೆಯಾದರೆ ಉಮಾಳನ್ನೇ ಎಂದು, ಆಯಿತು.

"ನಾನು ನಿನ್ನ ಭಾಳ ಪ್ರೀತಿ ಮಾಡ್ತೀನಿ ಉಮಾ" ಮದುವೆ ನಿಶ್ಚಯ ವಾದ ಮೇಲೆ ತುಂಬಾ ಕಷ್ಟಪಟ್ಟು ಅವಳ ತಾಯಿಗೆ ಹೇಳಿ ಸಿನಿಮಾಕ್ಕೆ ಕರೆದು ಕೊಂಡು ಹೋಗಿದ್ದೆ ಅಪ್ಪನಿಗೆ ಗೊತ್ತಾಗದಂತೆ. ಅವರ ಊರಿಗೆ ಹೋದದ್ದು ತನ್ನ ಮದುವೆಯ ಅರಿವೆಯ ಖರೀದಿಗೆ. ಅವಳ ಅಣ್ಣ ಬಾಳಣ್ಣನ ಬೆಂಬಲವೂ ತನಗಿತ್ತು.

ಥಿಯೇಟರಿನ ಕತ್ತಲಲ್ಲಿ ಮತ್ತೊಮ್ಮೆ ನನ್ನ ಮಾತನ್ನು ಪಿಸುಗುಟ್ಟಿದೆ. ಏನೂ ಉತ್ತರವಿಲ್ಲ. ಹತ್ತಿರ ಸರಿದು ಕೈ ಚಾಚಿದೆ. ಇನ್ನಷ್ಟು ಆಚೆ ಮುದುಡಿದಳು.

"ಯಾಕ ಉಮಾ ನನ್ನ ಮ್ಯಾಲೆ ನಿನಗ ಪ್ರೀತಿ ಇಲ್ಲೇನು" ಅಂದೆ.

'ಹುಂ' ಅಂದಳು ಹೌದೋ ಅಲ್ಲವೋ ಎನ್ನುವಂತೆ. ಅವಳ 'ಹುಂ' 'ಉಹುಂ'ಗಳಲ್ಲೇ ತಮ್ಮ ಮೊದಲ ಭೆಟ್ಟಿ ಮುಕ್ತಾಯವಾಗಿತ್ತು. ನಿರಾಶೆಯಾಗಿತ್ತು ತನಗೆ. ಒಳ್ಳೆಯ ರೂಪ, ಬುದ್ಧಿ, ತಕ್ಕಷ್ಟು ಶ್ರೀಮಂತಿಕೆ ಇದ್ದೂ ಉಳಿದ ಪೋಲಿ ಹುಡುಗರಂತೆ ಹುಡುಗಿಯರ ಬೆನ್ನು ಹತ್ತಿ ಹೋದವನಲ್ಲ ತಾನು. ಅಹಂಕಾರ ತನ್ನ ಮೂಲಗುಣ. ತಾನು ಯಾವುದರಲ್ಲಿಯೂ ಕಡಿಮೆಯವನಲ್ಲ ಎನ್ನುವ ಹೆಮ್ಮೆ. ತನ್ನ ಇಂಗ್ಲೀಷು ಜ್ಞಾನ ತುಂಬಾ ಹೆಚ್ಚಿನ ಮಟ್ಟದ್ದು. ಪಠ್ಯಗಳಲ್ಲಿ ಆಸಕ್ತಿ ಇಲ್ಲದೆ ಜನರಲ್ ಬಹಳ ಓದುತ್ತಿದ್ದ. ಪರೀಕ್ಷೆಗಳಲ್ಲಿ ಮಾರ್ಕ ಕಡಿಮೆ ಬಿದ್ದರೂ ದಡ್ಡನಲ್ಲ. ತನ್ನಷ್ಟು ಕಲಿಯದ ಅಣ್ಣಂದಿರ ಮುಂದೆ ತನ್ನದೇ ಠೀವಿ. ಹೊಟ್ಟೆಕಿಚ್ಚಿನಿಂದ ತನ್ನ ಸಿಗರೇಟು, ಹೋಟೆಲ್, ಸಿನೆಮಾ ಖರ್ಚಿನ ಬಗ್ಗೆ ಚಾಡಿ ಹೇಳಿ ಅಪ್ಪನಿಂದ ಆಗಾಗ ಬಯ್ಗುಳ ಕೊಡಿಸುತ್ತಿದ್ದರು. ಅಪ್ಪ ಬಯ್ದರೂ ಪಾಕೆಟ್ ಮನಿ ತಪ್ಪಿಸುತ್ತಿರಲಿಲ್ಲ. ಹುಟ್ಟುತ್ತಲೇ ಅಣ್ಣ–ತಮ್ಮಂದಿರು ದಾಯಾದಿಗಳು ಎನ್ನುತ್ತಾರೆ. ಅದು ನಿಜ ಅನ್ನಿಸುತ್ತಿತ್ತು. ತಾನು ಮದುವೆಯಾಗುವ ಹುಡುಗಿ ಅತ್ತಿಗೆಯರಿಗಿಂತ ಹೆಚ್ಚು ಕಲಿತವಳು ಎನ್ನುವುದೂ ಅವರ ದುಮ್ಮಾನಕ್ಕೆ ಕಾರಣ.

ಎರಡು ಮೂರು ಸಲ ಭೆಟ್ಟಿಯಾದರೂ ಉಮಾಳದು ಅದೇ ಮೌನದ ಪ್ರತಿಕ್ರಿಯೆ. ತನ್ನ ಪ್ರೀತಿಗೆ ಬೆಲೆಯೇ ಇಲ್ಲ. ತನ್ನನ್ನು ಮದುವೆಯಾಗುವ ಮನಸ್ಸೇ ಇಲ್ಲವೇನೋ ಎನ್ನುವ ಉದಾಸೀನತೆ. ಈ ಮದುವೆ ಒಲ್ಲೆ ಎಂದು ಬಿಟ್ಟುಬಿಡಲೇ ಎನ್ನುವಷ್ಟು ಸಿಟ್ಟು ಬಂದಿತ್ತು. ಈಗ ಬಿಟ್ಟರೂ ತನ್ನ ಹೆಮ್ಮೆಗೆ ಪೆಟ್ಟು. ಹಟ ಹಿಡಿದು ಮನೆಯವರನ್ನು ಒಪ್ಪಿಸಿದ ಮೇಲೆ ಏನು ಕಾರಣ ಹೇಳಿ ಬಿಡಿಸಿಕೊಳ್ಳುವದು. ಹಗ್ಗದಿಂದ ತಾನೇ ಕಾಲು ಕಟ್ಟಿಕೊಂಡಂತಾಗಿತ್ತು.

ಹೋಗಲಿ, ಅವಳಿಗೆ ನಾಚಿಕೆ, ಸಂಪ್ರದಾಯಸ್ಥ ಮನೆಯ ಹುಡುಗಿ. ಕಟ್ಟುನಿಟ್ಟಾಗಿದ್ದಾಳೆ. ಫ್ರೀಯಾಗಿದ್ದು ಗೊತ್ತಿಲ್ಲ. ಇದೂ ಒಂದು ರೀತಿ

ತನಗೇ ಒಳ್ಳೆಯದು. ತಿರುಗುವ ಹುಡುಗಿಯರನ್ನು ಕಂಡರೆ ತನಗೆ ಜಿಗುಪ್ಸೆ. ಮದುವೆಯಾಗಿ ತನ್ನ ಸ್ವಭಾವ ತಿಳಿದ ಮೇಲೆ ಬದಲು ಆದಾಳು. ಎಂದೆಲ್ಲ ವಿಚಾರ ಮಾಡಿ ಮನಸ್ಸಿಗೆ ಸಮಾಧಾನ ತಂದುಕೊಂಡಿದ್ದೆ. ಒಳಗೆಲ್ಲೋ ಚುಚ್ಚುತ್ತಿದ್ದರೂ ಹೊರಗೆ ಸಂತೋಷವಾಗಿದ್ದೆ. ಬೀಗರು ಮಾಡಿಕೊಟ್ಟ ಮದುವೆಯೂ ತಮ್ಮ ಪ್ರತಿಷ್ಠೆಗೆ ತಕ್ಕುದಾಗಿರಲಿಲ್ಲ. ಅತ್ತಿಗೆಯರು ಗುಸು ಗುಸು ಆಡಿಕೊಳ್ಳುತ್ತಿದ್ದರು. ಅಣ್ಣಂದಿರು ಮುನಿಸು ತೋರಿಸಿದ್ದರು. ಎಲ್ಲವನ್ನೂ ಕಂಡೂ ಕಾಣದಂತೆ ಇದ್ದೆ…

"ಅಪ್ಪಾs ಈ ಕ್ರೋಸಿನ್ ಗುಳಿಗೀ ತೊಗೋ, ಬೋರ್ನವಿಟಾ ಕುಡಿ" ಸಿಟ್ಟಾಗಿ ಎದ್ದು ಹೋಗಿದ್ದ ಮಗಳು ಮುಸುಕು ಸರಿಸಿದಳು. ಅರ್ಧ ಎಚ್ಚರ, ಅರ್ಧ ಮಂಪರಿನಲ್ಲಿ ಎದ್ದು ಎಲ್ಲ ಬಾಯಿಗೆ ಸುರಿದುಕೊಂಡ. ಹಣೆ ಮುಟ್ಟಿ ನೋಡಿದ ಮಾಲಿನಿ ಟಾವೆಲ್ ತಂದು ಬೆವರು ಒರೆಸುತ್ತ ಕೇಳಿದಳು.

"ಇಷ್ಟು ವರ್ಷದ ಮ್ಯಾಲೆ ಇವತ್ತ ನನ್ನ ನೆನಪ ಆತೇನು ನಿನಗ ?"

"ಬಾಳಣ್ಣನ ಬಾಯಿಂದ ಎಲ್ಲಾ ಸುದ್ದೀ ಕೇಳತಿದ್ದೆ ಮಾಲೂ, ನಿನ್ನ ಮದುವೀ ಸುದ್ದೀನೂ ಅವನs ಹೇಳಿದ್ದ. ಬಂದು ಅಕ್ಕೀ ಕಾಳು ಹಾಕಿದ್ದೆ. ನಿನ್ನ ಮಗಾ ದೊಡ್ಡಾವ ಆಗಿ ಇಂಜನಿಯರಿಂಗ್ ಓದ್ತಾನ ದಾವಣಗೆರ್ಯಾಗ, ಅಂತನೂ ಪತ್ರಾ ಬರದಿದ್ದಾ. ಒಮ್ಮೆ ದೂರಿಂದ ಅವನ್ನೂ ತೋರಿಸಿದ್ದ. ಯಾವಾಗಾರೆ ಹಾದ್ಯಾಗ ನೋಡತಿರತೀನಿ ಅವನ್ನ.

"ಹೌದಾs ದೀಪನ್ನ ನೋಡಿದ್ಯಾ. ಮಾತಾಡ್ಸಿದ್ಯಾ ?"

"ನಾ ಯಾರು ಅನ್ನೂದು ಅಂವಗೇನ ಗೊತ್ತು ಮಾಲೂ. ನಿನ್ನ ಅಜ್ಜ ಅಂತ ಹೇಳಿಕೊಂಡರೂ ನಂಬಲಿಕ್ಕಿಲ್ಲ. ನಾ ಬದುಕಿ ಇದ್ದದ್ದೂ ನಿಮ್ಮವ್ವಗ ಗೊತ್ತ ಇರಲಿಕ್ಕಿಲ್ಲ. ನೋಡು ಆ ಫೋ ೯ ಟೋ ೯ ದಾ ಗ ಹಣೀ ಮ್ಯಾಲೆ ಕುಂಕುಮಾನೂ ಇಲ್ಲಾ. ಮಂಗಳಸೂತ್ರಾನೂ ಇಲ್ಲಾ."

"ಬಾಳೂ ಮಾವಾ ನಿನ್ನ ಸುದ್ದೀ ಎಲ್ಲಾ ನಮಗೂ ಹೇಳತಿದ್ದಾ ಅನ್ನೂದು ನಿನಗ ಹ್ಯಾಂಗ ಗೊತ್ತಿಲ್ಲಾ. ನೀನು ದಾವಣಗೇರ್ಯಾಗ ಒಬ್ಬನ

ಖಾನಾವಳ್ಯಾಗ ಊಟಾ ತಿಂಡಿ ಮಾಡಿಕೊಂಡ ಅದೀ ಅನ್ನೊದು ನಮಗ ಗೊತ್ತಿತ್ತು. ನಿನ್ನ ಜೋಡಿ ಮದುವಿ ಆಗಿ ಅವ್ವ ಏನ ಸುಖಾಪಟ್ಟು? ಯಾವಾಗರೆ ಕುಂಕುಮಾ ಹಚ್ಚತಿದ್ಲು. ಮಂಗಳಸೂತ್ರ ಕಳ್ಳ ಕಿತಕೊಂಡು ಹೋಗಿದ್ದ. ಅಲಂಕಾರಕ್ಕ ಆಕಿ ಎಂದೂ ಮಹತ್ತ್ವ ಕೊಡಲಿಲ್ಲಾ. ಎಷ್ಟು ಕಷ್ಟಪಟ್ಟು ದುಡೀತಿದ್ಲು. ನಿನಗ ಹ್ಯಾಂಗ ತಿಳಿದೀತು ?" ಮಾಲಿನಿ ಕಣ್ಣು ಒರೆಸುತ್ತ ಹೇಳಿದಳು.

"ಆದರೂ ಸಾಯೂದರೊಳಗ ಒಂದ ಸಾರೆ ಅರೆ ನನ್ನ ನೋಡಬೇಕು ಅಂತ ಉಮಾಗ ಅನಸಲೇ ಇಲ್ಲೇನು ?"

"ಹೌದು, ಬಾಳು ಮಾಮಾ ನನ್ನ ಮುಂದs ಕೇಳಿದ್ದ ನಿನ್ನ ಕರಕೊಂಡು ಬರಲೇನಃ ಅಂತ. ಆದರ ಅವ್ವ ಮಾರಿ ಹೊಳ್ಳಿಸಿ ಮಲಕೊಂಡಬಿಟ್ಲು. ನನಗ ಸಿಟ್ಟು ಉಕ್ಕತಿತ್ತು. ಸಾಯೂ ಮುಂದ ಅವಳ ಮನಸೀಗೆ ಶಾಂತಿ ಇರಲಿ ಅಂತ ನಾನs ಕರಕೊಂಡು ಬರಬ್ಯಾಡ ಅಂದೆ."

ಗಂಟಲು ಕಟ್ಟಿ ಮುಂದೆ ಮಾತು ಹೊರಡದೆ ಮಾಲಿನಿ ಮತ್ತೆ ಎದ್ದು ಹೋಗಿದ್ದಳು. ತನ್ನ ರೂಮಿನಲ್ಲಿ ಅವಳು ಬಿಕ್ಕಿ ಬಿಕ್ಕಿ ಅಳುತ್ತಿರುವ ದನಿ ಕೇಳುತ್ತಿದ್ದರೂ ಅಸಹಾಯ ಸ್ಥಿತಿಯಲ್ಲಿ ಹಾಗೆಯೇ ಮಲಗಿದ್ದ. ಎದ್ದು ಹೋಗುವಷ್ಟು ಚೈತನ್ಯ ಕಾಲುಗಳಲ್ಲಿದ್ದರೂ ಮಗಳ ಬೆಡ್‌ರೂಮಿಗೆ ಹೋಗಿ ಸಮಾಧಾನ ಮಾಡುವಷ್ಟು ಸಲಿಗೆ ಇರಲಿಲ್ಲ. ಮಗಳ ಹತ್ತಿರಕ್ಕೆ ಹೋಗಲಾರದ ಸಂಕೋಚ ಅಡ್ಡಗೋಡೆಯಾಗಿತ್ತು.

ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ಅವನ ಅಹಂಕಾರಕ್ಕೆ ಪೆಟ್ಟು ಬಿದ್ದಿತ್ತು. ತನ್ನನ್ನು ಕಸದಂತೆ ಸರಿಸಿ ಉಮಾ ಹೋಗಿದ್ದಳು. ಹೆಂಡತಿಯ ಮೇಲಿನ ಸಿಟ್ಟಿಗೆ, ಅವಳಿಗೆ ಪಾಠ ಕಲಿಸಬೇಕೆನ್ನುವ ಹಟಕ್ಕೆ ತಾನು ಪುಟ್ಟ ಮಗಳೊಡನೆ ಅವಳ ಕೈ ಬಿಟ್ಟು ಹೊರಟುಹೋಗಿದ್ದ. ಒಂದಲ್ಲ ಒಂದು ದಿನ ತನ್ನ ನೆರವು ಕೋರಿ ತಪ್ಪನ್ನೊಪ್ಪಿಕೊಂಡು ಕ್ಷಮೆ ಕೇಳುತ್ತಾಳೆಂದು ನಂಬಿಕೊಂಡಿದ್ದ. ತನ್ನ ನಂಬಿಕೆ ಹುಸಿಯಾಗಿತ್ತು. ಅವಳ ಹಟದ ಮುಂದೆ ತನ್ನದೇನೂ ಅಲ್ಲವೆಂದು ತುಂಬಾ ತಡವಾಗಿ ತಿಳಿದಿತ್ತು.

ಕೊನೆಯ ಸಲವೆಂದರೆ ಮಗಳ ಮದುವೆಯಲ್ಲಿಯೇ ಅವಳನ್ನು ನೋಡಿದ್ದು. ತನ್ನ ಮಗಳ ಮದುವೆಯಲ್ಲಿ ಅಪರಿಚಿತನಂತೆ ಕುಳಿತಿದ್ದ ತನ್ನನ್ನು ಅಣ್ಣಂದಿರೂ ಮಾತಾಡಿಸಿರಲಿಲ್ಲ. ಒಳಗೊಳಗೇ ನಗುತ್ತಿದ್ದರೇನೋ. ಬೀಗರಿಗೂ ಪರಿಚಯ ಮಾಡಿಸಿರಲಿಲ್ಲ. ಎಲ್ಲಾ ಕೆಲಸಕ್ಕೂ ಉಮಾ. ಎಲ್ಲಕಡೆಗೂ ಅವಳೇ. ಮಂಟಪದ ಒಂದು ಮೂಲೆಯಲ್ಲಿ ಮಾತುಗಳು ಕಿವಿಗೆ ಬಿದ್ದಿದ್ದವು.

"ಹುಡುಗೀನ್ನ ದೊಡ್ಡಪ್ಪ ದೊಡ್ಡವ್ವ ಧಾರೀ ಎರದು ಕೊಡ್ತಾರಲ್ಲ. ಯಾಕ ಅಪ್ಪ ಇಲ್ಲೇನು?"

"ಅದಾನಂತ ಎಲ್ಲ್ಯದಾನೋ ಏನೋ. ಹೆಂಡತೀಗೆ ಹೊಡದು ಬಡದು ಭಾಳ ತ್ರಾಸ ಕೊಡ್ತಿದ್ದಂತ. ನಿನ್ನ ಕೊಲ್ಲತೀನಿ ಅಂತಿದ್ದಂತ. ತಲೀ ಸರಿ ಇರಲಿಲ್ಲಾ ಅಂತಾರಪಾ. ಒಮ್ಮೆ ಮನೀ ಬಿಟ್ಟಹೋಗಿ ಬಿಟ್ಟ. ಯಾರೂ ಹುಡುಕಾಕ ಹೋಗಿಲ್ಲ. ಅವ್ವನs ಸಾಲ್ಯಾಗ ನೌಕರಿ ಹಿಡಿದು ಮಗಳ್ನ ಬೆಳಿಸಿದ್ಲಂತ. ಎಂಥೆಂಥಾ ಮಂದಿ ಇರ್ತಾರ ನೋಡಪಾ."

ತನ್ನ ತಲೆ ನಿಜವಾಗಿ ಕೆಟ್ಟು ಹೋಗಿತ್ತು. ಬಾಳಣ್ಣ ಊಟಕ್ಕೆ ಕರೆಯಲು ಬಂದ. ಹೊಟ್ಟೆ ಹಸಿದಿದ್ದರೂ ಊಟ ಸೇರಿರಲಿಲ್ಲ. ಕೈ ತೊಳೆಯುವ ಜಾಗದಲ್ಲಿ ಉಮಾ ನಿಂತಿದ್ದಳು. ಸಿಟ್ಟಿನಿಂದ ನೋವಿನಿಂದ ತನ್ನ ಕಾಲು ನಡುಗುತ್ತಿದ್ದವು. ಅವಳಿಗೆ ಎರಡೇಟು ಕೊಡುವಷ್ಟು ಸಿಟ್ಟು ಉಕ್ಕುತ್ತಿತ್ತು. ಆದರೆ ಅಲ್ಲಿ ಅವಳಿಗೆ ಸಂಪೂರ್ಣ ರಕ್ಷಣೆಯಿತ್ತು. ತನ್ನ ಮೇಲೆಯೇ ಅಧಿಕಾರ ಚಲಾಯಿಸುವಂತೆ ಅವಳೇ ನಿಷ್ಠುರವಾಗಿ ಹೇಳಿದ್ದಳು.

"ಮಾಲೂ ಗಂಡನ ಮನ್ಯಾಗ ಸುಖದಿಂದ ಇರಬೇಕಂದರ ನೀವು ಎಂದೂ ಇಲ್ಲಿಗೆ ಬರಬಾರದು. ಬಾದು ಮಂದ್ಯಾಗ ನಮ್ಮ ಮಾನಾ ಕಳೀಬ್ಯಾಡ್ರಿ. ಇಷ್ಟ ಮಾಡಲಿಕ್ಕೆ ನಾ ಇಡೀ ಜೀವನಾನ ಸವಸೇನಿ. ಇವತ್ತs ಕಡೀದು. ಹೋಗಿಬಿಡ್ರಿ."

ಮತ್ತೆ ಮತ್ತೆ ತನ್ನ ಅಹಂಕಾರಕ್ಕೆ ಪೆಟ್ಟು ಬೀಳುತ್ತಿತ್ತು. ಜೀವನದಲ್ಲಿ ಏನೇನೋ ಆಸೆ ಕಟ್ಟಿಕೊಂಡಿದ್ದೆ. ಕನಸು ಕಂಡಿದ್ದೆ. ಆದರ್ಶವಾದಿಯಾಗಿ

ಎಲ್ಲರೂ ಭೇಷ್ ಎನ್ನುವಂತೆ ಬಾಳಬೇಕೆಂದುಕೊಂಡಿದ್ದೆ. ಎಲ್ಲವೂ ಮಣ್ಣು ಗೂಡಿ ಹೋಗಿತ್ತು. ತನ್ನ ಒಳ್ಳೆಯ ಗುಣಗಳೆಲ್ಲ ಹಾಳಾಗಿ ಹೋಗಿ ದುಷ್ಟ-ತನದ ಸಂಕೇತವಾಗಿ ತನ್ನ ಹೆಸರು ಉಳಿದಿತ್ತು. ಆದಷ್ಟು ಬೇಗ ಅಲ್ಲಿಂದ ಓಡಿಹೋಗಿದ್ದೆ. ನನ್ನ ಬದುಃಕನ್ನ ನರಕವನ್ನಾಗಿ ಮಾಡಿದವಳೇ ಉಮಾ. ಅಂದಿನಿಂದ ಮಗಳ ಮುಖ ನೋಡಿರಲಿಲ್ಲ. ಅವಳ ಚಿತ್ತದಲ್ಲಿನ ತನ್ನ ಚಿತ್ರ ಹೆದರಿಕೆ ಹುಟ್ಟಿಸುವಂತಿತ್ತು...

ಉಮಾs ಹಿಂಗ್ಯಾಕ ಮಾಡಿದಿ. ನಾ ಏನ ತಪ್ಪು ಮಾಡಿದ್ದೆ. ನನ್ನ ಅರ್ಥಾ ಮಾಡಿಕೊಳ್ಳಲಿಕ್ಕೆ ನೀ ಪ್ರಯಃತ್ನಾನ ಮಾಡಲಿಲ್ಲಾ. ನಾ ನಿನ್ನ ಎಷ್ಟು ಪ್ರೀತಿ ಮಾಡತಿದ್ದೆ ಅಷ್ಟು ನೀ ಮಾಡಲಿಲ್ಲಾ ಅನ್ನೂದs ನನ್ನ ಸಿಟ್ಟು. ನಿನಗ ಹೃದಯಾನ ಇಲ್ಲಾ. ನೌಕರಿ ಮಾಡ್ರಿ. ದುಡದು ತರ್ರಿ. ಅಣ್ಣಂದಿರು ದುಡದದ್ದು ಉಂಡು ತಿಂದು ಹಂಗಿನ್ಯಾಗ ಇರಬ್ಯಾಡ್ರಿ ಅಂತ ನನಗ ಉಪದೇಶಾ ಮಾಡಿ ಮಾಡಿ ನನ್ನ ತಲೀ ತಿಂದಬಿಟ್ಟಿ. ಯಾವಾಗ ನನಗ ನಿನ್ನ ಸಹವಾಸಾ ಬೇಕ ಅನಸತಿತ್ತು ಆಗ ಮುಖಾ ತಿರುಗಿಸಿ ಬಿಡತಿದ್ದೆ. ಅಷ್ಟ್ಯಾಕ, ನಾ ಎಷ್ಟ ಪ್ರೀತಿಯಿಂದ ಮೊದಲ ರಾತ್ರಿ ದಿನಾ ಛಂದನ್ನ ವಾಚು ತಂದು ಕಟ್ಟಿದರ ನೀ ಏನಂದಿ–

"ಯಾರದರೆ ರೊಕ್ಕದಾಗ ಮಜಾ ಮಾಡೂ ಬುದ್ಧಿ ಒಳ್ಳೇಯದಲ್ಲ. ನನಗ ಇದು ಸೇರೂದಿಲ್ಲ. ನೀವು ಸ್ವತಾ ದುಡದು ತಂದುಕೊಡ್ರಿ ಆವಾಗ ನನಗ ಸಂತೋಷ ಆಗ್ತದ" ಅಂದಿ. ನನ್ನ ಅಭಿಮಾನಕ್ಕ ಪೆಟ್ಟು ಬಿತ್ತು. ಅವತ್ತs ನಿನ್ನ ಮ್ಯಾಲೆ ಅತ್ಯಾಚಾರಾ ಮಾಡಿದೆ. ನಿನ್ನ ಕಣ್ಣಾಗ ನೀರು ಹರೀತಿದ್ದದ್ದು ನೋಡಿದರೂ ನನ್ನ ಮನಸ್ಸು ಕರಗಲಿಲ್ಲ.

ಅಪ್ಪ ಇನ್ನೂ ಜೀವಂತ ಇದ್ದಾ. ಜಮೀನು ಪಾಲ ಆಗಿದ್ದಿಲ್ಲಾ. ಆಸ್ತಿಯೊಳಗ ನನಗೂ ಹಕ್ಕು ಇತ್ತು. ಸಣ್ಣ ಪಗಾರದ ಕಾರಕೂನಕಿ ನನಗ ಬೇಕಾಗಿದ್ದಿಲ್ಲ. ನನ್ನ ಯೋಗ್ಯತಾಕ್ಕ ತಕ್ಕಂಥಾ ನೌಕರೀ ಹುಡುಕತಿದ್ದೆ. ನೀ ಅದನ್ನೂ ತಿಳಕೊಳ್ಳಲಿಲ್ಲಾ. ನೀವೂ ಅಣ್ಣಂದಿರ ಹಾಂಗ ಹೊಲದ ದೇಖ-ರೇಖಿ ಮಾಡ್ರಿ ಅಂತಿದ್ದಿ. ಇಷ್ಟು ಕಲತು ಶಾಣ್ಯಾ ಆಗಿ ಒಕ್ಕಲತನಾ ಮಾಡ ಬೇಕು ಅಂದರ ಅದಕ್ಕೂ ವಾದಸತಿದ್ದಿ. ನನ್ನ ಪರಿಸ್ಥಿತಿ ಅರ್ಥ ಮಾಡಿ ಕೊಳ್ಳೊ ಮನಸ್ಸs ಮಾಡಲಿಲ್ಲ.

ಆಗ ನನಗೂ ಪಶ್ಚಾತ್ತಾಪ ಆಗುತಿತ್ತು ಉಮಾನ್ನ ಮದುವಿ ಆಗಬಾರದಿತ್ತು ಅಂತ ಅನಸತಿತ್ತು. ಯಾವಾಗಲೂ ಉಪದೇಶಾ ಮಾಡೂವಂಥಾ ಬುದ್ಧಿವಂತ ಹೆಂಡತಿ ನನಗ ಬೇಕಾಗಿದ್ದಿಲ್ಲ. ಎದುರು ವಾದಿಸಿದಾಗ ನಿನ್ನ ಹೊಡೀತಿದ್ದೆ. ಒಮ್ಮೆ ಅಂತೂ ಕುತಿಗೀ ಹಿಚಿಕಿ ಕೊಲ್ಲೂವಷ್ಟು ಸಿಟ್ಟು ಬಂದಿತ್ತು. ಚೀರಲಿಕ್ಕೂ ನಿನಗ ದನಿ ಇದ್ದಿಲ್ಲ. ಅಷ್ಟು ಕುತ್ತಿಗಿ ಒತ್ತಿ ಹಿಡದಿದ್ದೆ. ಆದರ ಸಣ್ಣ ಅತ್ತಿಗಿ ನೋಡಿ ಬಿಡಿಸಿಕೊಂಡಳು.

ಅಂದ ರಾತ್ರಿ ಅಪ್ಪನ ಕೂಡ ಜಗಳ ಆತು. ಉಮಾನ್ನ ಕೊಂದರ ಪೊಲೀಸರು ನಮ್ಮನ್ನೂ ಹಿಡಕೊಂಡ ಹೋಗ್ತಾರ ಅಂತ ಅಣ್ಣಂದಿರು ವಾದಿಸಿ ಅವರ ಪಾಲಾ ಕೊಟ್ಟು ಹೊರಗ ಹಾಕ್ರಿ ಅಂತ ಹಟಾ ಹಿಡದ್ರು. ಅಪ್ಪ ಒಪ್ಪಿಕೊಳ್ಳಬೇಕಾತು. ಅವ್ವ ತಿರಿಕೊಂಡಿದ್ಲು. ನನ್ನ ಪಾಲಿನ ಜಮೀನು ಮಾರಿ ರೊಕ್ಕಾ ತೊಗೊಂಡು ಮನೀ ಬಿಟ್ಟು ಹೋದೆ. ಮಾಲೂ ಭಾಳ ಸಣ್ಣಾಕಿ ಇದ್ಲು. ಆಕೀಗೆ ಏನೂ ತಿಳೀತಿದ್ದಿಲ್ಲ. ನಿಜವಾಗಿ ನನ್ನs ಉಮಾ ನಡುವೆ ಏನು ನಡೀತಿತ್ತು ಅನ್ನೂದು ಯಾರಿಗೂ ಗೊತ್ತಿಲ್ಲ. ಖರೇನ ನಾನು ಉಮಾನ್ನ ಪ್ರೀತಿ ಮಾಡತಿದ್ದೆ. ಅದಕ್ಕ ಇವತ್ತಿಗೂ ಯಾವ ಹೆಣ್ಣೂ ನನ್ನ ಬದುಕಿನ್ಯಾಗ ಬಂದಿಲ್ಲ.

ಉಮಾ, ಇದ್ದಾಗಂತೂ ನೀ ನನ್ನ ತಿಳಕೊಳ್ಳಲಿಲ್ಲಾ. ಈಗ ನೀನ ಹೋಗಿಬಿಟ್ಟಿ. ನಾ ಯಾರಿಗೆ ಹೇಳಲಿ ? ಏನ ಹೇಳಲಿ, ನನ್ನ ಮನಸ್ಸಿನ ತಳಮಳಾ ಹ್ಯಾಂಗ ಬಿಡಿಸಿ ತಿಳಿಸಲಿ. ಹೇಳಿದರ ನಂಬುವವರು ಯಾರು ? ಬಾಳಣ್ಣಗ ಒಂದಿಷ್ಟು ನನ್ನ ಗುಣಾ ಗೊತ್ತದ. ನಮ್ಮಿಬ್ಬರನ್ನ ಕೂಡಿಸಬೇಕಂತ ಅಂವಾ ಭಾಳ ಪ್ರಯತ್ನ ಮಾಡಿದ. ಆದರ ನೀನೂ ನನ್ನಂಗ ಹಠ ಮಾರಿ. ಗಂಡ ಇಲ್ಲ ಇಲ್ಲಂತ ತಿಳಕೊಂಡು ಬದಕತೇನಿ. ಆದರ ಅವಮಾನಾ ಮಾಡಿಸಿಕೊಂಡು, ಹೊಡಿಸಿಕೊಂಡು ಅವನ ಜತೀಗೆ ಬದುಕೂದು ಸಾಧ್ಯ ಇಲ್ಲಾಂತ ಗುಟ್ಟಾಗಿ ಹೇಳಿಬಿಟ್ಟೆಂತ. ಅದಕ್ಕ ನಾ ಯಾರ ಹಂಗಿನ್ಯಾಗೂ ಇಲ್ಲದ ಸ್ವತಂತ್ರ ಆಗಿ ಬದಕ್ತೇನಿ ಅಂದ್ಯಂತ.

ಎರಡು ಚಕಮುಕಿ ಕಲ್ಲು ತಿಕ್ಕಿದರ ಹುಟ್ಟೂದು ಬೆಂಕೀನ. ಹಾಂಗ ಹುಟ್ಟಿದ ಬೆಂಕಿಯೊಳಗ ನಮ್ಮ ಸಂಸಾರ ಸುಟ್ಟು ಕರಕ ಆಗಿ ಹೋಯ್ತು...

ಜ್ವರ ಇಳಿದಿದ್ದರೂ ನೆನಪಿನ ಝುಳದಲ್ಲಿ ವಿಲಿ ವಿಲಿ ಒದ್ದಾಡುತ್ತಿದ್ದ. ನಿದ್ದೆ ಹಾರಿ ಹೋಗಿತ್ತು.

ಮಾಲಿನಿಯ ಮನೆ ನೋಡಿ ಸಂತೋಷವಾಗಿತ್ತು. ಒಂದೇ ದುಃಖದ ಸಂಗತಿ ಎಂದರೆ ಮಂಗಳ ದೃಷ್ಟಿಯಲ್ಲಿ ತಾನು ದುಷ್ಟ. ಅವ್ವನನ್ನು ಕಾಡಿದ ಗಂಡು ರಾಕ್ಷಸ. ಹೌದಾ ? ಹೌದೋ ಅಲ್ಲವೋ ತಿಳಿಸಲೂ ಕಾಲ ಪ್ರಶಸ್ತವಾಗಿಲ್ಲ. ಇನ್ನೊಮ್ಮೆ ಭೆಟ್ಟಿಯಾದರೆ... ರೆ... ಆಗದಿದ್ದರೆ ಅವಳಿಗೆ ಅಪ್ಪ ಎಂಥವನು ತಿಳಿಯದೇ ಹೋಗಬಹುದು. ತಿಳಿದರೂ ಸಮಾಜದಲ್ಲಿ ತನ್ನ ಅಪ್ಪ ಕೆಟ್ಟವನು ಎಂದು ಆಡಿಕೊಂಡವರಿಗೆಲ್ಲ ತಿಳಿಸಿ ಹೇಳಲು ಆದೀತೆ ? ಉಹುಂ... ಸಾಧ್ಯವಿಲ್ಲ. ಹೀಗೆ ವಿಚಾರ ಮಾಡುತ್ತ ಕುಳಿತರೆ ಹೇಗೆ...? ಅವನು ಎದ್ದ.

ಅಳುತ್ತ ಮಲಗಿದ್ದ ಮಾಲಿನಿ ನಿದ್ದೆ ತಿಳಿದೆದ್ದು ಬಂದಳು. ಅಲ್ಲಿ ಹಾಸಿಗೆಯ ಮೇಲೆ ಅಪ್ಪನ ವಿಲ್‌ನ ಒಂದು ಪ್ರತಿ, ಪುಟ್ಟ ಕಾಗದ ಅವಳಿಗಾಗಿ ಕಾಯುತ್ತಿದ್ದವು.

ಹಿಂಬಡದ ಗಾಯ

ಹಿಂಬಡಕ್ಕಿಂತ ಮೇಲಿನ ಪಾದದ ಮೆತ್ತಗಿನ ಜಾಗದಲ್ಲಿಯ ಗಾಯದ ಸುತ್ತ ಕಾಲು ನೀಡಿ ಕುಳಿತ ದುಂಡವ್ವ ಮತ್ತೆ ಮತ್ತೆ ತೀಡುತ್ತಿದ್ದಳು. ಕಸರನ್ನು ಹೊರಹಾಕಲು ಸ್ವಲ್ಪ ಜೋರಾಗಿಯೇ ಹೆಬ್ಬೆರಳಿನಿಂದ ಒತ್ತಿ ಮುಖ ಕಿವುಚಿ ನೋವು ನುಂಗುತ್ತಿದ್ದಳು.

ಇಪ್ಪತ್ತೊರಸ ಹೊಲದಾಗ ದುಡದ್ರೂ ಹಿಂಗ ಎಂದೂ ಆಗಿರಾಕಿಲ್ಲ. ಕಣ್ಣ ಇಂಗಿ ಹೋಗ್ಯಾವೋ ಏನೋ ಕೋಲಿ ತುಳದು ಕಾಲು ನೂವ ಮಾಡಿ ಕಂಡ ಮೂಲಿಗುಂಪಾಗಿ ಕುತೆ.

ಬೆರಳು ಸುತ್ತುತ್ತಿದ್ದಂತೆ ಅವಳ ಮನಸ್ಸೂ ಗಾಯದ ಸುತ್ತ ತಿರುಗುತ್ತಿತ್ತು. ದಿನಾs ಅರಿಶಿಣ ಎಣ್ಣೀ ಕಲಿಸಿ ತುಂಬಿದೆ. ಮುಟ್ಟಲ ಮುರಕೀ ತಪ್ಪಲ ಹಿಂಡಿದೆ. ದಿನದಿನಕ ನೂವ ಹೆಚ್ಚs ಆತು. ಸಿದ್ದಣ್ಣನಕಿಂತಾ ಬಸವಗ ಕಳ್ಳ ಜಾಸ್ತಿ. 'ಯವ್ವಾ ರಾಮಣ್ಣನ ಕರಕೊಂಡ ಬರ್ತೇನಿ ಈ ಸುಕ್ರಾರ, ಔಷಧಾ ಕೊಡತಾನ. ಲಗ್ಗನ ಕಮ್ಮಿ ಆಗತೈತಿ ಏಳ, ಚಿಂತೀ ಮಾಡಬ್ಯಾಡಾ' ಅಂದ. ಕೊಂಪೊಂಡರ ರಾಮಣ್ಣ ಸೈಕೋಲ ವ್ಯಾಲ ಬಂದಾ. ಅದೇನೋ ಸೆಪ್ಟಿಕ್ ಆಗ್ಯತಿ ಅಂತ ಒಂದ ಸೂಜಿ ಚುಚ್ಚಿ, ಮಲಾಮು ಹಚ್ಚಿ ಗುಳಿಗೇ ಕೊಟ್ಟಾ. ಇಪ್ಪತ್ತ ರೂಪಾಯಿ ಕೀಸೆಕ ಹಾಕೊಂಡ ಹ್ವಾದಾ. ಮಾರಾಯಾ ಮತ್ತ ಮುಂದಿನ ಸುಕ್ರಾರ ಬರತಾನಂತ. ಈಗ ಬಾವು ಜರಾ ಕಮ್ಮಿ ಆಗೇತಿ. ಮತ್ತೂ ಕಮ್ಮಿ ಆಗದಿದ್ದರ ಚಕಡೀ ಕಟಿಗೊಂಡ ಸಿವಿಲ್‌ಕ ಒಯ್ಯಾನಂತ ಬಸಪ್ಪ. ಶಿವನs ಇನ್ನೂ ಏನೇನ ಸೋಸಬೇಕೋ ಈ ಜೀಂವಾ.

ಕೇಳುಗರೇ ಇಲ್ಲದ ದುಂಡವ್ವನ ಮಾತುಗಳು ನಾಡಹೆಂಚಿನ ಮನೆಯ ಗೋಡೆಗೆ ಅಪ್ಪಳಿಸುತ್ತಿದ್ದವು. ಜೀವನ ಚರಿತ್ರೆ ಬರೆಸಿಕೊಳ್ಳಲು ಆಗದ

ಸಾಮಾನ್ಯ ಮನುಷ್ಯಳು ಆಕೆ. ಆದರೂ ಲೋಕ ಬಿಟ್ಟು ಹೋಗುವ ಮೊದಲು ತಮ್ಮ ಬದುಕಿನ ಬಹುಭಾಗವನ್ನು ಬೇರೊಂದು ಜೀವದ ಕಿವಿಗೆ ಬೀಳುವಂತೆ ಮಾಡಿ ಆ ಮೂಲಕ ತಾವು ಇತರರ ಬಾಯಲ್ಲಿ ಬದುಕಬೇಕೆನ್ನುವ ಚಪಲವೇ ಎಲ್ಲರಿಗೂ. ಮೈ ಮುರಿ ದುಡಿತ, ಜವಾಬುದಾರಿ ಬೇರೆಯವರಿಗೆ ಒಪ್ಪಿಸಿ ಮನಸ್ಸಿನ ಮೂಲೆಮೂಲೆಗಳನ್ನು ಗುಡಿಸಿ ಖಾಲಿ ಮಾಡುತ್ತ ಇರುವ ದನ್ನು ಬಿಟ್ಟರೆ ಬೇರೇನು ಕೆಲಸ ಅವರಿಗೆ ?

ಹಾಗೇ ಇನ್ನೂ ಎಷ್ಟೊತ್ತು ಮಾತಾಡುತ್ತಿದ್ದಳೋ ದುಂಡವ್ವ; ನೀಲವ್ವ ಒಳಗೆ ಬಂದದ್ದು ನೋಡಿ ಮಾತಿನ ಧಾಟಿ ಬದಲಿಸಿದಳು.

'ಯಾಕೋ ತಡಾ ಮಾಡಿದಿ ಅಲ್ಲಬೇ ಹಾಲ ಕೊಟ್ಟು ಬರಾಕ. ಬಸ್ ಸಿಗಲಿಲ್ಲೇನ'. ಮಗಳ ಬಾಡಿದ ಮುಖ, ಕೆದರಿದ ತಲೆ ನೋಡಿ ಕಕುಲಾತಿ ಯಿಂದ ಕೇಳಿದಳು. ಬುಟ್ಟೀ ಇಳಿಸಿ ಉಸ್ಸ್ ಎಂದು ಗೋಡೆಗೆ ಆತು ಕುಳಿತ ನೀಲವ್ವ ಕವಕ್ಕನೇ ಸಿಟ್ಟಿಗೆದ್ದಳು.

'ಏನ ಯವ್ವ, ದಿನಾ ನಾ ಏನ ಬಸ್ಸೀಗಿ ಹೋಗ್ತೀನ, ಬಸ್ಸಿಗೆ ಎಡ್ಡ ರೂಪಾಯಿ ಖರ್ಚ ಆಕ್ಕಾವ, ಆದರಾಗ ನಿನಗ ಬಸಣ್ಣಗ ಎಲಡಿಕಿ ಆಗ್ತೈತಿ ಅಂತ ಅದನೂ ಉಳಿಸಿ ನಡದ ಹೋಗಿ ಬರ್ತೀನಿ, ನಾಕೈದ ಮನೀಗಿ ಹೋಗಿ ಬರೂದ ಅಂದರ ತಡಾ ಆಗೂದ ಮತ್ತ, ಸೆರಗಿನಿಂದ ಬೆವರು ಒರೆಸಿಕೊಂಡು ಗಾಳಿ ಬೀಸಿಕೊಂಡಳು. ದುಂಡವ್ವ ಏಳಲಾರದೆ ಕೂತಲ್ಲಿಂದ ಕೈ ಚಾಚಿ ಹರಿವೆಯ ನೀರು ತುಂಬಿಕೊಟ್ಟಳು.

ಗಂಟಲಿಗೆ ಇಳಿದ ತಂಪು ನೀರೂ ನೀಲವ್ವನ ತಳಮಳ ಕಡಿಮೆ ಮಾಡ ಲಿಲ್ಲ. ಈ ದಿನ ಅವಳಿಗೆ ನಾಗಪ್ಪನ ಭೆಟ್ಟಿ ಆಗಿರಲಿಲ್ಲ. ಮನಸ್ಸಿಗೆ ಉತಾಹ ವಿಲ್ಲದೆ ಮೈಯ ಆಯಾಸ ಹೆಚ್ಚಾಗಿತ್ತು. ಸ್ವಲ್ಪ ಸುತ್ತು ಆದರೂ ದಿನಾಲೂ ನಾಗಪ್ಪ ಕೆಲಸ ಮಾಡುವ ಆಫೀಸಿನ ಮುಂದೆ ಹಾಯ್ದು ದೇಸಾಯರ ಮನೆಗೆ ಹೋಗುತ್ತಿದ್ದಳು. ಅಲ್ಲಿ ವಾಚಮನ್ ನಾಗಪ್ಪ ಸ್ಟೂಲ್ ಮೇಲೆ ಕುಳಿತಿರು ತ್ತಿದ್ದ. ಒಂದೊಂದು ಸಲ ಎದ್ದು ಹತ್ತಿರ ಬಂದು ಮಾತಾಡಿಸುತ್ತಿದ್ದ. ಅಲ್ಲಿ ಅವನು ಕಾಣದಿದ್ದರೆ ಅತ್ತಿತ್ತ ಏನೇನೋ ನೋಡಿದಂತೆ ನಟಿಸುತ್ತ

ಬುಟ್ಟಿ ಹೊತ್ತುಕೊಂಡು ನಿಂತೇ ಬಿಡುತ್ತಿದ್ದಳು. ಸಾಹೇಬರ ಕೋಣೆಯಿಂದ ಅವನು ಹೊರಗೆ ಬಂದ ಮೇಲೆ ಮುಖ ನೋಡಿ ನಕ್ಕು ಅಲ್ಲಿಂದ ಮುಂದೆ ಸಾಗುತ್ತಿದ್ದಳು. ಇಂದು ನಿಂತು ನಿಂತು ಕಾಲು ಸೋತರೂ ಅವನು ಬಂದಿರ ಲಿಲ್ಲ.

ಕಟ್ಟಿ ಹತ್ತಿ ಹೋಗಿ ಯಾರ್ನಾದರೂ ಕೇಳಲ್ಯಾ. ಅವರು ಏನ ತಿಳ ಕೊಂಡಾರು. ನೀ ಯಾರು ? ಇಲ್ಲ್ಯಾಕ ಬಂದಿ ಅಂತ ಕೇಳಿದರ ಏನ ಹೇಳ ಬೇಕ. ಏನಾಗಿದ್ದೀತು ಇವಗ ಜರಾ ಬಂದೈತೋ, ಊರಿಗೆ ಹೋಗ್ಯಾನೋ ಕೆಲಸಾನ ಬಿಟ್ಟ ಹೋಗ್ಯಾನೋ ಅವರಪ್ಪ ಬಂದ ಕರಕೊಂಡ ಹೋಗಿ ಮದಿವಿ ಮಾಡಿದ್ನೋ...

ನಾಗಪ್ಪನ ಮದುವೆಯ ವಿಚಾರ ಬಂದಾಗಂತೂ ಅವಳ ತಲೆ ಸಿಡಿಯ ಹತ್ತಿತ್ತು. ಕಣ್ಣಿಗೆ ಬವಳಿ ಬಂದ ಹಾಗೆ ಆಯಿತು. ಕಾಲು ಎಳೆದು ಹಾಕುತ್ತ ಕೆಲಸ ಮುಗಿಸಿ ಮನೆಗೆ ಬಂದಿದ್ದಳು. ಹಾಸಿ ಹೊತ್ತುಕೊಂಡು ಮಲಗಿಬಿಡು ವಷ್ಟು ದಣಿವಾಗಿತ್ತು ಮೈಗೆ-ಮನಸ್ಸಿಗೆ.

ಹಸಿದು ಬರುವ ತಮ್ಮ ತಂಗಿಯರ ಹಾಗೂ ಕಾಲು ನೋವಾಗಿ ಕೈಯಿಂದ ಕೆಲಸವೂ ಸಾಗದೆ ಅಳುವ ಅವ್ವನ ನೆನಪಾಗಿ ರೊಟ್ಟೀ ಬಡಿಯಲು ಎದ್ದಳು. ನಾಕಾರು ರೊಟ್ಟಿ ಬೀಳುವಷ್ಟರಲ್ಲಿ ಎಮ್ಮೆ ಹೊಡಕೊಂಡು ಆರತಿ ಉಡಿತುಂಬ ಕಾರೀಹಣ್ಣು ತುಂಬಿಕೊಂಡು ಬಂದಿದ್ದಳು ಅಕ್ಕನಿಗಾಗಿ. ಚಿಕ್ಕ ತಂಗಿಗೆ ಆರತಿ ಎಂದು ಹೆಸರಿಟ್ಟವಳೇ ತಾನು. ಗೋಡೆಯ ಮೇಲಿನ ಬರಹ ಓದಿ ಹೇಳುತ್ತಿದ್ದನಲ್ಲ ನಾಗಪ್ಪ ಕೀರತಿಗೆ ಒಬ್ಬ ಮಗ ಆರತಿಗೆ ಒಬ್ಬ ಮಗಳು ಎಂದು. ಮತ್ತೆ ಅವನದೇ ನೆನಪು.

"ಯವ್ವಾ ಅಪ್ಪ ಪ್ಯಾಟ್ಯಾಗ ಭೆಟ್ಟಿ ಆಗಿದ್ದ. ನಾಗಣ್ಣ ಅಪ್ಪನ ಕೂಟ ಜಗಳಾ ಮಾಡಿ ಮನೀನ ಬಿಟ್ಟ ಹೋಗಿಬಿಟ್ಟಾನಂತ ಶನಿವಾರನ" ರೊಟ್ಟಿ ಮುರಿಯುತ್ತ ಹೇಳಿದ ಸಿದ್ದಣ್ಣ.

ರೊಟ್ಟಿ ಬಡಿಯುತ್ತಿದ್ದ ನೀಲವ್ವನ ಕೈ ನಿಧಾನವಾಯಿತು. ಹಂಚಿ ನಲ್ಲಿಯ ರೊಟ್ಟಿಗೆ ನೀರು ಹಚ್ಚುವದೂ ಮರೆತಳು. ನೀಳ ಮೂಗಿಗೆ ಇಳಿ

ಯುತ್ತಿದ್ದ ಬೆವರನ್ನು ಎಡಗೈಯಿಂದ ಒರೆಸಿಕೊಳ್ಳುತ್ತ ಮೆಲ್ಲಗೆ ಕೇಳಿದಳು 'ಎಲ್ಲಿ ಹೋಗ್ಯಾನಂತ ?'

'ಏs ತಂಗಿ ಒಲಿಮ್ಯಾಲಿನ ರೊಟ್ಟಿ ಹೊತ್ತಾಕತ್ತೇತಿ ತಗೀ ಅದನ್ನ' ಮಗಳ ಮನದ ಮೂಕ ಸಂಕಟ ತಿಳಿದ ದುಂಡವ್ವ ಕೂತಲ್ಲೇ ಮಿಸು ಕಾಡಿದಳು.

ಎಲ್ಲಿ ಹೋಗ್ಯಾನೋ ಅಂವಗೂ ಗೊತ್ತಿಲ್ಲಂತ. ಮನ್ಯಾಗ ಮುಕ್ಕ ಜ್ವಾಳ ಇಲ್ಲಾ, ಕರ್ಚಿಗೆ ರೊಕ್ಕಾ ಕೊಡೂ ಅಂದ 'ಅಪ್ಪ'. ಯವ್ವಾs ನಿನ್ನ ಕೇಳದs ಶಾಮಣ್ಣೋರ ಅಂಗಡೀಗೆ ಶೇಂಗಾ ಹಾಕ್ಕೀನಿ ಅಂತೇಳಿ ಎಡ್ಡನೂರು ರೂಪಾಯಿ ಇಸಗೊಟ್ಟೇನಿ. ಯಕ್ಕಾs ಶೇಂಗಾ ಹಿಂಡ್ಯಾಗ ಒಂದೀಟ ಮಸರ ನೀಡಬೇ. ಏs ಆರತೀ ಆ ಪುಸ್ತಕಾ ತಗದಿಟ್ಟ ಬಾ ನೀನೂ ಉಣ್ಣಾಕ.

'ಆತ ಬಿಡಪಾ, ಹಗಲೂ ಹನ್ನೆಡ ತಾಸ ರಗತಾ ಸುಟಗೊಂಡ ಹೊಲ ದಾಗ ದುಡ್ಯಾವರ ನೀನು, ಬಸಣ್ಣ ಆರಾಮಾಗಿ ಕರ್ಚಿಗೆ ಇಸಗೊಂಡ ಹೋಗಾಂವ ನಿಮ್ಮಪ್ಪ'.

ಅವ್ವನ ಚುಚ್ಚುಮಾತಿನಿಂದ ಸಿಟ್ಟಾದ ಬಸಣ್ಣ ಹೇಳಿದ. 'ಏನ ಮಾತಾಡ್ತೀಯುಬೇ ಅಣ್ಣ ಕೊಟ್ಟದ್ದ ಯಾರಿಗೆ ? ಅಪ್ಪಗ ಅಲ್ಲೇನು. ಈಟ ದಿನಾ ನಾಗಣ್ಣನ ಪಗಾರದಾಗ ಇದ್ದರಲ್ಲಾ ಅಪ್ಪ ಅಣ್ಣ. ಈ ಹೊಲದಾಗ ಅವರಿಗೂ ಪಾಲ ಇಲ್ಲೇನ ?'.

'ಹೌದೋ ಯಪ್ಪಾ. ಪಾಲ ಯಾಕ, ಮಾಲ್ಕೀನ ಆವಂದೈತಿ. ಅಂವಾ ಉಪಾಸ ಸಾಯಲಿ ಅಂತೀನೇನ ನಾನು ? ನಾ ಏನ ತುಸಾ ಸಣ್ಣ ಆಗಿಲ್ಲ. ನಾಗಣ್ಣ–ಪುತಳೆವ್ವನ ಕಾಲಾಗ ಮಾಡಿ ಮಾಡಿ ಕೈಯಾಗಿನ ಗೆರಿ ಸಂವದಾವ. ನೀವು ಹುಟ್ಟೂಕಿಂತ ಮುಂಚೇ ಹಿರ್‍ಯಾನ ಕೂಡ ಹೊಲದಾಗ, ಮನ್ಯಾಗ ದುಡದು ದುಡದು ಮೈಯಾಗಿನ ಎಲಬು ಸವದು ಸಿಂಪಿ ಆಗ್ಯಾವೋ, ನನ ಜೀವದ ಖಬರ ಇಲ್ಲದ ಕೆಲಸಾ ಮಾಡೀನಿ, ಮಲಮಕ್ಕಳಿಗೆ ಬಾಯಾಗಿನ ತುತ್ತ ತಗದ ತಿನಸೇನಿ. ಇದ ಯಾವದೂ ದರಕಾರ ಇಲ್ಲಾಂಗ ಪುತಳೀಗೆ ಮದುವೀ ಮಾಡಿದಾ ನಿಮ್ಮಪ್ಪ ನೀಲವ್ವಗ ಏನ ಮಾಡಿದಾ ? ಮಗನ್ನ

ಕಟಿಗಂಡು ಹೊರಗ ಹೋಗಿಬಿಟ್ತ್ಯಾ, ನನ್ನ ನಡುನೀರಾಗ ಕೈ ಬಿಟ್ಟ್ ಹ್ವಾದಾ' ಕೈಯಲ್ಲಿಯ ರೊಟ್ಟಿ ನೆಲಕ್ಕಿಟ್ಟವಳೇ ದುಂಡವ್ವ ಜೋರಾಗಿ ಅಳಹತ್ತಿದಳು.

'ಯವ್ವಾ ಇಕಾ ಬಿಸಿ ಬಿಸಿ ಚಾ ಇಟ್ಟೇನಿ ಕುಡಿ. ಗುಳಿಗೀ ನುಂಗಿ ನೀರ ಕುಡಿ. ಅಳಬ್ಯಾಡ. ಸುಮನ ಚಿಂತೀ ಮಾಡಿ ತರಾಸ ಮಾಡಕೋ ಬ್ಯಾಡಾ. ಮಕ್ಕೋ, ಹೊರಗ ಹೋಗಿ ಬರೂವಂತಿ ಏಳ.' ಎಲ್ಲ ಮರೆತಂತೆ ನೀಲವ್ವ ಉಪಚರಿಸಿದಳು ಅವ್ವನನ್ನು. ಅವ್ವ ಬಹಳ ಘಾಸಿಗೊಂಡಿದ್ದಾಳೆಂದು ಅವಳಿಗೆ ಗೊತ್ತು. ಅದರಲ್ಲೂ ಅಪ್ಪ ನಾಗಪ್ಪ ಮನೆಬಿಟ್ಟು ಹೋದಾಗಿನಿಂದ ಅದೇ ಚಿಂತೆ ಅವಳಿಗೆ.

ಕಾಲು ಚಾಚಿ ಮಲಗಿ ಕೌದಿ ಮುಸುಕು ಎಳೆದರೂ ನೀಲವ್ವನ ಮುಚ್ಚಿದ ಕಂಗಳ ಹಿಂದೆ ಸಂತೆ ನೆರೆದಿತ್ತು...

ದೊಪ್... ದೊಪ್... ತತ್ತರಿಸುತ್ತ ಒಂದೊಂದೇ ಹೆಜ್ಜೆ ಇಡಲು ಕಲಿಯುತ್ತಿದ್ದ ತನ್ನನ್ನು ಹಿಂದಿನಿಂದ ನೂಗಿಸಿದ್ದಳು ಪುತಳಿ. ಚಿವುಟುವದು. ನೂಗಿಸುವದು, ಅಳಿಸುವದು ಅವಳಿಗೆ ದಿನನಿತ್ಯದ ಆಟ. ತಾನು ಅಳುತ್ತ ನಿಂತಾಗ ರಮಿಸಿ, ಕಣ್ಣೀರು ಒರೆಸಿ, ನೀರು ಕುಡಿಸಿ ಎತ್ತಿಕೊಳ್ಳುವವ ನಾಗಪ್ಪನೇ. ಅವ್ವ ಎಲ್ಲಿ ಇರುತ್ತಿದ್ದಳೋ. ತನಗೆ ತಿನಿಸುವವ, ಉಣಿಸುವವ ಎಲ್ಲ ಅವನೇ. ಅವನ ಜೊತೆಗೇ ಬೆಳೆದರೂ ಅವನು ಮನೆ ಬಿಟ್ಟು ಹೋಗಲು ಕಾರಣಳಾದವಳು ತಾನೇ. ಈಗ ಅಪ್ಪನನ್ನೂ ಬಿಟ್ಟು ಒಂಟಿಯಾಗಿ ಎಲ್ಲಿದ್ದಾನೋ, ಹೇಗಿದ್ದಾನೋ ಗಂಟಲು ಕಟ್ಟಿ ಎಷ್ಟು ಒತ್ತಿಕೊಂಡರೂ ಅಳು ಉಕ್ಕಿ ಬಂದಿತು.

ಮಗಳ ಬಿಕ್ಕಳಿಕೆ ಕೇಳಿದ ದುಂಡವ್ವನ ಮಂಪರು ಹಾರಿಹೋಯಿತು. ಕಣ್ಣಿನ ಕತ್ತಲೆಯ ಮುಂದೆ ಕೆಂಪು ಗೋಲ ಗಿರಿಗಿರಿ ತಿರುಗುತ್ತಿತ್ತು...

ಅದೇ ಸೂರ್ಯ ಮುಳುಗುತ್ತಿದ್ದ, ಆಕಾಶವೆಲ್ಲ ಕೆಂಪಗೆ ಉರಿಯುತ್ತಿತ್ತು. ಎಲ್ಲೆಲ್ಲೂ ಬೆಳಕು. ಚಿಕ್ಕ ಚಿಕ್ಕ ಕರಿಚುಕ್ಕಿಯ ಸಾಲು ಗಾಳಿಯಲ್ಲಿ ತೇಲುತ್ತಿತ್ತು. ಹಕ್ಕಿಗಳೆಲ್ಲ ಗೂಡಿಗೆ ಮರಳುತ್ತಿದ್ದವು. ದುಂಡವ್ವನೂ ಹೊಸ ಗೂಡನ್ನು ಹುಡುಕಿ ಹೊರಟಿದ್ದಳು. ಮನಸಿನ ತುಂಬ ಬೆಳಕು ತುಂಬಿಕೊಂಡು ಆಸೆಗಳ

ಉಯ್ಯಾಲೆಯ ಮೇಲೆ ಹಾರುತ್ತ ಹೊಸ ಊರಿನ, ಹೊಸ ಗಂಡನ ಮನೆಗೆ ಬಂದಿದ್ದಳು. ಪುಟ್ಟ ಮಗಳು ನೀಲೂನನ್ನು ಬಗಲಲ್ಲಿ ಇಟ್ಟುಕೊಂಡು ತಲೆಯ ಮೇಲೊಂದು ಗಂಟು ಹೊತ್ತು ಹರದಾರಿ ದೂರ ನಡೆದು ಹೊಲದಲ್ಲಿಯ ಮನೆಗೆ ಕಾಲಿಟ್ಟಿದ್ದಳು. ಒಳಗೆ ಹರುಷ ಉಕ್ಕುತ್ತಿದ್ದರೂ ನಗುತ್ತಿರಲಿಲ್ಲ. ಸುತ್ತ ಪ್ರಕೃತಿಯ ಚೆಲುವು ಸೂರೆಗೊಂಡಿತ್ತು. ಮನೆ ಹತ್ತಿರದ ಮಾವಿನ ಗಿಡದಲ್ಲಿ ಹೂವು ಸುರಿದಿತ್ತು. ಬೇಲಿಯ ಮೇಲಿನ ಹೂಗಳು ಬಣ್ಣ ಬಣ್ಣವಾಗಿದ್ದವು. ಹಿತ್ತಲಲ್ಲಿಯ ನುಗ್ಗೇಗಿಡ, ದಾಸವಾಳ, ಕರಿಬೇವು ಹಸಿರು ಮುರಿಯುತ್ತಿದ್ದವು. ದುಂಡವ್ವನ ಅರಳಿದ ಕಣ್ಣುಗಳು ಮೂಕವಾಗಿ ಸುತ್ತ ದಿಟ್ಟಿಸುತ್ತಿದ್ದವು. ಮಗಳಿಗೆ ಹಸಿವಾಗಿ ಅಳುತ್ತಿರುವ ಎಚ್ಚರವೂ ಆವಳಿಗಿರಲಿಲ್ಲ.

ತಲೆ ತುಂಬ ಮುಸುಕು ಹಾಕಿ ಹೊರಗೆ ಹೊರಸಿನ ಮೇಲೆ ಕುಳಿತ ಗಂಡಸರನ್ನು ದಾಟಿ ಮನೆ ಬಾಗಿಲಿಗೆ ಬಂದಳು. ಆರತಿ ಮಾಡಿಸಿಕೊಂಡು ಹೊಸಿಲ ಮೇಲಿಟ್ಟ ಸೇರು ಒದ್ದು ಸೂರೆಮಾಡಿ ಒಳ ಹೋಗುವ ಸಂಭ್ರಮವೆಲ್ಲ ಅವಳ ಮೊದಲ ಮದುವೆಯಲ್ಲೇ ಮುಗಿದು ಹೋಗಿತ್ತು.

'ಒಳ್ಳ್ಯಾಕ ಬಾರಬೇ ದುಂಡವ್ವಾ. ಇಕಾ ಇನಮ್ಯಾಲೆ ಇದs ನಿನ ಮನೀ ಗುರಲಿಂಗಪ್ಪ ಗರೀಬ ಮನಿಶ್ಯಾ. ಹೇಣ್ತಿ ಸತ್ತಾಗಿಂದ ಕೈ ಬಾಯಿ ಸುಟಗೊಂಡ ಈ ಎಡ್ಡ ಮಕ್ಕಳ್ನ ಜ್ವಾಪಾನಾ ಮಾಡ್ಯಾನ. ಇನ ಮ್ಯಾಲೆ ನೀನs ಇವಕ ತಾಯಿ. ಏ ಬರ್ರಿ ಇಲ್ಲೆ. ಪುತಳೆವ್ವ, ನಾಗಪ್ಪ ಬರ್ರಿಲ್ಲೆ ಇಕೀ ನಿಮ್ಮವ್ವ. ನಿಮ್ಮಪ್ಪ ಕರಕೊಂಡ ಬಂದಾನ ಬರ್ರಿಲ್ಲೆ ಹತ್ತರ' ಹತ್ತಿರದ ಮನೆ ಹಿರಿಯಳು ನಿಂಗಮ್ಮ ಸ್ವಾಗತಿಸಿದ್ದಳು.

ಬಗಲಲ್ಲಿದ್ದ ಮಗಳನ್ನು ಕೆಳಗೆ ಇಳಿಸಿ ಕೈ ಚಾಚಿದಳು ದುಂಡವ್ವ. ಇವಳನ್ನು ನೋಡಲು ಕೂಡಿದ ಹೆಂಗಸರ ಮಧ್ಯೆ ನಿಂತಿದ್ದ ಎಂಟು ವರ್ಷದ ಪುತಳಿ ಹೊಸಬಳನ್ನು ದುರುದುರು ನೋಡುತ್ತ ಅಲ್ಲಿಯೇ ನಿಂತಳು. ನಿಂಗಮ್ಮ ನೂಗಿಸಿದರೂ ಹೆಜ್ಜೆ ಮುಂದಿಡಲಿಲ್ಲ. ಆರು ವರ್ಷದ ನಾಗೂ ಹಿಂಜರಿಯುತ್ತ ಮುಂದೆ ಮುಂದೆ ಬಂದ. ಹೊಸ ಅವ್ವನ ಚಾಚಿದ ಕೈ ಹಿಡಿದುಕೊಂಡು ಅವ್ವಾ ಅಂದ. ಅದೇನು ಮಾಯೆ ಮುಸುಕಿತೋ ದುಂಡವ್ವನಿಗೆ ನಾಗಪ್ಪನನ್ನು ಅಪ್ಪಿಕೊಂಡಳು. ಪಾಪ ತಾಯಿ ಇಲ್ಲದ ತಬ್ಬಲಿ.

ಅವಳ ಕಣ್ಣೀರು ಅವನ ಕೂದಲು ಹಸಿಮಾಡಿತು. ಅವ್ವನ ಅಪ್ಪುಗೆಯಲ್ಲಿ ನಾಗಪ್ಪ ಮಿಸುಕಾಡಿದ. ಪುಟ್ಟ ಪುಟ್ಟ ಕೈಗಳು ಅವನ ಬೆನ್ನು ತಟ್ಟುತ್ತಿದ್ದವು. ಅವ್ವನನ್ನು ಬಿಟ್ಟು ನೀಲೂನನ್ನು ಅವುಚಿಕೊಂಡ ನಾಗಪ್ಪ.

ಪುತಳಿಗೆ ಸಿಟ್ಟು ಬಂತು. ಮೂಗು ಹಿಗ್ಗಿಸಿ ಅರಚಿದಳು. 'ಇಕೀ ಯಾರು ? ಇಲ್ಯಾಕ ಬಂದಾಳ ?'

'ಆಕೀನೂ ನಿಮ್ಮಾಕೀನs. ನೀಲೂ ನಿನ ಹೊಸಾ ಅವ್ವನ ಮಗಳು. ಅವರಪ್ಪ ಸತ್ತಾನ. ಇನ್ನ ಮ್ಯಾಲೆ ನಿಮ್ಮಪ್ಪನs ಆಕೀಗೂ ಅಪ್ಪ. ಆಕಿನೂ ಇಲ್ಲೇ ಇರತಾಳ. ನಿಂಗಮ್ಮ ರಮಿಸಿ ಹೇಳಿದಳು ದುಂಡವ್ವನ ಇಳಿದ ಮೋರೆ ನೋಡುತ್ತ.

'ಥೂಥೂs ಏ ನಾಗ್ಯಾ ಆ ಕೊಳಕೀನ ಯಾಕ ಮುಟ್ಟಿದ್ಯೋ. ಇಳಿಸ ಆಕೀನ್ನ. ನಾ ಆಕೀ ಕೂಡ ಇರಾಕ ಒಲ್ಲೆ. ಆಕೀನ್ನ ಹೊರ ಹಾಕ್ರಿ ನಾ ಒಲ್ಲೆ' ಚೀರುತ್ತ ಪುತಳಿ ಹೊರಗೆ ಓಡಿ ಹೋಗಿ ಅಪ್ಪನ ತೊಡೆಯ ಮೇಲೆ ಬಿದ್ದಳು.

'ಹಾಂಗೆಲ್ಲಾ ಅನಬಾರದವ್ವ. ಅಳಬ್ಯಾಡಾ ಸುಮ್ಕಿರು. ಇಕಾ ಅವಲಕ್ಕಿ ತಿನ್ನು, ಚಾ ಕುಡಿ. ಸುಮ್ಕಿರು ಅಳಬಾರ್ದು' ಅಪ್ಪ ಕೊಟ್ಟ ಅವಲಕ್ಕಿ ನೆಲಕ್ಕೆ ಚೆಲ್ಲಿ ಕಾಲು ದಪ ದಪ ಬಡಿದು ನೆಲಕ್ಕೆ ಬಿದ್ದು ಉರುಳಾಡಿ ಅತ್ತಳು ಪುತಳಿ.

'ತಾಯಿ ಸತ್ತ ಮಗಳು ಅಂತ ಭಾಳ ಸಲಿಗೀ ಕೊಟ್ಟೀಯೇನೋ ಗುರಪ್ಪಾ' ಬಾಯಿ ಮುಕ್ಕಳಿಸಿ ಮೀಸೆ ಒರೆಸುತ್ತ ಕೇಳಿದ ಊರ ಹಿರಿಯ ನೊಬ್ಬ. ಹೊಸ ಹೆಂಡತಿ ಮನೆಗೆ ಬಂದ ದಿನವೇ ನಡೆಯುತ್ತಿದ್ದ ರಗಳೆ ನೋಡಿ ಗುರಪ್ಪ ಸಿಟ್ಟಿಗೆದ್ದು ಪುತಳಿಗೆ ಒಂದೇಟು ಕೊಟ್ಟ. ಆಮೇಲೆ ಮನಸ್ಸು ಸಣ್ಣದು ಮಾಡಿಕೊಂಡು ತನ್ನ ಬಗೆಗೇ ಅಸಮಾಧಾನಪಟ್ಟುಕೊಂಡ.

ಬಂದ ಜನವೆಲ್ಲ ಚದುರಿದ ಮೇಲೆ ಪುತಳಿಯ ಸೋದರಮಾವ ಮಲ್ಲಣ್ಣ ಒಬ್ಬ ಹಿಂದೆ ಉಳಿದಿದ್ದ. ಅತ್ತು ಅತ್ತು ಸೋತು ಉಣ್ಣದೆ ಮಲಗಿದ್ದ ಪುತಳಿಯ ತಲೆ ತಟ್ಟುತ್ತ ಮಲ್ಲಣ್ಣ ಹೇಳಿದ್ದ.

'ನೀ ಏನ ಚಿಂತೀ ಮಾಡಬ್ಯಾಡ ಗುರಣ್ಣಾ. ದುಂಡವ್ವನ್ನ ನಾ ಸಣ್ಣಾಕಿದ್ದಾಗಿಂದ ನೋಡೀನಿ. ಛೆಲೂ ಹೆಣಮಗಳು. ದುಡಿಮಿಗಾರ್ತಿ. ಬಾಳೇವಂತಿ. ಪಾಪ ಮದುವಿ ಆಗಿ ಮೂರ ವರಸಕ್ಕ ಗಂಡ ಸತ್ತ. ಅತ್ತೀ ಮನಿಯವರು ಕೂಳಿಗಿ ದಂಡ ಅಂತ ಹೊರಗ ಹಾಕಿದ್ರು. ತುಂಬಿದ ಬಸಿರಿ. ಅಣ್ಣ ಅತ್ತಿಗಿ ಕತ್ತೀ ಹಾಂಗ ದುಡಿಸಿಕೊಂಡರು. ಅನೋಲಿ ಸೋಸಿಗೊತ ಬಸರು ಬಾಣಂತನಾ ಮಾಡಿಕೊಂಡ್ಳು. ಕೂಸಿನ್ನ ಕಟಿಕೊಂಡು ಮಂದೀ ಹೊಲಕ್ಕ ದುಡಿಯಾಕ ಹೋಗತಿದ್ಲು. ಆಕೀನೂ ತಬ್ಬಲೀನ. ನೆಳ್ಳಂತ ಅಣ್ಣನ ಮನ್ಯಾಗ ಇರತಿದ್ಲು. ನಿನಗೂ ಒಂದು ಜೋಡ ಆತಲ್ಲ. ನನ ತಂಗೀ ಕೂಡ ಇದ್ದಾಂಗ ಆಕೀನೂ ಚಂದಾಗಿ ಬಾಳಸು. ಹಾಂ. ನಾಕ ದಿನಾ ನಾ ಹುಡಗೂರ್ನ ಊರಿಗೆ ಕರಕೊಂಡ ಹೋಕ್ಕೇನಿ. ಮಕ್ಕ್ಯೊಳಾಕ ಹೋಗಿನ್ನ ಎಂದ ಮಲ್ಲಣ್ಣ ಮೀಸೆಯಲ್ಲಿಯೇ ಮುಗುಳು ನಕ್ಕ. ನಾಗಪ್ಪ ಅವ್ವನ ಸೆರಗು ಬಿಟ್ಟು ಸರಿದಿರಲಿಲ್ಲ. ರಾತ್ರಿ ಗುರಪ್ಪ ಒಳಗೆ ಬಂದು ನಾಗೂ, ನೀಲೂರ ನಡುವೆ ಮಲಗಿದ್ದ ಹೆಂಡತಿಯನ್ನು ತಲೆ ನೇವರಿಸಿ ದುಂಡೀ ಎಂದು ಮೆತ್ತಗೆ ಕರೆದು ಎಚ್ಚರಿಸಿದ್ದ...

ಕಾಲು ಸರಿಸಿ ಮಲಗಲು ಹೊರಳಿದ ದುಂಡವ್ವ ಸಣ್ಣಗೆ ನರಳಿದಳು. ಎರಡನೆಯ ಗಂಡನಿಗೂ ಎರಡು ಮಕ್ಕಳನ್ನು ಹೆತ್ತುಕೊಟ್ಟ ದುಂಡವ್ವ ಮತ್ತೆ ರಾಗ ತೆಗೆದಳು. 'ನನ್ನ ಬಿಟ್ಟ ಹ್ವಾದೆಲ್ಲೋ ನಾ ಏನ ತೆಪ್ಪ ಮಾಡಿದ್ನಿ. ಐದ ಮಕ್ಕಳ್ನ ಜ್ವಾಪಾನಾ ಮಾಡಿ ದೊಡ್ಡಾವರನ್ನ ಮಾಡಿದ್ನಿ. ಇನ ಮಕ್ಕಳ ಸುಕಾ ಉಣಬೇಕಂದರ ಮಗನ ಕರಕೊಂಡ ಎದ್ದs ಬಿಟ್ಟೆಲ್ಲೋ.'

'ಇದಕೆಲ್ಲಾ ನಾನs ಕಾರಣ ಯವ್ವಾ. ನಾನs ಹುಟ್ಟಬಾರದಿತ್ತು. ಅಂದರ ಈ ಸಂಕಟ ನಿನಗ ಬರತಿದ್ದಿಲ್ಲ.'

'ಅಳಬ್ಯಾಡ ನನ ಮಗಳ. ನೀ ಸುಕದಿಂದ ಇರಬೇಕ. ಚೆಂದಾಗಿ ಜ್ವಾಪಾನಾ ಮಾಡಬೇಕಂತ ನಾ ಈ ಮದಿವಿ ಮಾಡಿಕೊಂಡ್ನಿ. ಇಲ್ಲಿಗ ಬಂದ ನೀ ಏನ ಸುಕಾ ಕಾಣಲಿಲ್ಲ. ಯವ್ವಾ ನಿನ್ನ ನಸೀಬ ಖೊಟ್ಟಿ ಐತಿ. ನಾ ಅವನ ಮಕ್ಕಳ್ನ ಪಕ್ಕದಾಗ ಇಟಕೊಂಡ ಪಿರುತಿಯಿಂದ ನೋಡಿಕೊಂಡೆ. ನಿನ ತಲೀ ಮ್ಯಾಲೆ ಎರಡ ಅಕ್ಕೀಕಾಳ ಹಾಕೂ ಮನಸ ಮಾಡಲಿಲ್ಲ ಅಂವಾ. ಆ

ನಾಗ್ಯಾನೂ ಹಂತಾವನ ಅಪ್ಪನ ಮನಸಿನ ವಿರುದ್ಧ ನಿನ್ನ ಮಾಡಿಕೊಂತೀನಿ ಅಂತಾನ. ಪಿರುತಿ ಪಿರುತಿ ಅಂತ ತಾನೂ ಹಾಳಾದಾ. ನಿನ್ನೂ ಹಾಳಗೆಡಿಸಿದಾ. ಹಿರ್ಯಾ ನೋಡಿದರ ಮಗನ ಕಟಿಗೊಂಡು ಹೋಗಿಬಿಟ್ಟಾ. ಯಾಕ ಸಿದ್ದಣ್ಣ, ಬಸಣ್ಣ ಅವನ ಮಕ್ಕಳs ಅಲ್ಲೇನು. ಅವರದೇನ ಕಾಳಜೀ ಐತೇನ ಅಂವಗ.'

'ದಿನಾs ಇದs ಹಾಡಾತ ಇಕೀದು' ಗೊಣಗುತ್ತ ಸಿದ್ದಣ್ಣ ಬಸಣ್ಣ ಎದ್ದು ಬಂದರು. 'ತಲೀ ಗಿಲೀ ಕೆಟ್ಟೈತೇನ ಯವ್ವಾs. ಯಾಕ ಹಾಂಗ ಒದರತೀ ಆಗಲಿಲ್ಲ ಹೋಗಲಿಲ್ಲ. ನೀಲಕ್ಕಗ ಮದುವಿ ಆಗಲಿಲ್ಲಂತ ಅಳತೀ ಯಲ್ಲ. ಆಕಿ ನೋಡಿದರ ಆದರ ನಾಗಪ್ಪನ್ನ ಆಗ್ತೀನಿ ಇಲ್ಲಾಂದರ ಹಾಂಗs ಇರತೀನಿ ಅಂತಾಳ. ನಾಗಣ್ಣನೂ ಅದs ಹಟಾ ಹಿಡದಾನ. ನಿನಗ ಅಪ್ಪಗ ಈ ಮದಿವೀಗಿ ಮನಸ್ಸಿಲ್ಲ ತಾವs ಮಾಡಿಕೊಂತೀವಿ ಅಂತ ನಾಗಣ್ಣ ಅಂದರ ಅದಕೂ ಹೂಂ ಅನ್ನಾಂಗಿಲ್ಲ. ಅದಕs ದಿನಾ ಒಂದಕೂ ಜಗಳ ಆಗಿ ಹೊಡಿ ಬಡಿ ಮಾಡಿ ರಂಬಾಟಾ ಆಗಿ ಅಪ್ಪ ಅಣ್ಣನ ಕರಕೊಂಡ ಮನೀ ಬಿಟ್ಟಹೋಗಿಲ್ಲೇನ?'

ಸಿದ್ದಣ್ಣನ ಮಾತು ಮುಗಿಯುವದೇ ತಡ ಬಸಪ್ಪನೂ ಕೂಗಿದ. 'ಹಾಡಿದ್ದ ಹಾಡೋ ಕಿಸಬಾಯಿ ದಾಸನಂಗ ದಿನಾ ಅತಗೋತ ಕೂತರ ಏನಾಗತೈತಿ. ಹೊಲದಾಗ ದುಡದು ದಣದ ಬಂದರ ತಲೀ ಚಿಟ್ಟ ಅಂತೈತಿ. ಒಂದೀಟರೆ ಮನ್ಯಾಗ ಸಾಂತೀ ಐತ್ಯಾ' ಹೆಂಗಸರಿಬ್ಬರೂ ಹಲ್ಲುಕಚ್ಚಿಕೊಂಡರು.

'ಯವ್ವಾ ನೀವೇಟ ಹಟಮಾರಿ ಅದೀರೋ ಅದಕ್ಕಿಂತ ಹೆಚ್ಚ ಹಟಮಾರಿ ಅದಾನ ನಾಗಣ್ಣ. ಏಟ ಸಂಬಾವಿತ ಒಳ್ಳೇವ ಅದಾನ ಆಟs ಜಿದ್ದಿನವನೂ ಅದಾನ, ಅಪ್ಪ ಭೆಟ್ಟಿ ಆಗಿದ್ನಂತ ಹೇಳಿದ್ನೆಲ್ಲ. ಎಲ್ಲಾ ಹಕೀಕತ್ ಇನ್ನೂ ಹೇಳಿಲ್ಲ ನಿನ ಮುಂದ.'

'ಏನೋ ಸಿದ್ದಣ್ಣಾ. ಮತ್ತೇನೈತಿ ಸುದ್ದಿ ?'

'ಅಪ್ಪ ಹೇಳತಿದ್ದಾ, ನೌಕರೀ ಸಿಕ್ಕ್ಯಾಗಿಂದ ಹಂತೆಂತಾ ಮನಿತನದ ಹೆಣ್ಣ ಬರಾಕಹತ್ಯಾವ. ಎಲ್ಲಾನೂ ಒಲ್ಲೀನ ಅನಕೊಂಡ ಕುಂತಾನು. ಹಿರೇರು ನನ್ನ ಬೈತಾರು; ಮೂವತ್ತ ವರ್ಷ ಆಗಾಕ ಬಂದರೂ ಮಗ್ಗ ಮದುವೀ

ಮಾಡವೊಲ್ಲಿ ಅಂತ. ಮಲ್ಲಣ್ಣನೂ ಅವನಂತs ಮಾತಾಡತಾನು. ನೀಲವ್ವ ಏನ ನನ ತಂಗಿ ಅಲ್ಲ. ಅಪ್ಪ ಬ್ಯಾರೆ ಅವ್ವ ಬ್ಯಾರೆ ಮಾಡಿಕೊಂಡರ ಆಕೀನ್ನs ಮಾಡಿಕೊಳ್ಳಾಂವ ಇಲ್ಲಾಂದರ ಮದಿವೀನs ಆಗಂಗಿಲ್ಲ ನೀ ಹಿಂಗ ಮದುವಿ ಆಗ ಅಂತ ಗಂಟ ಬೀಳಬ್ಯಾಡ. ನಾ ಈ ಮನ್ಯಾಗೂ ಇರಾಂಗಿಲ್ಲ. ನಿನಗ ಒಂದ ಪೈಸಾ ಕೊಡಾಂಗಿಲ್ಲ. ಮನೀ ಬಿಟ್ಟs ಹೋಗತೀನಿ. ನೀ ಹೋಗಿ ನಿನ ಹೆಂಡ್ರು ಮಕ್ಕಳ ಕೂಟ ಹೊಲದ ಮನ್ಯಾಗ ಸುಕದಿಂದ ಇರಹೋಗ ಅಂತ ಜಗಳಾ ಮಾಡಿ ಹೋಗ್ಯಾನಂತಬೇ, ಅದಕs ಅಪ್ಪ ನನ್ನ ರೊಕ್ಕಾ ಕೇಳಿದ್ದು.

'ಹಿರ್‍ಯಾಗೇನ ತರಾಸ ಆಕ್ಕೈತಿ ಬಿಡು. ಅದಾಳಲ್ಲ ದೊಡ್ಡ ಮಗಳು ಪುತಳಿ ಚೆಂದುಳ್ಳಿ ಚೆಲುವಿ ಪಿರೂತಿಯಾಕಿ ಅಪ್ಪನ್ನ ಮನ್ಯಾಗ ಇಟಕೊಂತಾಳ. ನನಗ ದುಕ್ಕ ಆದಟು ಕುಷಿ ಆಕೀಗೆ, ನನ್ನ ಜೀಂವಾ ತಿಂದಾಳ. ನನ್ನ ಕಾಡಾಕ ಸವತಿ ಬಿಟ್ಟ ಹೋಗ್ಯಾಳೋ ಏನೋ ಇಕೀನ್ನ.' ದುಂಡವ್ವ ಎದ್ದು ಕೂಡುತ್ತ ಮೂಗು ಸೀಟಿದಳು.

'ಇಲ್ಲಬೇ ಆಕೀನೂ ಕೈ ಬಿಟ್ಟಾಳ ಈಗ ಅಕ್ಕನ ಗುಣಾ ಗೊತ್ತಲ್ಲ ನಿನಗ. ಅಪ್ಪ ಮೊದಲಿನ ಹಾಂಗ ಈಗ ಆಕೀ ಮನೀ ತುಂಬಾಂಗಿಲ್ಲ ನೋಡ ಅದಕs ನೀ ಇನ ಮ್ಯಾಲೆ ನಮ್ಮನೀಗೆ ಬರಬ್ಯಾಡಾ. ನನ ಗಂಡಗ ಸೇರಾಂಗಿಲ್ಲ ಅಂತ ಹೇಳ್ಯಾಳಂತ. ಊಟಕ್ಕ ಕುಂತಾಗ ತಂಗಳ, ಹಳಸಿದ್ದು ಹಾಕಿದ್ಲಂತ. ಅಪ್ಪನ ಕಣ್ಣಾಗ ನೀರs ಬಂದಿದ್ವು. ಭಾಳ ನರಮ ಆಗ್ಯಾನ ಅಪ್ಪ ಈಗ. ನಾವ ಹೋಗಿ ಬಾರೋ ಯಪ್ಪ ಮನೀಗೆ ಅಂದರ ಬರೂ ಹಾಂಗ ಆದಾನ. ತಾನs ಮನೀ ಬಿಟ್ಟು ಹೋಗ್ಯಾನ ಅಂದಮ್ಯಾಲೆ ತಾನs ತಿರಿಗಿ ಬರಾಕ ಮಾನ ಸಲ್ಲಾಂಗಿಲ್ಲ.' ಸಿದ್ದಣ್ಣನ ಮಾತಿಗೆ ದುಂಡವ್ವ ಒಳಗೇ ಖುಷಿ ಪಟ್ಟರೂ ಆಕ್ಕಸದಿಂದ ಹೇಳಿದಳು.

'ಹೋಗ್ಯಾನ ಹೋಗಲಿ ಬಿಡೋ ಅವನ್ಯಾಕ ಕರೀತೀರಿ.'

'ಅಲ್ಲಬೇ ದಿನಾ ಒಂದಕೂ ಅಳತೀದಿ ನೀನs ನನ ಬಿಟ್ಟ ಹ್ವಾದಾ ಅಂತ, ಮತ್ತ ಕರೀಬ್ಯಾಡಾ ಅಂತೀಯಲ್ಲ. ಮುಂದ ನಮದೂ ಮದುವೀ ಆಗಬೇಕೋ ಬ್ಯಾಡೋ' ಸಿದ್ದಣ್ಣ ಸಿಡಿಮಿಡಿ ಗುಟ್ಟಿದ.

'ಹೊಟ್ಟ್ಯಾಗ ಸಂಕಟ ಆಗಿ ಅಂತೀನೋ. ಅಂವಾ ಬರೂದು ಬ್ಯಾಡಾಗ್ಯೆತೇನ ನನಗ.'

'ಇದೆಲ್ಲಾ ನನ್ನಿಂದಾನೋ ಸಿದ್ದಣ್ಣಾ. ಹುಟ್ಟಬಾರದಿತ್ತು ಈ ಹೆಣ್ಣು ಜಲ್ಮ' ಕಣ್ಣೀರು ಮಿಡಿದಳು ನೀಲವ್ವ.

'ಯಕ್ಕಾ ನೀ ಮತ್ತ ಸರ್ರ್ಯಾ ಬರ್ರ್ಯಾ ಸುರು ಮಾಡಬ್ಯಾಡ. ಅಣ್ಣ ಹೇಳೂದರಾಗ ಏನೂ ತೆಪ್ಪಿಲ್ಲ. ಅವನ ಅವ್ವಾ ಅಪ್ಪಾ ಬ್ಯಾರೆ, ನಿನ್ನ ಅವ್ವಾ ಅಪ್ಪಾ ಬ್ಯಾರೇ. ನಿನಗೂ ಅವನ ಮ್ಯಾಲೆ ಮನಸೈತಿ. ನೀವ ಮದಿವ್ಯಾಗಿ ಸುಕದಿಂದ ಇರ್ರಿ !

'ನನಗಂತೂ ಏನೂ ತಿಳೀವಲ್ದು. ಒಮ್ಮೊಮ್ಮೆ ಕೆರಿ ಬಾವಿ ನೋಡಿ ಕೊಳ್ಳಲ್ಯಾ ಅನಸತೈತಿ'.

'ಹೂಂ ಅದಟ ಮಾಡಿ ನನ ಹೊಟ್ಟಿಗೆ ಬೆಂಕೀ ಹಾಕs ನೀಲೀ. ನೀ ಏನ ತೆಪ್ಪ ಮಾಡೀಯಂತ ಜೀಂವಾ ಕಳಕೋಬೇಕs, ನೋಡಿದ ಮಂದಿ ಏನಂದಾರು. ಅಪವಾದಾ ನಿನಗs ಬರೂದು, ಸಿದ್ದ್ಯಾ, ಬಸ್ಯಾ ಹ್ಯಾಂಗರೆ ಮಾಡಿ ನಿಮ್ಮಪ್ಪನ್ನ ಕರಕೊಂಡ ಬರ್ರೆಪಾ ಅವನ ಕೈ ಕಾಲ ಬಿದ್ದ ಕೇಳಿ ಕೊಂತೀನಿ. ಸಾಯೂದರಾಗ ಈ ಹುಡುಗೀನ ಒಂದ ಗೊತ್ತಿಗಿ ಹಚ್ಚಿ ಸಾಯಬೇಕಂತೀನಿ'.

'ಸಾಯೂ ಮಾತ ಆಡಬ್ಯಾಡ ಯವ್ವಾs, ಕೋಲಿ ನಟ್ಟರ ಯಾರೂ ಸಾಯೂದಿಲ್ಲ, ಗಾಯ ಮಾಯತೈತಿ. ನಾಳೇ ನಾ ಹೋಕ್ಕಿನಿ ಅಪ್ಪನ್ನ ಕರಿಯಾಕ'.

'ಯಕ್ಕಾs ನಾಳೆ ನಾ ನಾಗಣ್ಣನ ಭೆಟ್ಟಿ ಆಗಾಕ ಹೊಕ್ಕೀನಿ. ಅಂವಾ ಮಲ್ಲಣ್ಣ ಮಾವನ ಮನ್ಯಾಗ ಇದ್ದಾನು. ಅಂವಗ ಏನ ಹೇಳ್ಲಿ ?' ಬಸಣ್ಣನ ಚೇಷ್ಟೆಗೆ ಕೆಂಜಗದಂತ ಮುಖ ಮಾಡಿಕೊಂಡು ಎಮ್ಮೆಗೆ ಮೇವು ಹಾಕಲು ಹಕ್ಕೆಗೆ ಓಡಿದಳು ನೀಲವ್ವ.'

ಪ್ರೀತಿಯ ಸೆಲೆ

ಎಷ್ಟು ನಿಧಾನವಾಗಿ ಬಾಗಿಲು ತೆಗೆದರೂ ಕಿರ್‍ರ್ss ಎಂದಿತು. ನಾಳೆ ಬಾಗಿಲಿಗೆ ಎಣ್ಣೀ ಸವರು ಅನಬೇಕ ಶಶೀಗೆ ಶಿವಮ್ಮ ಗೊಣಗುತ್ತ ನಿರಿಗೆ, ಬಳೆ, ಹೆಜ್ಜೆ ಸಪ್ಪಳವಾಗದಂತೆ ಮಗ, ಸೊಸೆ ಮಲಗಿದ ಕೋಣೆ ದಾಟಿ ಹೋಗಿ ಶಶಿ, ಸುಮಾರ ಕೋಣೆಯ ಬಾಗಿಲು ಮೆಲ್ಲಗೆ ತಟ್ಟಿದಳು. ಅವಳ ಸ್ವಭಾವದ ಹಾಗೆ ನಡಿಗ, ಅಜ್ಜಿಗೆ ಬೆಕ್ಕಿನ ಹೆಜ್ಜೆ ಎಂದು ನಗುತ್ತಿದ್ದರು ಮೊಮ್ಮಕ್ಕಳು.

'ಶಶೀs, ಸುಮಾs ಏಳ್ರಿs ಬೆಳಗ ಆತು.' ಉತ್ತರವಿಲ್ಲ, ಬೆಳಗಿನ ಸವಿನಿದ್ದೆಯನ್ನು ಬಿಟ್ಟು ಅವರೇಕೆ ಎದ್ದಾರು. ಮತ್ತೆ ಮತ್ತೆ ಕರೆದಳು ಪಿಸುದನಿಯಲ್ಲಿ. 'ಏಳ್ರಿ ಹೊಸ್ತಲಕ ನೀರ ಹಾಕಿ ರಂಗೋಲಿ ತಗೀರಿ' ಅಕ್ಕ-ತಂಗಿ ಮಿಸುಗಲಿಲ್ಲ.

ಶಿವಮ್ಮ ಕಾಲು ಎಳೆಯುತ್ತ ಬಕೆಟ್‌ನ ನೀರು ತುಳುಕಿಸುತ್ತ ಅಂಗಳಕ್ಕೆ ಥಳಿ ಹೊಡೆದು ರಂಗೋಲಿ ಬಿಡಲು ಬಗ್ಗಿದಳು. ನಾಲ್ಕಾರು ಎಳೆ ಎಳೆದು ಎದ್ದು ನಿಂತು ಟೊಂಕ ನೀವಿಕೊಂಡಳು.

"ಯಾಕ ಇಷ್ಟ ಲಗೂ ಎದ್ದ್ರಿ ಶಿವಮ್ಮಾ. ನಿನ್ನೆ ಸಂಜೀನ್ಯಾಗ ಬೆನ್ನು ನೂವು ಅಂತಿದ್ರಿ" ಮಗ್ಗಲು ಮನೆಯ ಅನಸೂಯ ಕನಿಕರಿಸಿದಳು.

"ಲಗೂನ ಎದ್ದು ರೂಢೀನ ಐತಿ, ನನಗ. ಬಾಗಿಲಿಗೆ ಅರಿಶಿಣ ಕುಂಕುಮ ರಂಗೋಲಿ ಇದ್ದರ ಮನೀಗೆ ಒಂದ ಕಳಾ ಇರ್‍ತದ ನೋಡವ್ವ" ಮಾತಿಗೆ ನಿಲ್ಲದೆ ಶಿವಮ್ಮ ಒಳಗೆ ಬರುವದೊಂದೇ ತಡ, ಸೊಸೆ ಮುಖ ದಪ್ಪಗಾಗಿತ್ತು.

"ಮನೀ ಕೆಲಸ ಎಲ್ಲಾ ನಿಮ್ಮ ಕೊಳ್ಳಿಗೇ ಬಿದ್ದೈತಿ. ವಯಸ್ಸಾದರೂ ದುಡಿಯೂದು ತಪ್ಪಲಿಲ್ಲಾ ಅಂತ ಊರಿಗೇ ಡಂಗರಾ ಬಡಿಯಾಕ ನಿಂತಿರೇನು ಬೆಳಗಾದ ಕೂಡಲೆ." ಭುಸುಗುಟ್ಟಿದಳು ಮುಕ್ತಾ.

"ನನಗ ಬೇಕೂಂತ ಮಾಡ್ತೀನಿ ಅಂದೆ ಅಷ್ಟs. ಶಶಿ ಸುಮಾಗ ಹೇಳಿದೆ ಕೇಳಲಿಲ್ಲ."

"ಹೌದು, ದೊಡ್ಡ ಪರೀಕ್ಷೆ. ಅಭ್ಯಾಸ ಭಾಳ ಇರತದ. ಓದಿ ಓದಿ ದಣದು ಮಕ್ಕೊಂಡಾರ. ಅದೂ ಸಹನ ಆಗೂದಿಲ್ಲ ನಿಮಗ. ದಿನಾ ಕೇಳಿ ಕೇಳಿ ಸಾಕಾತು. ನಾಳೆ ಒಂದ ರಂಗೋಲಿ ಸ್ಟಿಕರನ ತಂದ ಬಡೀತಿನಿ".

ಮಾತು ಬೆಳೆಸಿದರ ಮಗನ ಸಿದ್ಧಿ ಹಾಳು. ಇಂದ ಎದ್ದಕೂಡಲೆ ಯಾರ ಮಾರೀ ನೋಡಿದ್ನೋ. ಸಂಜಿ ತನಾ ಜಗಳ ತಪ್ಪೂದಿಲ್ಲ. ಬೆಳಗಿನ ಉಲ್ಲಾಸ ಮಾಯವಾಗಿತ್ತು.

ಇಳಿಬಿಟ್ಟ ಕೂದಲು ಹಿಕ್ಕುತ್ತ ಬಂದ ಸುಮಾ ಒಲೆಯು ಹತ್ತಿರ ನಿಂತು 'ನನಗೂ ತಿನ್ನಾಕ ಕೊಡs ಅವ್ವಾ' ಎಂದಾಗ ಶಿವಮ್ಮ 'ಕೂದಲಾ ಅಡಿಗೀ ಮನ್ಯಾಗ ಹಿಕ್ಕಬಾರದವಾ, ಎಲ್ಲಾ ಕಡಿಗೂ ಉದುರತಾವ, ಹೊರಗಿನ ಕೋಣೆಗೆ ಹೋಗು' ಎಂದದ್ದೇ ತಡ ಅವ್ವ ಮಗಳು ಕೂಡಿಯೇ ಕವಕ್ಕ ನೆಂದರು.

'ನಮಗೆಲ್ಲಾ ತಿಳೀತದ. ನೀಯೇನ ಸ್ವಚ್ಛತಾ ಕಲಸೂದ ಜರೂರ ಇಲ್ಲಾ.'

'ಹಾಂಗಲ್ಲವಾ ಛೇಶಾಗಿ ರಾತ್ರಿ ನೆತ್ತಿಗೆ ಎಣ್ಣೀ ಹಾಕೊಂಡು ಮುಂಜಾನೆ ಸೀಗಿಕಾಯಿ ಅಂಟಾಳಕಾಯಿ ಕುದಿಸಿದ ನೀರು ತಲೀಗೆ ಹಾಕ್ಕೊಂಡು ಎರಕೋ ಅಂದರ ಕೇಳೂದಿಲ್ಲವಾ, ಕೂದಲು ಉದರತಾವ ಅಂತ ಆ ಶಾಂಪೂ ಈ ಸಬಕಾರಾ ಹಚಿಕೊಂಡ ಎಣ್ಣೀ ಹಚ್ಚದs ಹುರ್ರಂತ ಬಿಚಿಕೊಂಡ ಅಡ್ಡಾಡ ತೀರಿ. ಇನ್ನೂ ಹಡದಿಲ್ಲಾ ಹಿಂಗಿಲ್ಲಾ ಈಗs ಕೂದಲ ಉದುರಿದರ ಹ್ಯಾಂಗ."

'ನಿನ್ನ ದ್ವಾಪರಯುಗದಾಗಿನ ಮಾತೆಲ್ಲಾ ಕಟ್ಟಿಡು. ನೀ ಹೇಳಿದಂಗ ಎಣ್ಣೀ ಬಡಕೊಂಡರ ಹೇರಸ್ಟೈಲ ಹ್ಯಾಂಗ ಮಾಡಬೇಕು. ನಿನ್ನ ಕಾಲದ ತುರುಬು, ಜಡಿ ಈಗ ಔಟ ಆಫ ಫ್ಯಾಷನ್ ಆಗೇದ. ನಿನ್ನ ಅಡಿಗಿ, ರಂಗೋಲಿ ಕಸೂತಿ ಎಲ್ಲಾ ಯಾರಿಗೂ ಬೇಕಾಗಿಲ್ಲ ಈಗ. ಎಷ್ಟ ಛಂದ ಛಂದ ನಿಟ್ಟಿಂಗು, ಎಂಬ್ರಾಯ್ಡರಿ, ಎಂಬೊಸಿಂಗ್, ಬಾಟಿಕ್ ಅಂತೆಲ್ಲಾ ಮಾಡತಾರ. ಪ್ರದರ್ಶನಕ ಇಡತಾರ. ಪೋಟಾ ಮಾಡತಾರ. ಛೊಲೋ ಮಾಡಿದವರಿಗೆ ಬಹುಮಾನಾನೂ ಕೊಡತಾರ. ನಿನಗೇನ ಗೊತ್ತದ. ಬಾವ್ಯಾಗಿನ ಕಪ್ಪಿ ಇದ್ದಾಂಗ ಅದೀ, ಸುಮ್ಮನ ಕೂಡ್ರೂದಿಲ್ಲ. ಕಪ್ಪೀ ಹಾಂಗ ವಟಗುಡತೀ.' ತಾಯಿ ಮಕ್ಕಳು ಕೂಡಿ ಕಿಸಿ ಕಿಸಿ ನಕ್ಕರು.

'ಹೊಸಾ ಜಗತ್ತ ನೋಡಲಿಕ್ಕೆ ನಾನೂ ತಯಾರನ ಅದೀನಿ. ಆದರ ಕರಕೊಂಡ ಹೋಗವರ್‍ಯಾರ ನನ್ನ. ಆ ಟಿ.ವಿ. ನೋಡಾಕ ಕುಂತ್ರೂ ಯಾರರೆ ಬರ್‍ರ್ತಾರ ಒಳಗ ಎದ್ದ ಹೋಗ ಅಂತಾಳ ಸೊಸಿ.' ಮನಸ್ಸಿನಲ್ಲಿಯ ಮಾತುಗಳನ್ನು ಒಳಗೇ ನುಂಗಿ ಕೈಯ್ಯಲ್ಲಿಯ ಮೆಂತೆ ಪಲ್ಲೆಯ ಕಸ ಚೆಲ್ಲಲು ಹಿತ್ತಿಲಿಗೆ ನಡೆದಳು ಶಿವಮ್ಮ.

ಬಿಸಿಲಿಗೆ ಗಂಟಲು ಒಣಗಿಸಿಕೊಂಡು ಮುಖ ಜೋಲು ಬಿಟ್ಟು ನಿಂತಿತ್ತು ಪೇರಲ ಗಿಡ. ಮಣ್ಣು, ನೀರು, ಗೊಬ್ಬರ ಎಂದು ತನ್ನ ಆರೈಕೆಯಲ್ಲಿ ವಯಸ್ಸಿಗಿಂತ ದೊಡ್ಡದಾಗಿ ಭಾರವಾಗಿ ಬೆಳೆದು ನಿಂತಿತ್ತು. ಮನೆಯವರೆಲ್ಲ ತಿಂದೂ ತಿಂದೂ ಸಾಕಾಗಿ ಓಣಿಗೂ ಹಂಚುವಷ್ಟು ಹಣ್ಣು ನೀಡಿತ್ತು. ಕೊಂಬೆಗಳೆಲ್ಲ ಭಾರವಾಗಿ ನೆಲ ಮುಟ್ಟಿ ನಮಸ್ಕಾರ ಮಾಡಿದ್ದವು. ಶಿವಮ್ಮನ ಕರುಳು ಚುರ್ರೆಂದಿತು. ನಾಲ್ಕಾರು ದಿನಗಳಿಂದ ಹಿತ್ತಲ ತೋಟಕ್ಕೆ ನೀರು ಹಾಕಿಲ್ಲ. ನಳ ಸರಿಯಾಗಿ ಬಂದಿರಲಿಲ್ಲ. ನಿನ್ನೆ ರಾತ್ರಿ ಹೇಗೂ ಬಂದಿದೆ. ಒಂದಿಷ್ಟು ನೀರು ಹನಿಸಿದರೂ ಗಿಡ ಗೆಲುವಾದೀತು ಎನ್ನುತ್ತ ಬಕೆಟ್ ಎತ್ತಿ ಹೆಜ್ಜೆ ಮುಂದಿಟ್ಟಳು ಶಿವಮ್ಮ. ಫರಸಿಯ ಮೇಲೆ ಕಾಲು ಜರ್‍ರೆಂದಿತು. ಅಯ್ಯೋss'...

ಪುಣ್ಯಕ್ಕೆ ಕಾಲು ಮುರಿದಿರಲಿಲ್ಲ. ನರ ತೊಡಕಿತ್ತು. ತುಂಬಾ ನೋವು. ಅತ್ತಿತ್ತ ಸರಿದರೆ ಜೀವ ಹೋದಷ್ಟು ಯಾತನೆ.

'ಹೊಟ್ಟೆ ಹಿಡಿದಷ್ಟು ತಿಂದು ಸುಮ್ಮನ ಮೂಲಿ ಹಿಡಿದು ಕೂಡ್ರು ಅಂದರ ಎಲ್ಲಿ ಕೇಳತಾಳ ಈ ಮುದುಕಿ. ಗಿಡಕ್ಕ ನೀರ ಹಾಕಾಕ ಯಾರ ಹೇಳಿದ್ದಾರು ಇಕೀಗೆ. ಇಲ್ಲದ್ದ ಕಾರಭಾರಾ ಮಾಡತಾಳ. ತನಗ ತಿಳಿಯಂಗಿಲ್ಲ ಹೇಳಿದ್ದ ಕೇಳಂಗಿಲ್ಲ.' ಹೊಟ್ಟೆ ಹಸಿದು ಸಂಕಟವಾಗಿ ತಲೆ ತಿರುಗುವಂತಾದಾಗ ಬಾಯಿ ಬಿಟ್ಟು ಕೇಳಿದಾಗ ತಾಟು ತಂದು ಕುಕ್ಕುತ್ತಿದ್ದಳು ಸೊಸೆ. ಕರೆದು ಅಂಗಲಾಚದ ಹೊರತು ಮೊಮ್ಮಕ್ಕಳು ಹತ್ತಿರ ಬರುತ್ತಿರಲಿಲ್ಲ. ಗೋಡೆ ಹಿಡಿದು ನೋವಿನ ಕಾಲು ಎಳೆಯುತ್ತ ಉಳಿದ ವಿಧಿ ಮುಗಿಸುತ್ತಿದ್ದಳು. ಡಾಕ್ಟರರು ನೋಡಿ ಗುಳಿಗೆ ವಿಶ್ರಾಂತಿ ಹೇಳಿಕೊಟ್ಟು ಹೋದ ಮೇಲೆ ಮಗ ಬೇಸರದಿಂದ 'ಯಾಕ ಹಿಂತಾ ಕೆಲಸಾ ಮಾಡಿಕೊಂಡೆವ್ವಾ' ಎಂದಿದ್ದ, ಇವಳೇ ಬೇಕಾಗಿ ಮಾಡಿಕೊಂಡಂತೆ. ಶಿವಮ್ಮನ ಮನಸ್ಸು ಮುದುಡಿ ಹೋಯಿತು. ತಾನಿನ್ನೂ ಯಾಕಾದ್ರೂ ಬದುಕೀನೋ ಅನ್ನಿಸ್ತು. ತಾನು ಸತ್ತು ಹೋದರೇ ಒಳ್ಳೇದು. ಒಬ್ಬರಿಗೆ ಭಾರ ಆಗಿ ಹಿಂಗ ಎಷ್ಟ ದಿನಾ ಅಂತ ಇರೂದು. ಬರಿ ಕಾಲ ನೋವ ಆದರ ಯಾರೂ ಸತ್ತ ಹೋಗೂದಿಲ್ಲ ಅನ್ನೂದು ನೆನಪಾಗಿ ನಕ್ಕಳು ತನ್ನಷ್ಟಕ್ಕೇ. ಒಮ್ಮೆ ಅಳು ಒಮ್ಮೆ ನಗು. ಯಾವಾಗ ಕಣ್ಣು ಹತ್ತಿದ್ದವೋ ಒಮ್ಮೆಲೇ ಧಫ್, ಧಫ್ ಶಬ್ದ ಎದೆಗೆ ಒದ್ದಂತಾಯಿತು. ಎದೆ ಗಟ್ಟಿಯಾಗಿ ಒತ್ತಿಕೊಂಡಳು. ಉಸಿರು ಕಟ್ಟಿತು. ಕೈ ಬಿಟ್ಟಳು. ಧಪ್, ಧಫ್ ಶಬ್ದ ನಿಂತಿರಲಿಲ್ಲ. ಕಟಿಗೀ ಕಡಿಯೂ ಹಾಂಗ ಸಪ್ಪಳಾಗತೈತಿ. ಎಲ್ಲೀದು ಏನ ಕತೀs ತಿಳಿವಾಲ್ದು. ಜೀವ ಚಡಪಡಸತೈತಿ. ನಿಮಗ ಯಾಕ ಬೇಕ ಕಾರಭಾರಾ ಅಂತ ಸೊಸಿ ಮುಂಜಾನಿಂದ ಸಂಜೀತನಾ ಬಯ್ಯುತಾಳ ಅಂದ್ರೂ ಯಿಚಾರಾ ಮಾಡೂದ ಬಿಡೂದಿಲ್ಲಾ ನಾನೂ. ಈ ಉಸಲ ಇರೂತನಾ ಹಿಂಗs ಕಾಣತೈತಿ. ಧಪ್... ಧಪ್.

ಕಸ ಉಡುಗಲು ಬಂದ ಮಲ್ಲವ್ವನಿಂದ ತಿಳಿಯಿತು ಮಗ ಪೇರಲ ಗಿಡ ಕಡಿಸುತ್ತಿದ್ದಾನೆಂದು, ಅಂದು ಅನ್ನ ಹೋಗಲಿಲ್ಲ. ಸಂಜೆ ಮಗ ಅಂಗಡಿಯಿಂದ ಬಂದ ಮೇಲೆ ಜೀವ ಮುಟ್ಟಿಗೆಯಲ್ಲಿ ಹಿಡಿದು ಕೇಳಿದ್ದಕ್ಕೆ, ಅಷ್ಟೆಲ್ಲಾ ಜಾಗಾ ಹಿಡಿಕೊಂಡು ಕೂತದ. ಅದಕ್ಕs ತಗಿಸಿ ಬಿಟ್ಟೆ. ಗುಲಾಬಿ ಗಿಡಾ ಪಡಾ ಏನರೆ ಹಚ್ಚಿದರಾತು ಅಂದು ಬಿಟ್ಟ. ಗೋಡೆಯ ಕಡೆಗೆ ಹೊರಳಿ ಕಣ್ಣೀರು ಹರಿಸಿದಳು ಶಿವಮ್ಮ. ಸಾವು ಬರುವ ಲಕ್ಷಣವೇ ಇಲ್ಲ. ಭೂಮಿಯ ಋಣ

ತೀರುವವರೆಗಾದರೂ ಬದುಕಬೇಕಲ್ಲ. ಮಾತು ಕಡಿಮೆ ಮಾಡಿ ಮೂಕ ಪ್ರೇಕ್ಷಕಿಯಾದಳು. ಆದರೂ ಒಂದು ದಿನ ಬಾಯಿ ಬಿಡುವ ಪ್ರಸಂಗವೇ ಬಂದಿತು. ಆ ಪ್ರಕರಣ ಇಷ್ಟು ದೀರ್ಘಕ್ಕೆ ಹೋಗುತ್ತದೆನ್ನುವದು ಅವಳಿಗಾದರೂ ಎಲ್ಲಿ ಗೊತ್ತಿತ್ತು ?

ಗುಡಿಗೆ ಹೋದ ಶಿವಮ್ಮ ಮನೆಗೆ ಧಾವಿಸಿ ಬಂದು ಗಾಬರಿಯಿಂದ ಕೇಳಿದಳು 'ಮುಕ್ತಾ, ಶಶೀ ಮನೀಗೆ ಬಂದಾಳೇನs.'

ಅದೇ ತಾನೇ ಮಂಡಳದಿಂದ ಮನೆಗೆ ಬಂದ ಮುಕ್ತಾಳಿಗೆ ಮಗಳು ಮನೆಗೆ ಬಾರದ ವಿಷಯ ಗೊತ್ತಿರಲಿಲ್ಲ. ಸುಮಾ ಗೆಳತಿಯೊಡನೆ ಸಿನಿಮಾಕ್ಕೆ ಹೋಗಿದ್ದಳು.

'ಅಷ್ಟ್ಯಾಕ ಗಾಬರಿ ಆಗ್ತೀರಿ. ಈಗ ಬಂದಾಳು.'

ಸೊಸೆಯ ಅಲಕ್ಷ್ಯ ಶಿವಮ್ಮನಿಗೆ ಹಿಡಿಸಲಿಲ್ಲ. "ಅಲ್ಲs, ನಾ ದಾರ್‍ಯಾಗ ಶಶೀ ಯಾವದೋ ಹುಡುಗನ ಹಿಂದ ಕುಂತ ಗಾಡೀ ಮ್ಯಾಲೆ ಹೋಗೂದ, ನೋಡಿದೆ." ಕಳವಳಿಸಿದಳು ಆಜ್ಜಿ ಮೊಮ್ಮಗಳ ಬಗ್ಗೆ.

"ಬಿ. ಇ. ಕಡೀ ವರ್ಷ ಕಲಿತಾಳ ಅಂದಮ್ಯಾಲೆ ಕ್ಲಾಸಿನ ಹುಡುಗ ಇದ್ದಾನು. ಕೂಡೇ ಕಲೀತಾರ, ಮಾತಾಡ್ತಾರ, ಓಡ್ಯಾಡ್ತಾರ. ಏನ ತಪ್ಪದ ಇದರೊಳಗ."

ಹುಡುಗ ಹುಡುಗಿ ಹರೇದವರು ಹಾಂಗ ಕೂಡಿ ಅಡ್ಡಾಡಿದರ ಹ್ಯಾಂಗವಾ. ನಾಳೆ ಏನಕೇನರೆ ಫಜೀತಿ ಆದರ ಏನ ಗತಿ. ಮುಂದ್ಯಾಗ ಮರ್ಯಾದಿ ಉಳಿದೀತೇನು."

ಮುಕ್ತಾನ ಸಿಟ್ಟು ನೆತ್ತಿಗೇರಿತು. ಮಾತು ಜಗಳಕ್ಕಿಳಿಯಿತು. "ಏನs ನೀ ಅನ್ನೂದು ಈಗಿನ ಹುಡುಗೇರು ಹುಡುಗರ ಹಾಂಗs ವಿದ್ಯಾ ಕಲೀತಾರು ನೌಕರೀ ಮಾಡತಾರ, ಕೈ ತುಂಬ ಪಗಾರಾ ತರತಾರ. ಯಾವದರೊಳಗೂ ಕಡಿಮಿ ಇಲ್ಲಾ ಅನ್ನೂ ಹಾಂಗ ತಂದೀ ತಾಯಿ ಹೆಣ್ಣಮಕ್ಕಳ್ನ ಬೆಳೆಸತಾರ. ನೀನೂ ತಿಳಕೋ ಕಾಲ ಬದಲಾಗೇದ ಅನ್ನೂದು. ವಯಸ್ಸ ಆದರ ಏನಾತು ಬುದ್ಧಿ ಇಲ್ಲದವರಾಂಗs ಮಾತಾಡತಿ ನೀನೂ."

ಆಗಬಹುದಾದ ಅನಾಹುತ ಕಣ್ಣಿಗೆ ಕಟ್ಟಿದಂತಾಗಿ ಶಿವಮ್ಮ ಇನ್ನೂ ಬಿಚ್ಚಿ ಹೇಳಿದಳು. "ಮುಕ್ತಾs, ಶಶಿ, ಸುಮಾ ದೊಡ್ಡವರಾಗ್ಯಾರ. ಹೆಣ್ಣ ಮಕ್ಕಳ್ನ ಅಂಗೈಯಾಗ ಇಟಕೊಂಡ ಜ್ವಾಪಾನಾ ಮಾಡಬೇಕವ್ವ. ಹಿಂಗ ಸಿಕ್ಯಾಂಗ ಅಡ್ಯಾಡಾಕ ಬಿಡಬಾರದು. ಮನಸ್ಸು ಭಾಳ ಚಂಚಲ ಸ್ವಭಾವದ್ದು. ಬೆಂಕಿ ಹತ್ತರ ಬೆಣ್ಣಿ ಇಟ್ಟರ ಕರಗದ ಬಿಟ್ಟೀತs" ಸೊಸೆಯು ಕಣ್ಣು ತೆರೆದೀತೆನ್ನುವ ಆಸೆಯಿಂದ ಮುಖ ನೋಡಿದಳು ಶಿವಮ್ಮ.

ಮುಕ್ತಾನ ಮೈ ಉರಿದು ಹೋಯಿತು. "ಸಾಕ ಬಿಡ. ನನ್ನ ಮಕ್ಕಳು ಅಷ್ಟ ತಿಳಿಗೇಡಿ ಅದಾರೇನ. ತಮ್ಮನ್ನ ಕಾಯ್ಕೊಳ್ಳುವಷ್ಟು ಬುದ್ಧಿ ಅದ ಅವರಿಗೆ. ನಿನಗ ಕತ್ತಿಗೆ ಆದಂಗ ವಯಸ್ಸು ಒಂದ ಆಗೇದ, ಹೊರಗಿನ ಜಗತ್ತು ನೋಡಿಲ್ಲಾ, ಮಾತಾಡತಿ. ಅಜ್ಜಿ ಆಗಿ ನೀನs ಹಿಂಗ ಆಡಿಕೊಂಡರ ಮಂದಿ ಏನ ಅಂದಾರ ಇನ್ನ." ಅತ್ತೆಯ ಕಪಾಳಕ್ಕೆ ಹೊಡೆದಂತೆ ಮಾತಾಡಿ ಅಳುತ್ತ ಬಿರ್ರನೆ ಹೋಗಿಬಿಟ್ಟಳು ಮುಕ್ತಾ.

ಆ ದಿನ ರಾತ್ರಿ ದೊಡ್ಡ ರಂಪಾಟ. ಈ ಮನೆಯಲ್ಲಿ ಮುದುಕಿ ಇರಬೇಕು, ಇಲ್ಲ ನಾ ಇರಬೇಕು, ಮುಕ್ತಾ ಹಟ ಹಿಡಿದಿದ್ದಳು. ಗಂಡ ಸಮಾಧಾನಪಡಿಸುತ್ತಿದ್ದ. ಎಷ್ಟು ಹೇಳಿದರೂ ಅವಳದು ಒಂದೇ ಹಟ. ಕೊನೆಗೆ ಕಲ್ಕತ್ತೆಯಲ್ಲಿರುವ ತಮ್ಮ ಸತೀಶನ ಮನೆಗೆ ಶಿವಮ್ಮನನ್ನು ಕಳಿಸುತ್ತೇನೆಂದ ಮೇಲೆಯೇ ಎದ್ದು ಊಟ ಮಾಡಿದಳು ಮುಕ್ತಾ. ಐದು ಮಜಲಿನ ಎರಡು ಕೋಣೆಯ ಮನೆಯಲ್ಲಿ ಭಾಷೆ ಬಾರದ ಬೇರೆ ಜಾತಿಯ ನೌಕರಿ ಮಾಡುವ ಆರತಿಯ ಜೊತೆಗೆ ಇರಲು ಹೇಗೆ ಕರೆದುಕೊಂಡು ಹೋಗಲಿ ಎಂದು ಸತೀಶನಿಂದ ಉತ್ತರ ಬಂದು ನಾಲ್ಕು ದಿನಗಳಾಗಿದ್ದವು. ಅದೇ ಚಿಂತೆಯಲ್ಲಿ ದೊಡ್ಡ ಮಗ ಬೇಯುತ್ತಿದ್ದ. ಇಲ್ಲಿಯ ನರಕ, ಕಲ್ಕತ್ತೆಯ ನರಕ ಎರಡೂ ಬೇಡವೆಂದು ಶಿವಮ್ಮ ಸ್ವರ್ಗಕ್ಕೆ ಹೋಗಲು ಅದೇ ದಿನ ರಾತ್ರಿ ಮನೆ ಬಿಟ್ಟಳು. ಮಕ್ಕಳಿಬ್ಬರೂ ಪೋಲೀಸರೊಡನೆ ಒಂದೆರಡು ತಿಂಗಳು ಹುಡುಕಾಡಿ ಫೈಲು ಮುಚ್ಚಿಬಿಟ್ಟರು.

* * * *

'ಮಮ್ಮೀs' ವೈಭವ ಸರಳಿದ. ಹಣೆಯ ಮೇಲಿನ ತಣ್ಣೀರಿನ ಪಟ್ಟೀ ತೆಗೆದು ಹೊಸದೊಂದು ಇಟ್ಟು ನಾಲ್ಕು ಚಮಚ ಗ್ಲೂಕೋಜ ನೀರು ಕುಡಿಸಿ

ದಳು ಶಶೀ. ಗುಲಾಬಿ ಹೂವಿನಂತೆ ನಳನಳಿಸುತ್ತಿದ್ದ ಹುಡುಗ ನಾಲ್ಕು ದಿನದಲ್ಲಿ ಬಾಡಿ ಹೋಗಿದ್ದ. ಬೋರ್ನವಿಟಾ, ಕಾಫಿ ಏನೂ ಬೇಡವೆನ್ನು ತ್ತಿದ್ದ. ಔಷಧಿ, ಗುಳಿಗೆ ಕೊಡಬೇಕಾದರೆ ಸಾಕಾಗಿ ಹೋಗುತ್ತಿತ್ತು. ಬರೀ ಹೊಟ್ಟೆಯಲ್ಲಿ ಈ ವಿಷ ತಿನ್ನಿಸುತ್ತಿದ್ದೇನಲ್ಲ ಎಂದು ಶಶೀಗೆ ಸಂಕಟವಾಗು ತ್ತಿತ್ತು. "ಜ್ವರ ಹೆಚ್ಚಾದರ ನರ್ಸಿಂಗ ಹೋಂಕ ಸೇರ್ಸು. ಜ್ವಾಕಿ. ಅಲಕ್ಷ್ಯ ಮಾಡಬ್ಯಾಡಾ" ಪ್ರಕಾಶ ಟೂರಿಗೆ ಹೋಗುವಾಗ ಹೇಳಿ ಹೋಗಿದ್ದ. ತಿಂಗ ಳಿಗೆ ಹದಿನೈದು ದಿನವಾದರೂ ಅವನಿಗೆ ಟೂರು. ಅಪ್ಪ, ಸುಮಾರನ್ನು ಬಿಟ್ಟು ಅವ್ವ ಬಂದು ತನ್ನ ಜೊತೆ ಇರುವಂತಿಲ್ಲ. ಈಗಂತೂ ಸುಮಾಳಿಗೆ ದೊಡ್ಡ ಪರೀಕ್ಷೆ. ಮೊಮ್ಮಗನಿಗೆ ಆರಾಮವಿಲ್ಲವೆಂದು ಫೋನ್ ಮಾಡಿದಾಗ ಅಲ್ಲಿಂದಲೇ ಸಮಾಧಾನ ಹೇಳಿ ಎಚ್ಚರಿಕೆ ಕೊಟ್ಟಿದ್ದಳು. ಕೆಲಸದ ಪಾರ್ವತಿ ಬರುವದೇ ಒಂಭತ್ತಕ್ಕೆ. ಅಲ್ಲಿಯ ವರೆಗಿನ ಕೆಲಸವೆಲ್ಲ ತನ್ನದೇ. ಸಣ್ಣ ಮಗನೊಡನೆ ಪ್ರೈವೇಟ ಕಂಪನಿಯ ಡ್ರಾಯಿಂಗ ಮಾಡುವದು ಖಡ್ಗದ ಮೇಲೆ ನಡೆದಂತೆ ಎನ್ನುವದು ಅನುಭವಕ್ಕೆ ಬಂದು ಕಣ್ಣೀರು ಕಪಾಳಕ್ಕೆ ಬಂದವು. ನಾಲ್ಕಾರು ದಿನದಿಂದ ತನಗೂ ಊಟ ನಿದ್ದೆ ಇಲ್ಲದೆ ನಿತ್ರಾಣ ವೆನಿಸಿತ್ತು. ಮಗನ ಕಂದಿದ ಮುಖ ನೋಡುತ್ತ ಅವನನ್ನು ಅಪ್ಪಿ ಹಿಡಿದು ಹೋ೬ಽ ಎಂದು ಅತ್ತುಬಿಟ್ಟಳು ಶಶಿ. ಅಲ್ಲಿಯೇ ಜೋಂಪು ಹತ್ತಿತು.

ಫೋನಿನ ಗಂಟೆಯಿಂದ ಎಚ್ಚತ್ತು ದನಿ ಸರಿಮಾಡಿಕೊಂಡು 'ಹಲೋ' ಎಂದಳು ಶಶಿ. ಅವಳಿಗೆ ಗೊತ್ತು ಇದು ಕಂಟ್ರಾಕ್ಟರ ಚೌಧರಿಯದೇ ಕರೆ ಎಂದು. ಆ ಕಡೆಯಿಂದ ವಾರ್ನಿಂಗ ಕೊಡುವ ದನಿಯಲ್ಲಿ ಚೌಧರಿ ಮಾತಾಡು ತ್ತಿದ್ದ. ಎಲ್ಲಕ್ಕೂ ಇವಳು ಹುಂ ಎನ್ನುತ್ತ ಹೋದಳು.

ಅವರ ಮಳಿಗೆಯ ಡ್ರಾಯಿಂಗ ತೆಗೆದುಕೊಡುವ ಕೊನೆಯ ದಿನಾಂಕ ಮುಗಿದು ಹೋಗಿತ್ತು. ಹಳ್ಳಿಯಲ್ಲಿ ಪ್ರಕಾಶನ ತಾಯಿ ಜಾರಿ ಬಿದ್ದು ಕಾಲಿನ ಮೂಳೆ ಮುರಿದಿತ್ತು. ನರ್ಸಿಂಗ ಹೋಂನ ಓಡಾಟದಲ್ಲಿ ಡ್ರಾಯಿಂಗ ಕೆಲಸ ಹಿಂದೆ ಬಿದ್ದಿತ್ತು. ಈಗ ವೈಭವನ ಅನಾರೋಗ್ಯ. ಕಷ್ಟಪಟ್ಟು ಚೌಧರಿ ಯವರಿಂದ ಇನ್ನೆಂಟು ದಿನ ಅವಧಿ ಕೇಳಿ ಒಪ್ಪಿಸಿದ್ದಳು. ಅಷ್ಟರಲ್ಲಿ ಕೆಲಸ ಮುಗಿಸಲೇಬೇಕು. ಇದನ್ನು ಬಿಟ್ಟರೆ ತನ್ನ ರೆಪ್ಯುಟೇಶನ್‌ಗೆ ಧಕ್ಕೆ. ಇಷ್ಟು

ಕಷ್ಟಪಟ್ಟು ಕಲಿತು ಆರ್ಕಿಟೆಕ್ಟ ಆಗಿ ಏನು ಮಾಡಿದಂತಾಯಿತು ? ತಲೆ ಚಿಟಿ ಚಿಟಿ ಎನ್ನುತ್ತಿತ್ತು. ದಿಕ್ಕು ತೋಚದಂತೆ ಆಗಿತ್ತು. ತನ್ನ ತಲೆಯ ಭಾರ ಇಳಿಸಲು ಯಾರಿಂದ ಸಹಾಯ ಸಿಕ್ಕೀತು. ಇದು ಒಂದೆರಡು ದಿನದ ಮಾತಲ್ಲ. ದಿನದ ಸಾವು. ಇದಕ್ಕೆ ಉಪಾಯ ಏನು ? ನೆರವು, ಪ್ರೀತಿ, ಸಹಾಯ, ಸಹಾನುಭೂತಿ, ಸಹಕಾರ ಕೊಡುವವರು ಯಾರು ? ಯೋಚಿಸಿದಂತೆ ತಲೆ ದಿಮ್ಮೆನ್ನುತ್ತಿತ್ತು. ಖಾಲಿ ಹೊಟ್ಟೆ. ಸಂಕಟ... ಎದ್ದು ಫ್ರಿಜ್‌ನಲ್ಲಿ ಇದ್ದದ್ದು ತಿನ್ನಲೂ ಬೇಸರವಾಗಿತ್ತು. ಮತ್ತೆ ಕಣ್ಣೀರು...

ಯಾರೋ ದಬದಬ ಬಾಗಿಲು ಬಡಿಯುತ್ತಿದ್ದರು. ಓಃ ಕರಂಟ ಹೋಗೇದ ಕಾಣತದ. ಈಗ ಯಾರ ಬಂದಿದ್ದಾರು. ಯಾಕಾದರೂ ಬಂದರೋ. ಮುಖ ಕಿವುಚಿ, ಕೂದಲು, ಸೀರೆ ಸರಿ ಮಾಡಿಕೊಂಡು ಬಾಗಿಲು ತೆಗೆದಳು.

'ನೀ ಕೇಳಿದ್ದೆಲ್ಲ ಶಶೀಃ ಯಾರರೇ ಒಳ್ಳೇ ಕೆಲಸದವರು ಬೇಕು ಅಂತ. ಮನೀಯೊಳಗ ಇದ್ದು ಮನೀ ಕೆಲಸಾ, ವೈಭವನ್ನ ನೋಡಿಕೋಬೇಕು ಅಂತ. ಮಂಡಳದ ವತಿಯಿಂದ ಆವಾಗಾವಾಗ ಅಬಲಾಶ್ರಮಕ್ಕ ಹೋಗ್ತಿನಿ ನೋಡು ಅಲ್ಲೆ ಇದ್ದರು ಈ ಅಜ್ಜಿ. ಅಡಿಗಿಯಾಕೀಗೆ ಅಸಿಸ್ಟಂಟ ಅಂತ ಕೆಲಸಾ ಮಾಡತಿದ್ದರು. ಭಾಳ ಒಳ್ಳೇ ಸ್ವಭಾವ, ವಯಸ್ಸಾದವರು. ಮಕ್ಕಳ್ನೂ ಛಂದಾಗಿ ನೋಡಿಕೋತಾರಂತ. ರೊಕ್ಕದ ಆಸೇ ಇಲ್ಲಾ. ಆದರ ಮರ್ಯಾದಿಯಿಂದ ಬದುಕಿದವರು. ಅವರಿಗೂ ಆಸರ, ಪ್ರೀತಿ ಬೇಕು. ನೀನೂ ನಾಲ್ಕ ದಿನಾ ಕೆಲಸಾ ಮಾಡಿಸಿಕೊಂಡ ನೋಡು ಬೇಕಾದರ. ನಿನಗೂ ತಿಳೀತದ. ಒಪ್ಪಿಗಿ ಆದರ ಕೆಲಸಕ್ಕ ಇಟಕೋ...

ಅರಳು ಹುರಿದಂತೆ ಪಟಪಟ ಮಾತಾಡುತ್ತಿದ್ದ ಊರ್ಮಿಳಾನತ್ತ ಲಕ್ಷ್ಯವಿಲ್ಲದೆ ಹಿಂದೆ ನಿಂತ ಶಿವಮ್ಮನನ್ನೇ ದಿಟ್ಟಿಸುತ್ತಿದ್ದ ಶಶಿ ಉಕ್ಕಿದ ಸಂತೋಷದಿಂದ 'ಅಜ್ಜೀಃ' ಎಂದು ಕಿರುಚಿ ಅಪ್ಪಿಕೊಂಡಳು.

ತಾರಕ

ಸುಟ್ಟಗಾಯಗಳಿಂದ ಸಾವು-ಬದುಕಿನ ನಡುವೆ ಗೌರಿ ಹೊಯ್ದಾಡುತ್ತಿರುವ ಸುದ್ದಿ ಹಬ್ಬಿತು. ಬಂಧು-ಬಳಗ, ಗೆಳತಿಯರು ನೆರೆ ಹೊರೆಯವರು ಎಲ್ಲ ಬಂದು ಬಂದು ದೂರದಿಂದ ನೋಡಿಹೋದರು. ಹೊರಜಗತ್ತಿನ ಪರಿವೆ ಇಲ್ಲದೆ ತನ್ನ ನೋವಿನಲ್ಲಿ ಒದ್ದಾಡುತ್ತಿದ್ದವಳನ್ನು ನೋಡಿ ಕನಿಕರಿಸಿ ಬೇಗ ಗುಣವಾಗಲೆಂದು ಹಾರೈಸಿದರು. ಇಷ್ಟೊಂದು ಸುಟ್ಟು, ಕಲೆಗಳು ಉಳಿಯುವ ಮುಖ ಹೊತ್ತು ಬದುಕುವದಕ್ಕಿಂತ ಸತ್ತರೇ ಒಳ್ಳೆಯದೆಂದು ಅಂದುಕೊಂಡವರೂ ಇದ್ದರು ಅವರಲ್ಲಿ. ನಾನಾ ಜನರಿದ್ದಂತೇ ನಾನಾ ಮಾತುಗಳು— ಕೈ ಕಾಲಿಲ್ಲದ ಊಹೆಗಳು ಬಣ್ಣ ಬಣ್ಣದ ನಾನಾವೇಷ ತೊಟ್ಟು ವೇಗದಲ್ಲಿ ಓಡಾಡಿದವು. ಎರಡೂ ಮನೆಯವರಿಗೆ ದುಃಖ, ಅವಮಾನ. ಡಾಕ್ಟರರೇ ಜನರ ಭೆಟ್ಟಿಯನ್ನು ಕಟ್ಟುನಿಟ್ಟಾಗಿ ಬಂದು ಮಾಡಿದಾಗಲೇ ಪರಿಸ್ಥಿತಿ ಸ್ವಲ್ಪ ಸಹನೀಯವಾದದ್ದು.

ಮೆಲ್ಲಗೆ ಮಗಳು ಮಲಗಿದ ಕೋಣೆಯ ಬಾಗಿಲು ದೂಡಿದರು ಪಾರಕ್ಕ. ಗೌರಿಯ ಹತ್ತಿರ ಕುಳಿತ ನರ್ಸ 'ಶ್' ಎಂದು ಹೊರಗೆ ಹೋಗಲು ಸನ್ನೆ ಮಾಡಿದಳು. ಗೌರಿ ನಿದ್ದೆಯಲ್ಲಿದ್ದಳು. ಗೌರಿಯ ಅತ್ತೆಯ ಜೊತೆಗೆ ಹೊರಗೆ ಬಂದು ಬೆಂಚಿನ ಮೇಲೆ ಕುಳಿತಳು. ಹಿಂದಿನ ದಿನವೇ ಗೌರಿ ಅಪಾಯದಿಂದ ಪಾರಾಗಿದ್ದಾಳೆಂದು ಡಾಕ್ಟರರು ಹೇಳಿದ್ದರಿಂದ ಇಬ್ಬರೂ ಮಾತನಾಡುವ ಶಕ್ತಿ ಪಡೆದಿದ್ದರು.

"ಪಾರಕ್ಕ, ನೀ ಏನ ತಿಳಕೊಂಡ್ಯೋ ಏನೋ. ಗೌರಿ ಹಿಂಗ ಯಾಕ ಸುಟಗೊಂಡಳು ಅನ್ನೂದ ನನಗ ತೀಳಿವಾಲ್ದು. ಕತ್ತಲಾತು ದೇವರ ಮುಂದ

ದೀಪಾ ಹಚ್ಚು ಅಂತ ಸಿಟ್ಟಿಲೆ ಅಂದದ್ದು ಖರೆ. ಕಣ್ಣ ಮುಚ್ಚಿ ತೆರಿಯೂದರಾಗ ಪಾಲಿಸ್ಟರ ಸೀರಿ ಧಗಾ ಧಗಾ ಉರಿಯಾಕ ಹತ್ತಿತು. ಗಾಬ ಹೊಡದು ಹೊಯ್ಕೊಂಡೆ ನೋಡವ್ವ. ಎಲ್ಲಾರೂ ಓಡಿ ಬಂದರು. ವಿವೇಕ ಊರಾಗ ಇದ್ದಿದ್ದಿಲ್ಲಾ ಛೊಲೋ ಆತು. ಇಲ್ಲಾಂದರ ಏನ ಮಾಡತಿದ್ನೋ ಏನೋ" ಕಣ್ಣು ಮೂಗು ತಿಕ್ಕಿಕೊಂಡಳು ಕಾಶವ್ವ.

"ಆದದ್ದಾಗಿ ಹೋತು. ನಮ್ಮ ವ್ಯಾಳ್ಯೆ ಸುಮಾರ ಐತಿ" ಪಾರಕ್ಕನ ಮಾತಿನಲ್ಲಿ ಜೀವವಿರಲಿಲ್ಲ, ಸುಮ್ಮನೆ ಮಾತಾಡಬೇಕೆಂದು ಅಂದಳು.

"ಗೌರಿ ಜೀಂವಾ ಉಳೀತಲ್ರವಾ. ನಮ್ಮ ವ್ಯಾಳ್ಯೆ ಛೊಲೋ ಐತಿ. ಇನ್ನೂ ಏನೇನು ಮಾತು ಕೇಳಬೇಕಾಗಿತ್ತೋ ಏನೋ ನಾವು. ನಮ್ಮ ಶ್ರೀಮಂತಿಕಿಗೆ ಹೊಟ್ಟೀಕಿಚ್ಚು ಮಾಡವರು ಭಾಳ ಮಂದಿ ಅದಾರ. ಅವರೆಲ್ಲಾ ಆಡಿಕೊಳ್ಳುಹಾಂಗ ಆತು. ತಲೀ ಮ್ಯಾಲೆ ಸೆರಗು ಹೊತಗೋ, ಜೋರಾಗಿ ನಗಬ್ಯಾಡಾ. ಅವರ ಮನೀ ಇವರ ಮನೀ ಅಂತ ತಿರಗಾಕ ಹೋಗಬ್ಯಾಡಾ. ಮಂದಿ ಬಂದಾಗ ಕರದಾಗ ಹೊರಗ ಬಾ. ನಾವೆಲ್ಲಾ ಹಾಂಗಽ ನಡಕೊಂಡ್ವಿ. ಒಬ್ಬಾಕಿ ಸೊಸಿ ರೀತಿ ನಡತಿ ಕಲಕೊಳ್ಳಲಿ ಅಂತ ಹೇಳತಿದ್ದೆ, ವಿವೇಕನೂ ಆಕೀಗೆ ಎಲ್ಲಾ ಕಲಸವಾ ಅಂತಿದ್ದಾ."

ಚೆಂದಾಗಿ ಸಲ್ವಾರ ಕಮೀಜ ಹಾಕಿಕೊಂಡು ನಗುತ್ತ ಗೆಳತಿಯರೊಡನೆ ಕಾಲೇಜಿನ ಬಸ್ ಹಿಡಿಯಲು ಓಡುತ್ತಿದ್ದ ಮಗಳು ಅವ್ವನ ಕಣ್ಣು ತುಂಬಿದ್ದಳು. ಗಂಟಲು ಕಟ್ಟಿ ದನಿ ಹೊರಬರಲಿಲ್ಲ.

"ನಮ್ಮ ಮನ್ಯಾಗ ಮಡಿ-ಹುಡಿ, ಪೂಜಿ-ಪುನಸ್ಕಾರಾ ಭಾಳವಾ. ಹಬ್ಬಾ ಹುಣ್ಣಿವೀಗೆ ಸ್ವಾಮಿಗೋಳ ಮನೀಗೆ ಬಂದ ಕರಣ ಪ್ರಸಾದಾ ಕೊಟ್ಟ ಮ್ಯಾಲೆ ಊಟ. ಅಲ್ಲೀತನಾ ಬಾಯಾಗ ಹನಿ ನೀರು ಹಾಕಂಗಿಲ್ಲ. ಮೊದಲಿಂದ ಬಂದ ಸಂಪ್ರದಾಯಾ ಯಾವದೂ ಬಿಟ್ಟಿಲ್ಲ ನಾವು. ಅದಕ್ಕಽ ದೇವರು ನಮಗ ಯಾತಕ್ಕೂ ಕಡಿಮಿ ಮಾಡಿಲ್ಲ." ಕೇಳುವವಳು ಸಿಕ್ಕಿದ್ದಾಳೆಂದು ಒಂದಿಷ್ಟು ಹೆಚ್ಚೇ ಕೊಚ್ಚಿಕೊಂಡಳು ಕಾಶವ್ವ

ಚಹ ಆಗಿದೆ ಎಂದ ಮೇಲೆಯೇ ಹಾಸಿಗೆ ಬಿಟ್ಟು ಏಳುವ ಗೌರಿ ಊಟದ ಹೊತ್ತಿಗೇ ಒಳಗೆ ಬರುವವಳು. ಅಲ್ಲಿಯವರೆಗೆ ಅವಳ ಅಭ್ಯಾಸ, ಸಂಗೀತ ನಡೆದೇ ಇರುವದು. ಕೆಲಸ ಕಲಿ ಎಂದು ಸಿಟ್ಟು ಮಾಡಿದರೆ ಉದ್ದನ್ನ ಜಡೆ ಹಾರಿಸುತ್ತ, ಹಾಡುತ್ತ ಹತ್ತಿರ ಬಂದು ಕುತ್ತಿಗೆಗೆ ತೋಳು ಸುತ್ತಿ ನಕ್ಕು ಬಿಡುವವಳು... ಬೆಳ್ಳಗೆ ಬೆಳಗುತ್ತಿದ್ದ ಗೌರಿಯ ಸುಟ್ಟ ಮುಖ ನೆನಪಾಗಿ ಸೆರಗು ಬಾಯಿಗಿಟ್ಟು ಬಿಕ್ಕಿದಳು ಪಾರವ್ವ.

"ಒಬ್ಬನs ಮಗಾ ಇಷ್ಟೊಂದ ಆಸ್ತಿ, ಹಿಂತಾ ಮನಿತನಾ, ಮಂದಿ ನನ್ನ ಮಗ್ಗ ಹೆಣ್ಣ ಕೊಡಾಕ ಸಾಲಗಟ್ಟಿ ನಿಂತಿದ್ರು. ಇಕೀ ಚಲುವಿಕೀ ನೋಡಿ ನನ ಮಗಾ ಒಪ್ಪಿಕೊಂಡ ಬಿಟ್ಟಾ. ಮಗಾ ಸಂತೋಷದಿಂದ ಇರಲಿ ಅಂತ ನಾವೂ ಒಪಿಕೊಂಡಿವಿ. ಆದರ ಅಂವಗರೆ ಏನ ಸುಖಾ ಸಿಕ್ಕೀತs ನೀವೂ ಉದ್ಯೋಗಾ ಮಾಡ್ರಿ, ದುಡೀರಿ ಅಂತ ಅವನ ಕೂಡ ಜಗಳಾಡತಿದ್ಲು, ಅಲ್ಲವಾ ಪಾರಕ್ಕ, ಕಾಲೇಜ ಕಲತಾಕಿ ಇಕಿ. ಬುದ್ಧಿ ಐತೇನ ಇಕೀಗೆ. ರಾತ್ರಿ ಹನ್ನೆರಡ ಆತು ಇನ್ನೂ ಬರಲಿಲ್ಲಾ ವಿವೇಕ ಅಂತ ತಾನs ಕ್ಲಬ್ಬಿಗೆ ಹೋಗಿ ಬಿಡೂದs ಗೌರಿ. ಅವತ್ತಂತು ನಮ್ಮ ಮನೀ ಮರ್ಯಾದೀನ ಹೋತು ಅಂತ ಸಿಟ್ಟಾಗಿ ವಿವೇಕ ಎರಡೇಟ ಕೊಟ್ಟ ನೋಡು. ನೀ ಅಂತೂ ಏನೇನೂ ರೀತಿ ನಡತಿ ಕಲಸಿಲ್ಲವಾ ಮಗಳಿಗೆ. ತಿಳವಳಿಕೀನ ಇಲ್ಲಾ" ಕಾಶವ್ವನ ಮಾತಿನ ಸರ ಉದ್ದವಾಗುತ್ತಿತ್ತು.

ಹೆಣ್ಣು ಹೆತ್ತ ಅವ್ವನಿಗೇ ಗೊತ್ತು ಅವಳ ಸಂಕಟ. ಶ್ರೀಮಂತರ ಮನೆಯಲ್ಲಿ ಮಗಳು ಸುಖವಾಗಿರುವಳೆನ್ನುವ ಒಂದೇ ಆಸೆಯಿಂದ ಅವಳ ಮನಸ್ಸಿನ ವಿರುದ್ಧ ಮದುವೆ ಮಾಡಿಕೊಟ್ಟದ್ದು ತಮ್ಮದೇ ತಪ್ಪು. ಆ ದಿನ ಎಷ್ಟು ಅಂಗಲಾಚಿದ್ದಳು ಗೌರಿ—

"ಅವ್ವಾ ನಾ ಈಗs ಮದುವೀ ಒಲ್ಲೆ, ಬಿ.ಎ. ಮುಗಸ್ತೇನಿ. ಸಂಗೀತಾ ಕಲೀಬೇಕಂತ ನನಗ ಭಾಳ ಆಸೇ ಅದ. ಅಪ್ಪಗ ಹೇಳವ್ವ."

"ವಿವೇಕ ಚೆಲುವ, ವಿದ್ಯಾವಂತ, ಶ್ರೀಮಂತ. ಅವನಾಗೇ ನಿನ್ನ ಒಪ್ಪಿಕೊಂಡಾನ. ಒಬ್ಬನs ಮಗಾ. ವರದಕ್ಷಿಣಾದ ಆಸೇನೂ ಇಲ್ಲಂತ,

ಹಿಂತಾ ಮನಿತನಾ ಮತ್ತ ಸಿಗೂದಿಲ್ಲ ಗೌರೀ. ನಿನ್ನ ನಸೀಬ ಛೊಲೋ ಐತಿ. ಸುಖದಿಂದ ಇರತೀ. ನಿಮ್ಮಪ್ಪ ಇನ್ನ ಐದಾರು ವರ್ಷಕ್ಕ ರಿಟೈರ ಆಗ್ತಾರ. ತಂಗಿ-ತಮ್ಮಂದು ಜವಾಬ್ದಾರಿ ಐತಿ. ನಾ ಏನ ಹೇಳಿದ್ರೂ ನಿಮ್ಮಪ್ಪ ದೊಡ್ಡಪ್ಪ ಒಪ್ಪೂದಿಲ್ಲ." ಊಟ ಬಿಟ್ಟು ಅತ್ತಿದ್ದಳು ಗೌರಿ. ಅಂದಿನಿಂದ ಅವಳ ಅಳು ನಿಂತಿರಲೇ ಇಲ್ಲ. ಯಾವಾಗ ತವರಿಗೆ ಬಂದರೂ ಸಪ್ಪೆ ಮುಖದಿಂದ ಚಿಂತೆ ಮಾಡುತ್ತಿದ್ದಳು. ಕೇಳಿದರೆ ಅತ್ತು ಬಿಡುತ್ತಿದ್ದಳು. ದಿನ ಕಳೆದಂತೆ ಹೊಂದಿಕೊಳ್ಳುತ್ತಾಳೆ ಎಂದುಕೊಂಡಿದ್ದರು ತಾವೆಲ್ಲ. ಅವಳ ಮನಸ್ಸಿನಲ್ಲಿ ಇಷ್ಟೆಲ್ಲ ತಳಮಳ ಇದ್ದದ್ದೇ ತಿಳಿಯಲಿಲ್ಲ. ತಿಳಿದಿದ್ದರೂ ಏನು ಮಾಡುವ ಹಾಗಿದ್ದಳು ತಾನು— ಹೊರಗೆ ಬರುತ್ತಿದ್ದ ನರ್ಸನ್ನು ನೋಡಿ ಇಬ್ಬರೂ ಎದ್ದರು.

ಅರ್ಧ ನಿದ್ದೆ ಮಂಪರಿನಲ್ಲಿ ಹೊರಳುತ್ತಿದ್ದ ಗೌರಿ ಸಾಧ್ಯವಾಗದೇ ನರಳಿ ದಳು... ಸುತ್ತೆಲ್ಲ ಹೂವಿನ ಪರಿಮಳ, ಊದುಬತ್ತಿಯ ವಾಸನೆ ಮೈಮರೆಸು ತ್ತಿದೆ. ಮೃದುವಾದ ಹಾಸಿಗೆಯಲ್ಲಿ ಒಬ್ಬಳೇ. ತನಗೆ ಪ್ರಿಯವಾದ ಏಕಾಂತ ಹೊಸ ಬದುಕಿಗೆ ಕಾಲಿಡಲು ತವಕಿಸುತ್ತಿರುವ ಮೈ ಮನಸು ಜೊತೆಗೆ ಗಾಬರಿ ಎದೆ ಡವಡವ ಕಡಿಮೆ ಮಾಡಲು ಜಯಜಯವಂತಿ ರಾಗದ ಕ್ಯಾಸೆಟ್ ಹಾಕಿ ದಳು. ತೀರ ಮೆಲ್ಲಗೆ ಕಿವಿಯ ಹತ್ತಿರ ಸುತ್ತಿ ಸುತ್ತಿ ಸುಳಿಯುವ ನಾದದಲ್ಲಿ ಮೈ ಮರೆತಳು. ಟಪ್... ಕಣ್ಣು ತೆರೆದಳು. ವಿವೇಕ ಹತ್ತಿರ ಕುಳಿತು ಕೈ ಚಾಚಿ ತಬ್ಬಿಕೊಂಡ. ಏನೋ ಕೆಟ್ಟ ವಾಸನೆ. ಸಿಗರೇಟು, ವಿಸ್ಕಿ, ಬೆವರು ಎಲ್ಲ ಸೇರಿ ದುರ್ವಾಸನೆ. ಅವನ ಮುಖಕ್ಕೆ ಅಂಗೈ ಹಚ್ಚಿ ದೂಡಲು ನೋಡಿ ದಳು ಸಾಧ್ಯವಾಗಲಿಲ್ಲ. ಸ್ವರ್ಗದಿಂದ ನರಕಕ್ಕೆ ಬಿದ್ದಿದ್ದಳು. ವಾಂತಿ ಬರುವಂತಾಯಿತು ವಯಕ್ ವಯಕ್...

"ಸಾವಕಾಶ ಗೌರೀ ಇಲ್ಲೆ ಈ ಬಟ್ಟಲದಾಗ ವಾಂತಿ ಮಾಡಿಕೋ. ಮಾರಿ ಇತ್ಲಾಗ ಹೊಳ್ಳಸು." ಪಾರಕ್ಕನಿಗೆ ಮುಟ್ಟಲು ಧೈರ್ಯವಾಗದೆ ನರ್ಸ ಕರೆಯಲು ಓಡಿದಳು.

"ನಿಮ್ಮತ್ತಿದು ಜಳಕ, ಶಿವಪೂಜಿ, ಊಟ ಆಗಬೇಕಲ್ಲ. ನಾ ಮನೀಗೆ ಹೋಗಿ ಬರ್ತೀನಿ. ಮಧು ನಿನ್ನ ಹತ್ತರ ಕುಂತಿರ್ತಾಳ ಹೋಗಲ್ಯಾ." ಮಾತನಾಡಲು ಸಾಧ್ಯವಾಗದ ಗೌರಿ ಗೋಣು ಹಾಕಿದಳು.

ಬಿಳಿಯ ಬಟ್ಟೆಯಲ್ಲಿ ಸುತ್ತಿ ಇಟ್ಟ ಗೊಂಬೆಯಂತೆ ಮಲಗಿದ್ದರೂ ಗೌರಿಯ ಮನಸ್ಸು ಚಲಿಸುತ್ತಿತ್ತು. ಎಲ್ಲೆಲ್ಲೋ ಹೋಗುತ್ತಿತ್ತು. ಕಳೆದ ದಿನಗಳನ್ನು ನೆನಪಿಸಿಕೊಂಡು ಅಳುತ್ತಿತ್ತು. ಮೈಗೆ ಆದ ಗಾಯ ಕಾಣುತ್ತದೆ ಚಿಕಿತ್ಸೆ ಮಾಡಿದರೆ ಮಾಯುತ್ತದೆ. ಆದರೆ ಮನಕ್ಕಾದದ್ದು...?

ಆ ದಿನವೂ ವಿವೇಕ ಊರಲ್ಲಿ ಇರಲಿಲ್ಲ. ಚೈನಿ ಮಾಡಲು ಬೆಂಗಳೂರಿಗೆ ಹೋಗಿದ್ದ. ಊರಲ್ಲಿರುವಾಗಲೂ ಅಷ್ಟೇ ಇಸ್ಪೇಟು, ಸೆರೆ, ಕ್ಲಬ್ಬು, ಗೆಳೆಯರು. ರಾತ್ರಿ ಹಾಸಿಗೆಯಲ್ಲಿ ಮಾತ್ರ ತನ್ನ ನೆನಪು. ತನ್ನ ಮನದ ಅಳಲನ್ನು, ಬೇಸರವನ್ನು ಮರೆಯಲು ಸಂಗೀತವೊಂದೇ ಗೌರಿಗಿದ್ದ ಸಂಗಾತಿ. ತವರಿನಿಂದ ಜೊತೆಗೆ ತಂಬೂರಿಯನ್ನೂ ತರಬೇಕೆನ್ನುವ ತನ್ನ ಆಸೆಯನ್ನು ವಿವೇಕ ಚಿವುಟಿ ಹಾಕಿದ್ದ. ಬ್ಯಾಗಿನ ತಳದಲ್ಲಿ ಶಾಸ್ತ್ರೀಯ ಸಂಗೀತದ ಕೆಲವು ಕ್ಯಾಸೆಟ್ ಮಾತ್ರ ತಂದಿದ್ದಳು. ಆ ದಿನ ಸುನಂದಾ ಪಟ್ನಾಯಿಕರ ಜೋಗಿ ಮತ ಜಾ ಹಾಡನ್ನು ತುಂಬ ತಲ್ಲೀನಳಾಗಿ ಕೇಳುತ್ತ ಮೈ ಮರೆತು ತಾನೂ ದನಿಗೂಡಿಸಿದ್ದಳು. ಧಡಾರನೇ ಬಾಗಿಲು ದೂಡಿ ಒಳಗೆ ಬಂದ ಅತ್ತೆ ಕೂಗಾಡಿದ್ದಳು.

"ಗೌರೀ ನಾಚಿಕಿ ಗೀಚಿಕಿ ಐತಿಲ್ಲೊ ನಿನಗ. ಹೊರಗ ಹಾಲಿನ್ಯಾಗ ನಿಮ್ಮ ಮಾವ, ಗುಮಾಸ್ತರು ಕುಂತಿರತಾರ. ಯಾರರೆ ಬರ್‍ತಿರತಾರ. ನೀನು ಪಾತರದವರಾಂಗ ದನಿ ತಗದು ಹಾಡಾಕ ಕುಂತೀ, ಇದು ಮನೆತನಸ್ತರ ಮನೀ ಐತಿ. ನೆನಪ ಇಟಕೋ. ಹಿಂಗೆಲ್ಲಾ ಹಾಡಬ್ಯಾಡಾ ಇನ್ನೊಮ್ಮೆ." ಸಂಗೀತಾನ ತನ್ನ ಜೀವ ಎಂದುಕೊಂಡವಳಿಗೆ ಎದೆ ಒಡೆದು ಚೂರಾಗಿತ್ತು. ಎದೆಯ ಮೇಲೆ ಕೈ ಇಟ್ಟು ನರಳಿದ ಗೌರಿಯ ಹತ್ತಿರ 'ಏನ ಬೇಕಕ್ಕಾ' ಎನ್ನುತ್ತ ಮಧು ಬಂದಳು.

ದೊಡ್ಡ ಮೀಸೆಯ, ಖಾಕಿ ವೇಷದ ಗಂಡಸೊಬ್ಬ ಹತ್ತಿರ ಬಂದಾಗ ಒಳಗೇ ನಡುಗಿದ್ದಳು ಗೌರಿ.

"ಗಂಡನ ಮನೀಯವರು ತ್ರಾಸ ಕೊಡತಿದ್ರೇನ ನಿಮಗ." ಅವಳ ನಡುಗುತ್ತಿದ್ದ ಕೈಯ್ಯನ್ನು ಅವ್ವ ಹಿಡಿದಿದ್ದಳು. ಇಲ್ಲವೆನ್ನುವಂತೆ ಗೌರಿ ತಲೆ ಆಡಿಸಿದಳು.

"ಮಾತಾಡ್ರಿ. ಬಾಯಿ ಬಿಟ್ಟು ಹೇಳ್ರಿ. ನಿಮ್ಮ ಹೇಳಿಕಿ ಬರಕೊಳ್ಳಾಕ ನಾ ಇಲ್ಲೆ ಬಂದೇನಿ. ಬೆಂಕಿ ನಿಮಗ ಹ್ಯಾಂಗ ಹತ್ತಿತು. ಏನೇನಾತು ಸಾಫ ಸಾಫ ಹೇಳ್ರಿ."

"ಸಂಜೀಮುಂದ ದೇವರಿಗೆ ದೀಪಾ ಹಚ್ಚು ಅಂದರು ಅತ್ತೀಯವರು. ಎಣ್ಣೀ ಬತ್ತಿ ಸರಿ ಮಾಡಿ ಕಡ್ಡಿ ಕೊರದೆ. ತಲೀ ತಿರಿಗಿ ಕಣ್ಣಿಗೆ ಕತ್ತಲಿ ಬಂತು, ಕೆಳಗ ಬಿದ್ದೆ. ಸೀರಿಗೆ ಬೆಂಕಿ ಹತ್ತಿತು. ಎಚ್ಚರ ತಪ್ಪಿತು. ನನಗ ಯಾರೂ ಬೆಂಕಿ ಹಚ್ಚಿಲ್ಲ."

ಗಂಡನ ಮನೆಯವರು ಗಂಡಾಂತರದಿಂದ ಪಾರಾಗಿದ್ದರು. ಎಷ್ಟು ಸಲ ಕೇಳಿದರೂ ಯಾರು ಕೇಳಿದರೂ ಇದೇ ಉತ್ತರ ಕೊಟ್ಟಿದ್ದಳು ಗೌರಿ.

"ಗೌರೀ ನೀ ಆರಾಮ ಅದೀಯಲ್ಲ. ನೀ ನೆಟ್ಟಗ ಆಗ್ತಿ ಅಂತ ಡಾಕ್ಟರರು ಹೇಳಿದಮ್ಯಾಲೆ ನನ್ನ ಜೀವದಾಗ ಜೀವ ಬಂತು. ನೀ ಏನೂ ತ್ರಾಸ ಮಾಡಿಕೋಬ್ಯಾಡಾ. ಇನ್ನೊಂದಿಷ್ಟು ದಿನಾ ಇಲ್ಲೇ ಇರು. ನಾನೂ ಬರ್ತಿರ್ತೀನಿ. ಪೂರ್ಣ ಆರಾಮ ಆದಮ್ಯಾಲೆ ನಮ್ಮಲ್ಲೆ ಕರಕೊಂಡ ಹೋಗ್ತೀನಿ. ದವಾಖಾನಿ ಬಿಲ್ ಎಲ್ಲಾ ನಾನs ಕೊಟ್ಟೀನಿ. ಈ ಸಾವಿರ ರೂಪಾಯಿ ಇಟಕೋ ನಿನ್ನ ಖರ್ಚಿಗೆ ಇರಲಿ." ವಿವೇಕ ರಮಿಸುವ ದನಿಯಲ್ಲಿ ಹೇಳಿ ಹೋಗಿದ್ದ. ಬೆವರು, ಸೆಂಟು, ಸಿಗರೇಟು, ಸೆರೆಯ ವಾಸನೆಯಿಂದ ಹೊರ ಬರಲು ಆಶಿಸಿದ್ದಳು ಗೌರಿ. ಅವತ್ತು ಹೋದ ವಿವೇಕ ಮತ್ತೆ ಬರಲೇ ಇಲ್ಲ.

*   *   *   *

"ಓs ಮೇಡಂ ಬರ್ರಿ ಒಳಗ ಬರ್ರಿ. ಅವ್ವಾ ಗೌರಕ್ಕ ಸಂಗೀತ ಕಲೀಲಿಕ್ಕೆ ಹೋಗತಿದ್ಲಲ್ಲ ಆ ಮೇಡಂ ಬಂದಾರ. ಹೊರಗ ಬಾ." ಮಧುವಿನ ಮುಖದಲ್ಲಿ ಉತ್ಸಾಹ ಇರಲಿಲ್ಲ.

"ಬರ್ರಿ ಒಳಗ. ಭಾಳ ದಿವಸಕ್ಕ ಭೆಟ್ಟಿ ಆತು." ಕಣ್ಣಾಲಿ ತುಂಬುತ್ತಿದ್ದ ನೀರು ಒರೆಸುತ್ತ ಪಾರಕ್ಕ ಹತ್ತಿರ ಕೂತಳು. 'ಊಹುಂ' ಅವರ

ಹೆಗಲನ್ನು ಮೃದುವಾಗಿ ಒತ್ತಿ ಭಾರತಿ ಹೇಳಿದಳು "ಗೌರಿ ಮುಂದ ನೀವು ಅಳಬಾರದು. ನೀವೇ ಆಕಿಗೆ ಧೈರ್ಯಾ ಹೇಳಬೇಕು. ಹೊಸಾ ಜೀವನಾ ಕೊಡಬೇಕು."

"ಏನ ಹೊಸಾ ಜೀವನಾ ಕೊಡಬೇಕ್ರಿ. ಜೀವ ಉಳದರರೆ ಯಾಕ ಈ ಸುಟ್ಟ ಮಾರಿ ಇಟಕೊಂಡ ನಾ ನಿಮುಗ ಭಾರ ಆದೆ ಅಂತೆ ಹೊಟ್ಟಿಬ್ಯಾನಿ ಹಚಿಕೊಂಡಾಳ. ಕೂಳು, ನೀರು ಬಿಟ್ಟು ಅಳತಾಳ. ನನಗಂತೂ ಗುಡ್ಡಾ ಹೊತ್ತಂಗ ಆಗೇದ. ಕೈ ಕಾಲ ಆಡವೊಲ್ಲವು. ಮತ್ತ ಮ್ಯಾಲೆ ಮಂದಿ ಮಾತಿ ನಿಂದ ಚುಚ್ಚತಾರ."

"ಸಮಾಜದಾಗ ಇಂಥಾದೆಲ್ಲಾ ಇದ್ದದ್ದರಿ ಪಾರಕ್ಕ. ಗಂಡನ್ನ ಬಿಟ್ಟ ಬಂದು ನಾನು ಸಾಕಷ್ಟು ಅನುಭವಿಸೇನಿ. ರಾಕ್ಷಸನಂತಾ ಗಂಡನ ಕೂಡ ಇರೂದಕಿಂತಾ ಮಂದೀ ಎದುರಿಸಿ ನಿಲ್ಲೊದು ಛೊಲೋ ಅನ್ನಿಸ್ತು ನನಗ. ನನ್ನ ಜೀವನಾ ನಾ ರೂಪಿಸಿಕೊಂಡೇನಿ, ಲೆಕ್ಚರರ ಆಗಿ ಸಂಗೀತ ಸೇವಾ ಮಾಡಿಕೋತ ಬದಕತೀನಿ. ಇದರೊಳಗ ನನಗ ಸಂತೋಷ ಅದ. ನೀವು ಏನ ಚಿಂತೀ ಮಾಡಬ್ಯಾಡ್ರಿ ಇನ್ನ. ಅವಳು ಡಿಗ್ರಿನೂ ಮುಗಿಸಲಿ. ಸಂಗೀತಾನೂ ಕಲೀಲಿ. ಕಾಲ ಬದಲಾಗಲಿಕ್ಕೆ ಹತ್ತೇದ. ಮಂದೀ ಮಾತಿಗೆ ಕಿಮ್ಮತ್ ಕೊಡಬ್ಯಾಡ್ರಿ. ಎಲ್ಲಿ ಮಲಿಗ್ಯಾಳ ನಮ್ಮ ಗೌರಿ. ನಾನು ಅಲ್ಲೆ ಹೋಗತೇನಿ. ನಾಳೆ ನಿಮ್ಮ ಯಜಮಾನ್ರಿಗೂ ಭೆಟ್ಟಿ ಆಗಿ ಹೇಳತೇನಿ, ಮೊದಲ ನಮ್ಮ ವಿದ್ಯಾರ್ಥಿಗೆ ಹವಾ ತುಂಬೂಣು. ಗೌರೀss."

ಹೊರಗಿನ ಮಾತು ಕೇಳಿಸಿಕೊಳ್ಳುತ್ತಿದ್ದ ಗೌರಿ ಎದ್ದು ಕುಳಿತಳು. ಕಣ್ಣಂಚಿನ ನೀರಿನೊಡನೆ ತುಟಿಯ ತುದಿಯ ನಗೆ ಸ್ಪರ್ಧಿಸುತ್ತಿತ್ತು.

* * * *

ಅಡ್ಡ ಬರುವ ಬಂಡೆಗಳು ಸುತ್ತುವ ಸುಳಿಯ ನಡುವೆ ನಿಧಾನವಾಗಿ ಹರಿದುಹೋಗುವ ನದಿಯ ಜುಳುಜುಳು ಸಪ್ಪಳದಂತೆ, ಚಿಗಿತು ಥಳಥಳಿಸುವ ಮಾವಿನ ಮರದ ಕೆಂದಳಿರನ್ನು ಹೊದ್ದು ಕುಳಿತ ಕೋಗಿಲೆಯ ಕುಹೂ ಕುಹೂ ರಾಗದಂತೆ, ತುಂಬು ಬೆಳದಿಂಗಳಿನಲ್ಲಿ ನಿಶ್ಯಬ್ದವನ್ನು ತೂರಿಕೊಂಡು

ಬರುವ ಕೊಳಲಿನ ಮಧುರ ಗಾನದಂತೆ ಗೌರಿಯು ಇಂಪಾದ ದನಿ ಏರುತ್ತ ಸಾಗಿ ತಾರಕಕ್ಕೇರಿ ತಟ್ಟನೆ ನಿಂತು ಬಿಟ್ಟಿತು. ಇಡೀ ಸಭೆ ಮೋಡಿಗೆ ಒಳಗಾದಂತೆ ಸ್ತಬ್ಧವಾಗಿತ್ತು. ಮರುಕ್ಷಣ ನೂರಾರು ಕೈಗಳು ಲಯಬದ್ಧವಾಗಿ ಬಿಟ್ಟೂ ಬಿಡದೆ ತಟ್ಟತೊಡಗಿದವು ರಪ್...ರಪ್...ರಪ್.

ಈ ಲೇಖಕಿಯ ಇತರ ಕೃತಿಗಳು

ಸಣ್ಣ ಕತೆ

- ಸಂಜೆಮಲ್ಲಿಗೆ — ೧೯೬೭, ೧೯೭೧
- ಬಯಲು-ಆಲಯ — ೧೯೭೩, ೧೯೭೪, ೧೯೭೫
- ಮರುವಿಚಾರ — ೧೯೭೮
- ಜಾತ್ರೆ ಮುಗಿದಿತ್ತು — ೧೯೮೧, ೧೯೯೩, ೧೯೯೭
- ಕಳಚಿ ಬಿದ್ದ ಪೈಜಣ — ೧೯೮೭
- ನೀಲಿಮಾ ತೀರ — ೧೯೯೨

ಹರಟೆ-ಪ್ರಬಂಧ

- ಅಜಗಜಾಂತರ — ೧೯೮೩

ಮಕ್ಕಳಿಗಾಗಿ

- ನಿಜಗುಣ ಶಿವಯೋಗಿ — ೧೯೭೪

ಸಂಪಾದನೆ

- ಪ್ರಶಾಂತ (ಶ್ರೀಮತಿ ಶಾಂತಾದೇವಿ ಮಾಳವಾಡ ಅಭಿನಂದನ ಗ್ರಂಥ) — ೧೯೮೨

'ಮಹಿಳಾ ಸಾಹಿತ್ತಿಕಾ' ಪ್ರಕಟಿತ ಕೃತಿಗಳು

೧.	ಧುಮ್ಮುಸು (ಕಾದಂಬರಿ) : ಗೀತಾ ನಾಗಭೂಷಣ	೧೯೯೪
೨.	ದಾಹತೀರ (ಕವನ) : ಮಾಲತಿ ಪಟ್ಟಣಶೆಟ್ಟಿ	೧೯೯೪
೩.	ಪ್ರವಾಹ (ಕಥೆ) : ಭಾಗೀರಥಿ ಹೆಗಡೆ	೧೯೯೫
೪.	ನನ್ನಂಥವರು (ಕವನ) : ಶೈಲಜಾ ಉಡಚಣ	೧೯೯೫
೫.	ಸುರಪುರ ತಾಲೂಕಿನ ಶಾಸನಗಳು (ಸಂಶೋಧನೆ) : ಹನುಮಾಕ್ಷಿ ಗೋಗಿ	೧೯೯೫
೬.	ನನ್ನೊಳಗಿನ ಕವಿತೆ (ಕವಿತೆ) : ವಿದ್ಯಾ ಕುಂದರಗಿ	೧೯೯೫
೭.	ವಾಸ್ತವ (ಕತೆ) : ಗಂಗಾ ಪಾದೇಕಲ್	೧೯೯೬
೮.	ಸಾರಸರಸ್ವತಿ (ಜೀವನ-ಸಾಧನೆ) : ವಿಜಯಾ ದಬ್ಬೆ	೧೯೯೬
೯.	ಥೇರೀಗಾಥಾ (ಅನು : ಕವನ) : ಮಧು ವೆಂಕಾರೆಡ್ಡಿ	೧೯೯೬
೧೦.	ಬಿಡುಗಡೆಯ ಸಡಗರ (ಹಾಸ್ಯ ಪ್ರಬಂಧ) : ಗುರುದೇವಿ ಹುಲೆಪ್ಪನವರಮಠ	೧೯೯೬
೧೧.	ಮಕ್ಕಳ ಶಿಕ್ಷಣ : ಚಿಂತನೆಗಳು (ಪ್ರಬಂಧ) : ಲಲಿತಾಂಬ ವೃಷಭೇಂದ್ರಸ್ವಾಮಿ	೧೯೯೭
೧೨.	ಕರಗದೀ ಕಾರಿರುಳು (ಕವನ) : ಕುಸುಮ ಕರಾಳೆ	೧೯೯೭
೧೩.	ಗಾಂಧೀ ಮಗಳು (ಕಥೆ) : ಶಾಂತಾದೇವಿ ಕಣವಿ	೧೯೯೭
೧೪.	ದಿಗಂತದಾಚೆ (ಅನು : ಪ್ರಬಂಧ) : ಸರಸ್ವತಿ ರಿಸಬೂಡ	೧೯೯೭
೧೫.	ಪಾಂಚಾಲಿ ಮತ್ತು ಇತರ ನಾಟಕಗಳು : (ನಾಟಕ) ವಿಜಯಾ ಸುಬ್ಬರಾಜ್	೧೯೯೮
೧೬.	ಶೈಲಜಾ ಉಡಚಣ ಅವರ ಸಮಗ್ರಕಾವ್ಯ (ಕವನ)	೧೯೯೮

ಕನ್ನಡ ಮಹಿಳಾಸಾಹಿತ್ಯ ಎರಡು ಸವಾಲುಗಳನ್ನು ಎದುರಿಸುತ್ತಲಿದೆ : ಪುರುಷರಷ್ಟು ಮುಕ್ತ ಗಂಭೀರವಾಗಿ ಬರೆಯದಿರುವುದು, ಪುರುಷರಂತೆ ಧಾವಿಸಿ ಪ್ರಕಾಶನ ಅವಕಾಶಗಳನ್ನು ದೊರಕಿಸಿಕೊಳ್ಳದಿರುವುದು. ಈ ಎರಡೂ ನೆಲೆಗಳಲ್ಲಿ ಮಹಿಳೆಗೆ `ಸಾಹಿತ್ಯಿಕ ನ್ಯಾಯ' ಒದಗಿಸಿ ಕೊಡುವುದಕ್ಕಾಗಿ ಅಸ್ತಿತ್ವಕ್ಕೆ ಬಂದಿದೆ, `ಮಹಿಳಾ ಸಾಹಿತ್ಯಿಕಾ'. ಮಹಿಳಾ ಸಾಹಿತ್ಯವನ್ನು ಕುರಿತು ಅಧ್ಯಯನ ನಡೆಸುವುದು, ಪ್ರಕಟಿಸುವುದು ಮಾತ್ರ ಈ ಸಂಸ್ಥೆಯ ಗುರಿಯಾಗಿದೆ.ಇದು ಆರಂಭದ ದಿನಗಳಲ್ಲಿ ಸೃಜನ - ವಿಮರ್ಶನ - ಸಂಶೋಧನ - ಅನುವಾದ ಸೇರಿ ವರ್ಷಕ್ಕೆ ಒಂದು ಸಾವಿರ ಪುಟಗಳಷ್ಟು ಸಾಹಿತ್ಯವನ್ನು ಪ್ರಕಟಿಸುತ್ತದೆ.

ಮಹಿಳೆಯ ಸಾಹಿತ್ಯಿಕ ಸಮಸ್ಯೆಗಳೂ ಅನೇಕ, ಸಾಮಾಜಿಕ ಸಮಸ್ಯೆಗಳೂ ಅನೇಕ. ಇವರು ಆಗಾಗ ಸೇರಿ ನಡೆಸುವ `ಚಿಂತನಗೋಷ್ಠಿ'ಗಳಿಂದ ಕಳೆದುಕೊಂಡ ಹಳೆಯ ದಾರಿಗಳನ್ನು ಹುಡುಕಬಹುದು. ಹೊಸ ದಾರಿಗಳನ್ನು ಹುಟ್ಟಿಸಬಹುದು. ಈ ದೃಷ್ಟಿಯಿಂದಲೂ ಬರಹಗಾರ್ತಿಯರನ್ನು ಸಂಘಟಿಸಿ, ಸಮಾಲೋಚನೆ ಕಮ್ಮಟಗಳನ್ನು ನಡೆಸಿ ಫಲಿತಗಳನ್ನು ಪ್ರಕಟಿಸುವುದು, ಈ ಸಂಸ್ಥೆಯ ಇನ್ನೊಂದು ಉದ್ದೇಶವಾಗಿದೆ.

ಆರ್ಥಿಕವಾಗಿ "ಲಾಭವಿಲ್ಲ - ನಷ್ಟವಿಲ್ಲ" ಈ ತತ್ವದ ನೆಲೆಗಟ್ಟಿನ ಮೇಲೆ ಅಸ್ತಿತ್ವಕ್ಕೆ ಬಂದ, ಮಹಿಳಾ ಸಾಹಿತ್ಯದ ಅಧ್ಯಯನ - ಪ್ರಕಾಶನಗಳ ಬಗೆಗೆ ಕ್ರಿಯಾತ್ಮಕವಾಗಿ ದುಡಿಯಲಿರುವ ಈ ಸಂಸ್ಥೆಗೆ ಎಲ್ಲ ಲೇಖಕಿಯರ ಸಹಾಯ ಸಹಕಾರಗಳನ್ನು ಅಪೇಕ್ಷಿಸುತ್ತೇವೆ.

ಹನುಮಾಕ್ಷಿ ಗೋಗಿ
ಸಾಹಿತ್ಯಿಕ ನಿರ್ದೇಶಕಿ